ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 18 ಗುರುವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 240 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4



ಮೈಸೂರು ಮಿತ್ರ ಗುರುವಾರ 18 ಡಿಸೆಂಬರ್ 2025

ವಿಶೇಷ ಮಕ್ಕಳ ಶಾಲೆಗೆ ಶುದ್ಧ ಕುಡಿಯುವ ನೀರಿನ ಯಂತ್ರ ವಿತರಣೆ



ಮಂಗಳವಾರ ಹುಟ್ಟುಹಬ್ಬ ಆಚರಿಸಿಕೊಂಡ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಸಮ್ಮುಖದಲ್ಲಿ ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಮಾತೃಮಂಡಳಿ ಶಿಶುವಿಕಾಸ ಕೇಂದ್ರದ ವಿಶೇಷ ಮಕ್ಕಳ ಶಾಲೆಗೆ ಎಸ್‌ಬಿಎಂ ಮಂಜು ಸ್ನೇಹ ಬಳಗದಿಂದ ಶುದ್ಧ ಕುಡಿಯುವ ನೀರಿನ ಯಂತ್ರವನ್ನು ವಿತರಿಸಲಾಯಿತು. ಈ ವೇಳೆ ಮಾಜಿ ಸಚಿವ ಸಾ.ರಾ. ಮಹೇಶ್, ಶಾಸಕ ಜಿ.ಡಿ.ಹರೀಶ್ ಗೌಡ, ಮಾಜಿ ಶಾಸಕ ಅಶ್ವಿನ್ ಕುಮಾರ್, ಮಹಾನಗರ ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು, ಪ್ರಿಯ, ದರ್ಶನ್, ಪ್ರಕಾಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು

ಸಿಪಿಐ(ಎಂ) ವತಿಯಿಂದ ಡಿ.21ಕ್ಕೆ ಪರ್ಯಾಯ ರಾಜಕಾರಣಕ್ಕಾಗಿ ಜನದನಿ ರ್‍ಯಾಲಿ

ಮೈಸೂರು, ಡಿ.17(ಎಂಕೆ)– ಭಾರತೀಯ ಕಮ್ಯೂನಿಸ್ಟ್ ಪಕ್ಷ–ಮಾರ್ಕಿಸ್ಟ್ (ಸಿಪಿಐ–ಎಂ)ದ ರಾಜ್ಯ ಸಮಿತಿ ವತಿಯಿಂದ ಡಿ.21ರಂದು ಬೆಂಗಳೂರಿನಲ್ಲಿ ಸ್ವಾತಂತ್ರ್ಯ ಉದ್ಯಾನವನದಲ್ಲಿ 'ಪರ್ಯಾಯ ರಾಜಕಾರಣಕ್ಕಾಗಿ ಜನದನಿ ರ್‍ಯಾಲಿ' ಶೀರ್ಷಿಕೆಯಡಿ ಬೃಹತ್ ಪ್ರತಿಭಟನಾ ಬಹಿರಂಗ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಜಿಲ್ಲಾ ಕಾರ್ಯದರ್ಶಿ ಜಗದೀಶ್‌ಸೂರ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಬುಧವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಪ್ರತಿಭಟನಾ ಬಹಿರಂಗ ಸಭೆಯಲ್ಲಿ ಸುಮಾರು 40 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಲಿದ್ದು, ಮುಖ್ಯಮಂತ್ರಿಗಳಿಗೂ ಆಹ್ವಾನ ನೀಡಿದ್ದೇವೆ ಎಂದರು.

ಮಧ್ಯಮ ಹಾಗೂ ಬಡ ರೈತರು, ಸಂಘಟಿತ ಮತ್ತು ಅಸಂಘಟಿತ ವಲಯದ ಕಾರ್ಮಿಕರು, ಗುತ್ತಿಗೆ ನೌಕರರು, ಕೂಲಿ ಕಾರ್ಮಿಕರು, ಮಹಿಳೆಯರು ಹಾಗೂ ವಿದ್ಯಾರ್ಥಿಗಳು ಕೂಡ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಸಿಪಿಐ(ಎಂ) ಪೊಲಿಟ್ ಸದಸ್ಯ ಯು. ವಾಸುಕಿ ಹಾಗೂ ರಾಜ್ಯದ ಸಿಪಿಐ(ಎಂ) ನಾಯಕರು ಭಾಷಣ ಮಾಡಲಿದ್ದಾರೆ ಎಂದು ತಿಳಿಸಿದರು.

ಪ್ರತಿಭಟನಾ ಬಹಿರಂಗ ಸಭೆಯಲ್ಲಿ ಚರ್ಚಿಸುವ ಉದ್ದೇಶದಿಂದಲೇ ನ.1ರಿಂದ ಡಿ.15ರವರೆಗೆ ಮನೆ–ಮನೆಗೆ ತೆರಳಿ ಜನರ ಸಮಸ್ಯೆಗಳನ್ನು ಆಲಿಸಿದ್ದೇವೆ. ಧರ್ಮಸ್ಥಳದಲ್ಲಿ ಎಲ್ಲಾ ಅಸಹಜ ಸಾವುಗಳು, ಭೂ–ಕಬಳಿಕೆ, ಮೈಕ್ರೋಫೈನಾನ್ಸ್ ಕುರಿತು ಸಮಗ್ರ ತನಿಖೆಗೆ ಆಗ್ರಹಿಸುವುದಲ್ಲದೆ ಕೃಷಿ ಬಿಕ್ಕಟ್ಟು, ಎಪಿಎಂಸಿ ತಿದ್ದುಪಡಿ ಕಾಯ್ದೆ, ಕಾರ್ಮಿಕರ ಹಕ್ಕುಗಳು, ನಿರುದ್ಯೋಗ, ಭ್ರಷ್ಟಾಚಾರ, ಶಿಕ್ಷಣ, ಆರೋಗ್ಯ, ಪಡಿತರ ವ್ಯವಸ್ಥೆ, ವಸತಿ ನಿವೇಶನ, ಮಹಿಳಾ ಸಬಲೀಕರಣ, ಕೋಮುವಾದ, ಬಡತನ ಸೇರಿದಂತೆ 20ಕ್ಕೂ ಹೆಚ್ಚು ವಿಚಾರಗಳ ಬಗ್ಗೆ ಚರ್ಚಿಸಿ, ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದರು.

ದೇಶದಲ್ಲಿ ನಿರುದ್ಯೋಗ ಹೆಚ್ಚಾಗುತ್ತಿದ್ದು, ಡೆಲಿವರಿ ಬಾಯ್‌ಗಳ ಸಂಖ್ಯೆ ಹೆಚ್ಚಾಗುತ್ತಿದೆ. ಅಭಿವೃದ್ಧಿ ಹೆಸರಿನಲ್ಲಿ ಒತ್ತುವರಿ, ಅರಣ್ಯೀಕರಣದ ಹೆಸರಿನಲ್ಲಿ ರೈತರ ಒಕ್ಕಲೆಬ್ಬಿಸಲಾಗುತ್ತಿದೆ. ದುಡಿಯುವ ಜನರ ಬದುಕು ಕಷ್ಟವಾಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದರಲ್ಲದೆ ಮೈಸೂರಿನಲ್ಲಿ ಫಿಲಂ ಸಿಟಿ ಮಾಡುತ್ತೇವೆ ಎಂದೇಳಿ ವರ್ಷಗಳೇ ಕಳೆಯುತ್ತಿದ್ದರೂ ಇನ್ನೂ ಪೂರ್ಣಗೊಂಡಿಲ್ಲ. ಬಹುತೇಕ ಕಾಮಗಾರಿಗಳು ಅರ್ಧಕ್ಕೆ ನಿಂತಿವೆ ಎಂದು ಬೇಸರ ಹೊರಹಾಕಿದರು.

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಮೈಸೂರು ಜಿಲ್ಲಾ ಸಮಿತಿ ಸದಸ್ಯರಾದ ಕೆ.ಬಸವರಾಜ್, ಜಿ.ಜಯರಾಂ, ಶಕುಂತಲಾ, ಸ್ಥಳೀಯ ಸಮಿತಿ ಸದಸ್ಯ ಜಿ.ರಾಜೇಂದ್ರ ಉಪಸ್ಥಿತರಿದ್ದರು.

ಮೃಗಾಲಯದ ಹುಲಿ 'ತಾಯಮ್ಮ'ನ ಸ್ಥಿತಿ ಗಂಭೀರ

ಮೈಸೂರು, ಡಿ.17(ಎಂಟಿವೈ)– ಮೈಸೂರು ಮೃಗಾಲಯದಲ್ಲಿದ್ದ 'ತಾಯಮ್ಮ' ಹುಲಿ ಆರೋಗ್ಯ ಸ್ಥಿತಿ ಹದಗೆಟ್ಟಿದ್ದು, ಚಿಕಿತ್ಸೆ ನೀಡಲಾಗುತ್ತಿದೆ ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರಾದ ಪಿ.ಅನುಷ ತಿಳಿಸಿದ್ದಾರೆ.

2021ರ ಮಾ.28ರಂದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ರಕ್ಷಿಸಲ್ಪಟ್ಟಿದ್ದ 4 ತಿಂಗಳ ಈ ಹುಲಿ ಮರಿಯನ್ನು ಮೈಸೂರು ಮೃಗಾಲಯದಲ್ಲಿ ಆರೈಕೆ ಮಾಡಲಾಗುತ್ತಿತ್ತು. ಆದರೆ ಕಳೆದ 4–5 ದಿನಗಳಿಂದ ಅನಾರೋಗ್ಯಕ್ಕೀಡಾಗಿ ಆಹಾರ ತ್ಯಜಿಸಿದೆ. ಆದರೂ ತಾಯಮ್ಮನ ಆರೈಕೆ ಮಾಡಲಾಗುತ್ತಿದೆ. ಇಂದು ಅದರ ಆರೋಗ್ಯ ಸ್ಥಿತಿ ಗಂಭೀರವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುತ್ತೂರು ಶ್ರೀಗಳಿಂದ ಆಶೀರ್ವಾದ...



ಮಳವಳ್ಳಿಯಲ್ಲಿ ನಡೆಯುತ್ತಿರುವ ಸುತ್ತೂರು ಶ್ರೀಶಿವರಾತ್ರೀಶ್ವರ ಶಿವಯೋಗಿ ಸ್ವಾಮೀಜಿ ಅವರ 1066ನೇ ಜಯಂತಿಯ ಮಹೋತ್ಸವಕ್ಕೆ ತೆರಳಿದ್ದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು. ಈ ವೇಳೆ ಕಾಂಗ್ರೆಸ್ ಮುಖಂಡ ರವಿಶಂಕರ್, ಆಶ್ರಯ ಸಮಿತಿ ಸದಸ್ಯ ಗುಣಶೇಖರ್, ರೂಪೇಶ್ ಉಪಸ್ಥಿತರಿದ್ದರು.

ನಿಧನ

ಗುಡ್ಡಪ್ಪ ಬೀರಲಿಂಗಣ್ಣ



ಮೈಸೂರು, ಡಿ.17– ಮೈಸೂರಿನ ತೊಣಚಿಕೊಪ್ಪಲಿನ ನಿವಾಸಿ, ಶ್ರೀ ಬೀರೇಶ್ವರ ಟ್ರಸ್ಟ್‌ನ ಮಾಜಿ ನಿರ್ದೇಶಕ, ಶ್ರೀ ಬಿಸಿಲು ಮಾರಮ್ಮನ ದೇವಸ್ಥಾನದ ಗುಡ್ಡಪ್ಪ ಬೀರಲಿಂಗಣ್ಣ(82) ಬುಧವಾರ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ, ಐವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮಾಜಿ ಮೇಯರ್ ಚಿಕ್ಕಣ್ಣ, ಶ್ರೀ ಬೀರೇಶ್ವರ ಟ್ರಸ್ಟ್ ಅಧ್ಯಕ್ಷ ಜವರಪ್ಪ, ಕಾರ್ಯದರ್ಶಿ ಕಾಳಪ್ಪ, ಖಜಾಂಚಿ ರವಿ, ಟ್ರಸ್ಟ್ ನಿರ್ದೇಶಕರು, ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಗೋಪಿ, ಕಾಂಗ್ರೆಸ್ ಮುಖಂಡ ಹರೀಶ್ ಮೊಗಣ್ಣ, ತೊಣಚಿಕೊಪ್ಪಲಿನ ಯಜಮಾನರು ಹಾಗೂ ಗ್ರಾಮಸ್ಥರು ಸಂತಾಪ ಸೂಚಿಸಿದ್ದಾರೆ.

ಅಂತ್ಯಕ್ರಿಯೆಯನ್ನು ಗುರುವಾರ ಮಧ್ಯಾಹ್ನ 12 ಗಂಟೆ ವೇಳೆಗೆ ತೊಣಚಿಕೊಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಎಸ್.ಪ್ರೇಮ ಲೀಲಮ್ಮ



ಮೈಸೂರು, ಡಿ.17– ಮೈಸೂರು ವಿದ್ಯಾರಣ್ಯಪುರಂನ 2ನೇ ಮೇನ್, 6ನೇ ಕ್ರಾಸ್ ನಿವಾಸಿ ಹಾಗೂ ದಿವಂಗತ ಸುಬ್ರಹ್ಮಣ್ಯಂ ಅವರ ಪತ್ನಿ ಶ್ರೀಮತಿ ಕೆ.ಎಸ್.ಪ್ರೇಮ ಲೀಲಮ್ಮ(88) ಅವರು ಇಂದು ಬೆಳಗ್ಗೆ ನಿಧನರಾದರು. ಇವರು ಪುತ್ರ ಹಾಗೂ ಅಪಾರ ಬಂಧುವರ್ಗ, ಮಿತ್ರರ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಮಧ್ಯಾಹ್ನವೇ ಚಾಮುಂಡಿಬೆಟ್ಟದ ತಪ್ಪಲಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿ.ಬೋಳೇಗೌಡ



ಕೆ.ಆರ್.ಪೇಟೆ, ಡಿ.17– ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲೂಕಿನ ಬೂಕನಕೆರೆ ಗ್ರಾಮದ ಹಿರಿಯ ಕಾಂಗ್ರೆಸ್ ಮುಖಂಡ ಬಿ.ಬೋಳೇಗೌಡ(74) ಇಂದು ಬೆಳಗ್ಗೆ ನಿಧನರಾದರು. ಇವರು ಪತ್ನಿ, ಬೂಕನಕೆರೆ ಗ್ರಾಪಂ ಅಧ್ಯಕ್ಷರಾಗಿದ್ದ ಸರಸ್ವತಿ, ಪುತ್ರ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಮೃತರು ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ ಮಾಜಿ ಉಪಾಧ್ಯಕ್ಷರಾಗಿದ್ದರು. ಅಲ್ಲದೆ ಕೆ.ಆರ್.ಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಇವರ ಅಂತ್ಯಕ್ರಿಯೆ ಇಂದು ಸಂಜೆ ಬೂಕನಕೆರೆ ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬ್ಯಾಂಕ್‌ಗಳು ವಿಲೀನವಾದ ಬಳಿಕ ಉಂಟಾಗಿರುವ

ರೈಲ್ವೆ ಪಿಂಚಣಿದಾರರ ಸಮಸ್ಯೆ ನಿವಾರಣೆಗೆ ಆಗ್ರಹ

ಮೈಸೂರು, ಡಿ.17(ಎಂಟಿವೈ)– ಬ್ಯಾಂಕ್‌ಗಳು ವಿಲೀನಗೊಂಡ ಪರಿಣಾಮ ಹಲವು ಪಿಂಚಣಿದಾರರು ತೊಂದರೆಗೀಡಾಗಿದ್ದು, ಕೂಡಲೇ ಅರ್ಹ ಪಿಂಚಣಿದಾರರಿಗೆ ಸೌಲಭ್ಯ ಒದಗಿಸುವಂತೆ ರೈಲ್ವೆ ಪಿಂಚಣಿದಾರರ ಅಸೋಸಿಯೇಷನ್ ಅಧ್ಯಕ್ಷ ಪಾರ್ಥಸಾರಥಿ ಒತ್ತಾಯಿಸಿದ್ದಾರೆ.



ಮೈಸೂರಿನ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈಲ್ವೆ ನೌಕರರ ಸಂಘದ ಆವರಣದಲ್ಲಿ ನಡೆದ 'ಪಿಂಚಣಿದಾರರ ದಿನ' ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ನಿವೃತ್ತ ನೌಕರರು.

ಮೈಸೂರಿನ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈಲ್ವೆ ನೌಕರರ ಸಂಘದ ಆವರಣದಲ್ಲಿ ರೈಲ್ವೆ ಪಿಂಚಣಿದಾರರ ವೆಲ್ಫೇರ್ ಅಸೋಸಿಯೇಷನ್ ಆಯೋಜಿಸಿದ್ದ 'ಪಿಂಚಣಿದಾರರ ದಿನ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಿವೃತ್ತ ನೌಕರರು ಹಾಗೂ ಕುಟುಂಬದ ಸದಸ್ಯರು ಪಿಂಚಣಿ ಸೌಲಭ್ಯ ಹಾಗೂ ಅದನ್ನು ಪಡೆಯುವ ವಿಧಾನದ ಬಗ್ಗೆ ತಿಳಿದುಕೊಳ್ಳಬೇಕು. ನಿವೃತ್ತರಿಗೆ ನಿಯಮಾನುಸಾರ ಪಿಂಚಣಿ ಸೌಲಭ್ಯ ಒದಗಿಸಲು ಕೆಲವು ಬ್ಯಾಂಕ್‌ಗಳು ವಿನಾಕಾರಣ ವಿಳಂಬ ಧೋರಣೆ ಅನುಸರಿಸುತ್ತಿವೆ. ಕೆಲವು ಬ್ಯಾಂಕ್‌ಗಳಲ್ಲಿ ಪಿಂಚಣಿದಾರರಿಗೆ ಮೋಸ ಆಗುತ್ತಿದೆ ಎಂಬ ಆರೋಪ ಕೇಳಿಬಂದಿದೆ ಈ ಹಿನ್ನೆಲೆಯಲ್ಲಿ ಪಿಂಚಣಿದಾರರು ಮೊದಲು ತಮಗೆ ಬರುವ ಪಿಂಚಣಿ ಮೊತ್ತ ಹಾಗೂ ಸೌಲಭ್ಯದ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಕೆಲ ವರ್ಷಗಳಿಂದ ಬ್ಯಾಂಕಿಂಗ್ ಕ್ಷೇತ್ರದಲ್ಲಾದ ಬದಲಾವಣೆಗಳಿಂದ ಹಲವು ಬ್ಯಾಂಕ್‌ಗಳು ಬೇರೆ ಬೇರೆ ಬ್ಯಾಂಕ್‌ನೊಂದಿಗೆ ವಿಲೀನಗೊಂಡಿವೆ. ಇದರಿಂದಾಗಿ ತಾಂತ್ರಿಕ ಸಮಸ್ಯೆ ಎಂದು ಹೇಳಿ ರೈಲ್ವೆ ಇಲಾಖೆ ನಿವೃತ್ತ ನೌಕರರಿಗೆ ಪಿಂಚಣಿ ಸೌಲಭ್ಯ ಸ್ಥಗಿತಗೊಳಿಸಲಾಗಿದೆ. ಇದರಿಂದ ಹಲವು ನಿವೃತ್ತ ನೌಕರರು ಹಾಗೂ ಅವಲಂಬಿತರು ಸಮಸ್ಯೆಗೆ ಸಿಲುಕಿದ್ದಾರೆ. ಹೋರಾಟದ ಮೂಲಕ ಸ್ಥಗಿತಗೊಂಡಿರುವ ಪಿಂಚಣಿ ಸೌಲಭ್ಯ ಪಡೆಯಬೇಕಾಗಿದೆ ಎಂದು ವಿಷಾದಿಸಿದರು. ರೈಲ್ವೆ ನೌಕರರ ನಿವೃತ್ತಿಯಾಗುವ ಮುನ್ನ ಕೊನೆ ತಿಂಗಳಲ್ಲಿ ಪಡೆದ ಸಂಬಳದಲ್ಲಿ ಶೇ.50ರಷ್ಟು ಪಿಂಚಣಿ ನೀಡಬೇಕು. ನಿವೃತ್ತ ನೌಕರರ ಪತ್ನಿಗೆ ಶೇ.30ರಷ್ಟು ಪಿಂಚಣಿ ಮೊತ್ತವನ್ನು ನೀಡಬೇಕಾಗಿದೆ. 1982ರ ಡಿ.17ರಂದು ಎನ್.ಎಸ್.ನಾಕಾರ ಅವರು ಪಿಂಚಣಿಗಾಗಿ ಹೋರಾಡಿದ ಫಲವಾಗಿ ಅಂದು ಸುಪ್ರೀಂಕೋರ್ಟ್ ಅಂದಿನ ಸಂಬಳಕ್ಕೆ ಅನುಗುಣವಾಗಿ ಪಿಂಚಣಿ ನೀಡಬೇಕೆಂದು ಆದೇಶಿಸಿತ್ತು. ಅದನ್ನು ಸ್ಮರಿಸುವ ಸಲುವಾಗಿ ಅಂದಿನಿಂದ ಪಿಂಚಣಿದಾರರ ದಿನವನ್ನು ಆಚರಿಸಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ರೈಲ್ವೆ ಪಿಂಚಣಿದಾರರ ವೆಲ್‌ಫೇರ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಜಿ.ಎಸ್. ಸ್ವಾಮಿನಾಥನ್, ಉಪಾಧ್ಯಕ್ಷ ಎಂ.ಗೋವಿಂದ ಹಾಗೂ ಪದಾಧಿಕಾರಿಗಳು, ಪಿಂಚಣಿದಾರರು ಉಪಸ್ಥಿತರಿದ್ದರು.

ಕೃ.ಪ. ಗಣೇಶಗೆ ಪಿಎಚ್.ಡಿ ಪದವಿ



ಮೈಸೂರು, ಡಿ. 17– ಮೈಸೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಡಾ. ಹೆಚ್.ಟಿ. ವೆಂಕಟೇಶಮೂರ್ತಿ ಮಾರ್ಗದರ್ಶನದಲ್ಲಿ, ಕೃ.ಪ. ಗಣೇಶ ಅವರು ಕಥಾಸ್ಪರ್ಧೆಯ ಕಥೆಗಳ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಲಾಲ್ ಮೆಮೋರಿಸ್ ಕ್ರಿಕೆಟ್ ಕಪ್ ವಿಜೇತರು...



ಮೈಸೂರಿನ ರೈಲ್ವೇ ಸ್ಟೇಡಿಯಂನಲ್ಲಿ ಇತ್ತೀಚೆಗೆ ನಡೆದ ಲಾಲ್ ಮೆಮೋರಿಸ್ ಕ್ರಿಕೆಟ್ ಕಪ್ 2025ರಲ್ಲಿ ಯಾದವಗಿರಿ ಗೆಳೆಯರ ಬಳಗ ತಂಡ ಪ್ರಥಮ ಸ್ಥಾನ ಗಳಿಸಿತು. ಚಿತ್ರದಲ್ಲಿ ಸತೀಶ್, ಮುರಗನ್, ದೀಪು, ಉಮೇಶ್, ಮಧು, ಕೃಷ್ಣ, ಚಂದು, ರಾಕಿ, ಹರೀಶ್, ರಘು, ರುದ್ರ ಹಾಗೂ ಇತರರನ್ನು ಕಾಣಬಹುದು.

ಜಕ್ಕೂರು ವಿಮಾನ ತರಬೇತಿ ಶಾಲೆ ಮೈಸೂರು ವಿಮಾನ ನಿಲ್ದಾಣಕ್ಕೆ ಸ್ಥಳಾಂತರಿಸುವುದು ಬೇಡ

ಹೋಟೆಲು ಮಾಲೀಕರ ಸಂಘ ಆಗ್ರಹ



ನಾರಾಯಣಗೌಡ

ಮೈಸೂರು, ಡಿ. 17 –ಬೆಂಗಳೂರಿನ ಜಕ್ಕೂರು ವಿಮಾನ ನಿಲ್ದಾಣದ ತರಬೇತಿ ಶಾಲೆಯನ್ನು ಮೈಸೂರು ವಿಮಾನ ನಿಲ್ದಾಣಕ್ಕೆ ಸ್ಥಳಾಂತರಿಸಲು ಸರಕಾರ ಚಿಂತನೆ ಮಾಡಿರುವುದನ್ನು ಕೈಬಿಡಬೇಕೆಂದು ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಆಗ್ರಹಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಇದರಿಂದ ಮೈಸೂರು ವಿಮಾನ ನಿಲ್ದಾಣ ಸ್ಥಗಿತವಾಗಿ ಮುಂದಿನ ದಿನಗಳಲ್ಲಿ ವಿಮಾನ ನಿಲ್ದಾಣವೇ ತರಬೇತಿ ಶಾಲೆಯಾಗಿ ಮಾರ್ಪಟ್ಟು ಸಂಪೂರ್ಣವಾಗಿ ಮುಚ್ಚಲ್ಪಡುತ್ತದೆ. ಜಕ್ಕೂರು ವಿಮಾನ ನಿಲ್ದಾಣದ ಭೂಮಿ ಗಗನಕ್ಕೇರಿದ್ದು ಆ ಭೂಮಿಯನ್ನು ಬಂಡವಾಳಶಾಹಿಗಳಿಗೆ ನೀಡುವುದರಿಂದ ಸರಕಾರಕ್ಕೂ ಒಳ್ಳೆಯ ಹೆಸರು ಬರುವುದಿಲ್ಲ.

ಮೈಸೂರಿನ ರನ್‌ವೇ ಕಾಮಗಾರಿಯನ್ನು ಬೇಗ ಮುಗಿಸಿ, ಮೈಸೂರು ವಿಮಾನ ನಿಲ್ದಾಣ ಸಂಪೂರ್ಣವಾಗಿ ಪ್ರಯಾಣಿಕರ ಮತ್ತು ಪ್ರವಾಸಿಗರ ನಿಲ್ದಾಣವಾಗಿ ಇರಬೇಕು. ಹಲವಾರು ಕೈಗಾರಿಕೆಗಳು ಇರುವುದರಿಂದ ಪ್ರವಾಸೋದ್ಯಮ ನಗರ, ಜಿಲ್ಲೆಯಾಗಿರುವುದರಿಂದ ಸರಕಾರ ಮತ್ತು ಮೈಸೂರಿನ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಜಕ್ಕೂರು ತರಬೇತಿ ಶಾಲೆಯನ್ನು ಮೈಸೂರು ವಿಮಾನ ನಿಲ್ದಾಣಕ್ಕೆ ಸ್ಥಳಾಂತರಿಸದೇ, ಹೆಚ್ಚಿನ ಆಸಕ್ತಿ ವಹಿಸಿ ಕೇಂದ್ರ ಸರಕಾರದ ಮೇಲೆ ಒತ್ತಡ ತಂದು ಮೈಸೂರಿನ ವಿಮಾನ ನಿಲ್ದಾಣಕ್ಕೆ ಕನಿಷ್ಠ 25 ಕ್ಕೂ ಹೆಚ್ಚು ಹೊಸ ವಿಮಾನಗಳು ಬರುವಂತೆ ಮಾಡಬೇಕಾಗಿ ಮೈಸೂರು ಹೋಟೆಲು ಮಾಲೀಕರ ಸಂಘ ಆಗ್ರಹಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.12.2025 ಗುರುವಾರ, ಮಳೆ ನಕ್ಷತ್ರ: ಮೂಲ, 16.12.2025 ರಿಂದ 28.12.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ,
ತಿಥಿ: ಚತುರ್ದಶಿ ನಕ್ಷತ್ರ: ಅನೂರಾಧ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

- **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಕ್ಕಳಲ್ಲಿ ಕಂಡು ಬರುವ ಆಟಿಸಂ, ಕುತ್ತಿಗೆ ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ಮೈಸೂರು ವಿಶ್ವವಿದ್ಯಾನಿಲಯ, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ :** ಕನ್ನಡ ಜೈನ ರಾಮಾಯಣ ಮತ್ತು ಆಧುನಿಕ ರಾಮಾಯಣ ಮಹಾಕಾವ್ಯಗಳ ತಾತ್ವಿಕ ಜಿಜ್ಞಾಸೆ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಪದ್ಮಾಶೇಖರ್, ಉಪಸ್ಥಿತರು : ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಅಧ್ಯಕ್ಷೆ ಪ್ರೊ. ಎಸ್.ಡಿ. ಶಶಿಕಲಾ, ಸ್ಥಳ: ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಸೆಮಿನಾರ್ ಹಾಲ್, ಬೆಳಗ್ಗೆ 10ಕ್ಕೆ.
- **ಶ್ರೀಸೂತ್ರ ಆಯುರ್ಧಾಮ :** ಕಿಡ್ನಿ ಸ್ಟೋನ್ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಉಚಿತ ವೈದ್ಯಕೀಯ ತಪಾಸಣಾ ಹಾಗೂ ಸಲಹಾ ಶಿಬಿರ, ಸ್ಥಳ: ಶ್ರೀ ಸೂತ್ರ ಆಯುರ್ಧಾಮ, ಚಾಮುಂಡಿಪುರಂ, ಬೆಳಗ್ಗೆ 10 ರಿಂದ.
- **ಸುಯೋಗ್ ಆಸ್ಪತ್ರೆ :** ಉಚಿತ ಪ್ರಾಸ್ಟೇಟ್ ಗ್ರಂಥಿ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.
- **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್ ಇಂಗ್ಲೀಷ್ ಮೀಡಿಯಂ ಸ್ಕೂಲ್ :** ಶಾಲಾ ವಾರ್ಷಿಕೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಪ್ರಕಟಣಾ ವಿಭಾಗದ ನಿರ್ದೇಶಕ ಮೊರಬದ ಮಲ್ಲಿಕಾರ್ಜುನ, ಮುಖ್ಯ ಅತಿಥಿಗಳು : ಶಿಲ್ಪಿ ಡಾ. ಅರುಣ್ ಯೋಗಿರಾಜ್, ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣ, ಸ್ಥಳ: ಜಗನ್ಮೋಹನ ಅರಮನೆ, ಬೆಳಗ್ಗೆ 10ಕ್ಕೆ.
- **ಸಹಕಾರ ಭಾರತಿ, ಮೈಸೂರು ವಿಭಾಗ :** ವಿಭಾಗೀಯ ಕಾರ್ಯಕಾರಿಣಿ ಸಭೆ, ಉದ್ಘಾಟನೆ : ರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಘಟಕದ ಪ್ರಮುಖ್ ಅಜಯ್ ನಿಖುಂಬ್, ಅಧ್ಯಕ್ಷತೆ : ಸಹಕಾರ ಭಾರತಿ ಜಿಲ್ಲಾಧ್ಯಕ್ಷ ವಿ. ವೆಂಕಟೇಶ್, ಮುಖ್ಯ ಅತಿಥಿಗಳು : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಸಾಣೂರು ನರಸಿಂಹ ಕಾಮತ್, ಮೋಹನ್ ಕುಂಬ್ಳೇಕರ್, ಬಿ. ಮಹದೇವಸ್ವಾಮಿ, ಎಸ್.ಆರ್. ನಾರಾಯಣಸ್ವಾಮಿ, ಶ್ರೀಮತಿ ಹೇಮಾಗಂಗಪ್ಪ, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.
- **ಸಪಸ ಸಂಗೀತ ವಿದ್ಯಾಲಯ, ಮೈಸೂರು, ಅಖಿಲ ಕರ್ನಾಟಕ ಸುಗಮ ಸಂಗೀತ ಒಕ್ಕೂಟ:** ಭಾವಗೀತೆಗಳ ಕಾರ್ಯಾಗಾರ, ಸ್ಥಳ: ಸಪಸ ಸಂಗೀತ ಶಾಲೆ, ಗಾನಭಾರತಿ ಹತ್ತಿರ, ಕುವೆಂಪುನಗರ, ಬೆಳಗ್ಗೆ 11 ಮತ್ತು ಸಂಜೆ 5 ರಿಂದ.
- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.
- **ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ :** ರಾಷ್ಟ್ರೀಯ ಗೊಂಬೆಯಾಟ ಉತ್ಸವ ಮೈಸೂರು, ಗೊಂಬೆಯಾಟ (ಪಪೆಟ್) ಕಾರ್ಯಾಗಾರ, ಸ್ಥಳ: ಹಾರ್ಡ್ವಿಕ್ ಶಾಲಾ ಆವರಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.
- **ರಾಜ್ ಫೌಂಡೇಷನ್ :** ಫ್ಯಾಶನ್ ಶೋ, ಸ್ಥಳ: ಮೈಸೂರು ದಸರಾ ವಸ್ತು ಪ್ರದರ್ಶನ ಕಲಾ ಮಂಟಪ, ಮಧ್ಯಾಹ್ನ 3 ರಿಂದ 8 ಗಂಟೆಯವರೆಗೆ
- **ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ :** ಮೈಸೂರು ಯೋಗ ಉತ್ಸವ, ತಪಸ್, ರೂಪಾಂತರದ ಬೆಂಕಿ, ಬೆಳಗ್ಗೆ 11ಕ್ಕೆ ಉತ್ಸವ ಉದ್ಘಾಟನೆ, ಮುಖ್ಯ ಅತಿಥಿಗಳು : ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ರಿಕ್ಕಿ ಕೇಜ್, ಇಂಡಿಯನ್ ಯೋಗ ಅಸೋಸಿಯೇಷನ್ ಉಪಾಧ್ಯಕ್ಷ ಎಸ್. ಶ್ರೀಧರನ್, ಉದ್ಯಮಿ ಎಂ. ಜಗನ್ನಾಥ ಶೆಣೈ, ನೈನ್‌ಸ್ಟಾರ್ಸ್ ಇನ್‌ಫಾರ್‌ಮೇಷನ್ ಟೆಕ್ನಾಲಜೀಸ್ ಅಧ್ಯಕ್ಷ ಗೋಪಾಲ್ ಕೃಷ್ಣನ್, ಅಧ್ಯಕ್ಷತೆ: ಆರ್ಷ ವಿಜ್ಞಾನ ಗುರುಕುಲಂ, ಯುಎಸ್ ಮತ್ತು ಸ್ವಾಮಿ ದಯಾನಂದ ಆಶ್ರಮದ ಸ್ವಾಮಿನಿ ಸ್ವಾತ್ಮಾವಿದ್ಯಾನಂದ, ಮ. 12.30ಕ್ಕೆ ವಸ್ತುಪ್ರದರ್ಶನ ಉದ್ಘಾಟನೆ, ಮುಖ್ಯ ಅತಿಥಿಗಳು: ಟಿಐಇ ಬೆಂಗಳೂರು ಅಧ್ಯಕ್ಷ ಮದನ್ ಪದಕಿ, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ 1ನೇ ಹಂತ.
- **ಹಾರ್ಡ್ವಿಕ್ ಪ್ರೌಢಶಾಲೆ, ಕಾವೇರಿ ಬಳಗ, ಹಿರಣ್ಮಯಿ ಪ್ರತಿಷ್ಠಾನ :** ಪ್ರಥಮ ಕನ್ನಡ–ಇಂಗ್ಲಿಷ್ ನಿಘಂಟುಕಾರ ಫರ್ಡಿನಾಂಡ್ ಕಿಟಲ್ ಸ್ಮರಣೆ, ಅಧ್ಯಕ್ಷತೆ : ಹಾರ್ಡ್ವಿಕ್ ಪ್ರೌಢಶಾಲೆ ಮುಖ್ಯ ಶಿಕ್ಷಕರಾದ ಶ್ರೀಮತಿ ಇಂದಿರಮ್ಮ, ಉದ್ಘಾಟನೆ : ಪತ್ರಕರ್ತ ದೊಡ್ಡನಹುಂಡಿ ರಾಜಣ್ಣ, ಮುಖ್ಯ ಅತಿಥಿಗಳು : ಡಾ. ಬಿ.ಸಿ. ವಿಜಯಕುಮಾರ್, ಕಲಾವಿದೆ ಡಾ. ಜಮುನಾರಾಣಿ ಮಿರ್ಲೆ, ಸ್ಥಳ: ಹಾರ್ಡ್ವಿಕ್ ಪ್ರೌಢಶಾಲೆ, ಮಧ್ಯಾಹ್ನ 3ಕ್ಕೆ.
- **ನಿರಂತರ ಫೌಂಡೇಷನ್ :** ನಿರಂತರ ರಂಗ ಉತ್ಸವ, ಸಂಜೆ 5ಕ್ಕೆ ದೇವಾನಂದ ವರಪ್ರಸಾದ ಮತ್ತು ನಿರಂತರ ಗೆಳೆಯರಿಂದ ಬಿ.ವಿ.ಕಾರಂತರ ರಂಗ ಗೀತೆಗಳು; ಸಂಜೆ 6:15ಕ್ಕೆ ಸಭಾ ಕಾರ್ಯಕ್ರಮ, ಉಪಸ್ಥಿತರು : ಹಿರಿಯ ಪತ್ರಕರ್ತ ಜಿ.ಪಿ. ಬಸವರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ, ಸಂಜೆ 7ಕ್ಕೆ ಜುಗಲ್ ಬಂದಿ – ನಾದ ಸಂಜೆ, ಕೊಳಲು: ರವಿಶಂಕರ್ ಮಿಶ್ರಾ, ಸಿತಾರ್: ಜುನೈನ್ ಖಾನ್, ತಬಲ: ರಿಷಿ ಪ್ರಸಾದ್ (ಆಸ್ಟೀನ್ ಟೆಕ್ಸಾಸ್ ಯು.ಎಸ್.ಎ), ಸ್ಥಳ: ಕಿರು ರಂಗಮಂದಿರ.
- **ವಿಸ್ಮಯ ಬುಕ್ ಹೌಸ್ :** ವಾಗ್ಮಿ ಪ್ರೊ. ಎಂ. ಕೃಷ್ಣೇಗೌಡ ಅವರ ನಾಲ್ಕು ಕೃತಿಗಳಾದ ಹೊಳೆಯ ನೆರಳು, ಹೊಂಗೆಯ ನೆರಳು, ಯಾಲಕ್ಕಿ ಗೊನೆ ಮತ್ತು ಅವರೆಯ ಸೊನೆ ಕೃತಿ ಬಿಡುಗಡೆ ಸಮಾರಂಭ, ಉದ್ಘಾಟನೆ : ಕರ್ನಾಟಕ ವಿಧಾನಸಭೆ ಮಾಜಿ ಅಧ್ಯಕ್ಷ ಕೆ.ಆರ್. ರಮೇಶ್ ಕುಮಾರ್, ಅಧ್ಯಕ್ಷತೆ : ಸಾಹಿತಿ ಮತ್ತು ಚಲನಚಿತ್ರ ನಿರ್ದೇಶಕ ಡಾ. ನಾಗತಿಹಳ್ಳಿ ಚಂದ್ರಶೇಖರ್, ಮುಖ್ಯ ಅತಿಥಿಗಳು : ಹಿರಿಯ ಕವಿ ಕೆ.ಸಿ. ಶಿವಪ್ಪ, ಉಪಸ್ಥಿತರು : ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕರಾದ ಪ್ರೊ. ನೀಲಗಿರಿ ತಳವಾರ, ಪ್ರೊ. ಎಂ. ಕೃಷ್ಣೇಗೌಡ, ಸನ್ಮಾನಿತರು : ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಅಂಶಿ ಪ್ರಸನ್ನಕುಮಾರ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಆಯೂಬ್ ಖಾನ್, ಚಿತ್ರ ಕಲಾವಿದ ಪ್ರಕಾಶ್ ಚಿಕ್ಕಪಾಳ್ಯ, ರಾಜ್ಯ ಒಕ್ಕಲಿಗರ ಸಂಘದ ಖಜಾಂಚಿ ಕೆ.ವಿ. ಶ್ರೀಧರ್, ಮೈಸೂರು ಜಿಲ್ಲಾ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಬಿ.ಆರ್. ಶಿವಕುಮಾರ್, ಶ್ರೀ ಕಾಲಭೈರವೇಶ್ವರ ಕನ್‌ಸ್ಟ್ರಕ್ಷನ್ ಮಾಲೀಕ ಕಡಕೊಳ ಕುಮಾರ್, ಸ್ಥಳ: ರೆಜೆಂಟಾ ಸೆಂಟ್ರಲ್ ಜವಾಜಿ ಹೋಟೆಲ್, ಸಂಜೆ 5.30ಕ್ಕೆ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.
- **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಸ್ಥಳ: ಶ್ರೀವೇಣುಗೋಪಾಲಸ್ವಾಮಿ ದೇವಸ್ಥಾನ, ತ್ಯಾಗರಾಜ ರಸ್ತೆ, ಸಂಜೆ 6.30 ರಿಂದ.
- **ಸಾಧನಾ ಮಂದಿರ:** ಸರಸ್ವತಿ ಪೂಜೆ ವಿಶೇಷ ತರಬೇತಿ, ಅರ್ಥ, ಸಂಕೇತ, ಮಹತ್ವ, ಪ್ರಾಮುಖ್ಯತೆ, ಪ್ರಯೋಜನ ಮತ್ತು ವಿಧಾನಗಳೊಂದಿಗೆ, ಸ್ಥಳ: ಸಂಜೆ 6.30ಕ್ಕೆ ಶ್ರೀ ಸಂಕಷ್ಟಹರ ಗಣಪತಿ ದೇವಸ್ಥಾನ, ಬಿಇಎಂಎಲ್‌ನಗರ, ಶ್ರೀರಾಮಪುರ, ಸಂಜೆ 7.30ಕ್ಕೆ ಮೈಸೂರು ಮೃಗಾಲಯ, ಎಸ್‌ವಿಎಂ ಲೇಔಟ್, ಕೆನರಾ ಬ್ಯಾಂಕ್ ಹಿಂಭಾಗ, ವಿವೇಕಾನಂದನಗರ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ ಮತ್ತು ಶ್ರೀ ನಾರಾಯಣಸ್ವಾಮಿ ದೇವಸ್ಥಾನಗಳಲ್ಲಿ ಧನುರ್ಮಾಸ ವಿಶೇಷ ಪೂಜೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.40 ಅರಿವಿನ ಶಿಖರ –ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಹಂಸಿನಿ ಎಸ್. ಕುಮಾರ್, ವ್ಯಾಖ್ಯಾನ–ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಕೋವಿಲಡಿ ಆರ್. ಕಲಾ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು.

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ವರ್ಷ ಬಿ. ಸುರೇಶ್ ಮತ್ತು ಅಮೂಲ್ಯ ಶಾಸ್ತ್ರಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತಿ, 6.50 ಕೃಷಿರಂಗ, ಕಿಸಾನ್‌ವಾಣಿ, ಪ್ರಾಯೋಜಕರು–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ. ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುತ್ತಾರೆ–ಕೆ.ಆರ್.ಪೇಟೆ ತಾಲೂಕು ಅಕ್ಕಿಹೆಬ್ಬಾಳು ಹೋಬಳಿ ನಾಟನಹಳ್ಳಿ ಗ್ರಾಮದ ಕೃಷಿಕ ದಂಪತಿ ಎನ್.ಎಸ್. ಗಂಗಾಧರ ಹಾಗೂ ಎಂ.ಜಿ. ರತ್ನಮ್ಮ. ಪ್ರಸ್ತುತಿ–ಎನ್. ಕೇಶವಮೂರ್ತಿ, 7.45 ವಿಧಾನಮಂಡದಲ್ಲಿ ಇಂದು, 8.00 ಸಂಸತ್ ಸಮೀಕ್ಷಾ, 8.15 ಯುವವಾಣಿ, 9.30 ಕನ್ನಡ ಭಾರತಿ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣದ ಪ್ರಸಾರ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 18 ಗುರುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


46

ಸಂಪುಟ: 46 | ಸಂಚಿಕೆ: 240 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ರಾಜ್ಯದಲ್ಲಿ 13 ಲಕ್ಷ ಬಿಪಿಎಲ್ ಕಾರ್ಡುಗಳು ಅನರ್ಹ

ಬೆಳಗಾವಿ, ಡಿ.17– ಕೇಂದ್ರ ಸರ್ಕಾರದ ಮಾನದಂಡಗಳ ಆಧಾರದ ಮೇಲೆ ಸುಮಾರು 13 ಲಕ್ಷ ಬಿಪಿಎಲ್ ಕಾರ್ಡುಗಳು ಅನರ್ಹವಾಗಿವೆ. ಇವುಗಳನ್ನು ಎಪಿಎಲ್‌ಗೆ ವರ್ಗಾವಣೆ ಮಾಡಿರುವ ಬಗ್ಗೆ ಚರ್ಚೆ ನಡೆದಿದೆ. ರಾಜ್ಯದಲ್ಲಿ ಅರ್ಹ ಫಲಾನುಭವಿಯನ್ನು ಶೀಘ್ರದಲ್ಲಿ ಗುರುತಿಸಬೇಕು. ಅನರ್ಹರನ್ನು ಮಾತ್ರ ತಾವು ಎಪಿಎಲ್ ಗೆ ವರ್ಗಾಯಿಸಬೇಕು ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಕೆ.ಹೆಚ್.ಮುನಿಯಪ್ಪ ಹೇಳಿದರು.



ಅಧಿಕಾರಿಗಳು ಮತ್ತು ನ್ಯಾಯಬೆಲೆ ಅಂಗಡಿಗಳ ಮಾಲೀಕರ ಸಂಘದ ಅಧ್ಯಕ್ಷರೊಂದಿಗೆ ಇಲ್ಲಿನ ಸುವರ್ಣ ವಿಧಾನಸೌಧದ ಸಭಾಂಗಣದಲ್ಲಿ ಬೆಳಗಾವಿ ಹಾಗೂ ಕಲಬುರ್ಗಿ ವಿಭಾಗದ ಪ್ರಗತಿ ಪರಿಶೀಲನೆ ಸಭೆಯಲ್ಲಿ ಅವರು ಮಾತನಾಡಿದರು. ಪಡಿತರ ಫಲಾನುಭವಿಗಳು ಕಡ್ಡಾಯವಾಗಿ ತಮ್ಮ ಕಾರ್ಡನ್ನು ಇ–ಕೆವೈಸಿ ಮಾಡಿಸಬೇಕು. ಅರ್ಹರು ಒಂದು ವೇಳೆ ಪರಿಷ್ಕರಣೆ ವೇಳೆ ಎಪಿಎಲ್‌ಗೆ ಬದಲಾಗಿದ್ದಲ್ಲಿ ಸಂಬಂಧಪಟ್ಟ ತಾಲೂಕಿನ ತಹಶೀಲ್ದಾರರ ಕಚೇರಿಗೆ ಭೇಟಿ ಮಾಡಿ ಮನವಿ ಸಲ್ಲಿಸಬೇಕು. ಅದನ್ನು ಪರಿಶೀಲನೆ ಮಾಡಿ ಪುನಃ ಬಿಪಿಎಲ್‌ಗೆ ವರ್ಗಾಯಿಸಲಾಗುತ್ತದೆ ಎಂದರು.

3.96 ಲಕ್ಷ ಪಡಿತರ ಕಾರ್ಡುಗಳನ್ನು ಒಂದು ತಿಂಗಳೊಳಗೆ ಪರಿಷ್ಕರಣೆ ಮಾಡಿ, ನೂತನ ಕಾರ್ಡ್ ನೀಡಲು ಕ್ರಮ ವಹಿಸಬೇಕು. ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಈ ವರ್ಷ ಪ್ರತಿ ಕ್ವಿಂಟಾಲ್‌ರಾಗಿಗೆ 4,886 ಬೆಲೆಯಂತೆ ಖರೀದಿಸಲಾಗುತ್ತಿದೆ. ಈಗಾಗಲೇ 6 ಲಕ್ಷ ಮೆಟ್ರಿಕ್ ಟನ್ ರಾಗಿ ಖರೀದಿಗೆ ರೈತರು ನೋಂದಣಿ ಮಾಡಿಕೊಂಡಿದ್ದಾರೆ. ಇದರಿಂದ ಒಟ್ಟು3,000 ಕೋಟಿಗಳೊಂದಿಗೆ 2.57 ಲಕ್ಷ ರೈತರಿಗೆ ಈ ಯೋಜನೆಯು ಪ್ರಯೋಜನವಾಗಲಿದೆ ಎಂದರು.


ಮುನಿಯಪ್ಪ

■ 6ನೇ ಪುಟಕ್ಕೆ

ಅಧಿಕಾರ ಹಸ್ತಾಂತರ ಸಂಬಂಧ ಕಾಂಗ್ರೆಸ್ ಹೈಕಮಾಂಡ್ ಹೊಸ ಸೂತ್ರ

ಸಿಎಂ ಸಿದ್ದರಾಮಯ್ಯ & ಡಿಸಿಎಂ ಶಿವಕುಮಾರ್ 1 ಟು 1 ಮಾತುಕತೆ

- ಆಪ್ತರ ಸಲಹೆಯಂತೆ ಸೋನಿಯಾ ಗಾಂಧಿ ಹೊಸ ನಿರ್ಧಾರ
- ಮಾಸಾಂತ್ಯ ಇಲ್ಲವೇ ಬಜೆಟ್ ಬಳಿಕ ನಿರ್ಧಾರ ಕೈಗೊಳ್ಳುವುದೊಳಿತು



ಬೆಂಗಳೂರು, ಡಿ.17– ವಿಧಾನ ಮಂಡಲದ ಚಳಿಗಾಲದ ಅಧಿವೇಶನದ ವೇಳೆ ಮತ್ತೆ ಸದ್ದು ಮಾಡುತ್ತಿರುವ ಅಧಿಕಾರ ಹಸ್ತಾಂತರ ಬಿಕ್ಕಟ್ಟಿಗೆ ಈ ವಾರಾಂತ್ಯದಲ್ಲಿ ಪರಿಹಾರ ಸಿಗಬಹುದು ಎಂದು ಹೇಳಲಾಗುತ್ತಿದೆ. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಕಾಂಗ್ರೆಸ್ ಹೈಕಮಾಂಡ್ ದೆಹಲಿಗೆ ಕರೆಸಿಕೊಳ್ಳಬಹುದು.

ಕಳೆದ ಭಾನುವಾರ ದೆಹಲಿಯ ರಾಮಲೀಲಾ ಮೈದಾನದಲ್ಲಿ ವೋಟ್ ಚೋರಿ ಸಂಬಂಧ ದೊಡ್ಡ ಮಟ್ಟದ ಸಮಾವೇಶವನ್ನು ಕಾಂಗ್ರೆಸ್ ನಡೆಸಿತ್ತು. ಆ ಸಮಾವೇಶಕ್ಕೆ ಸಿಎಂ ಮತ್ತು ಡಿಸಿಎಂ ಪಾಲ್ಗೊಂಡಿದ್ದರು. ಅದರಲ್ಲೂ ಡಿಕೆ ಶಿವಕುಮಾರ್ ಅವರು ದೆಹಲಿಯಲ್ಲಿ ಸಕ್ರೀಯವಾಗಿ ಪಾಲ್ಗೊಂಡಿದ್ದರು.

ಆ ವೇಳೆಯ ಭೋಜನಕೂಟದಲ್ಲಿ ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಿಯಾಂಕಗಾಂಧಿ ಜೊತೆ ಡಿ.ಕೆ. ಶಿವಕುಮಾರ್ ಮಾತನಾಡಿದ್ದರು.

ಸೋನಿಯಾ ನಿರ್ಧಾರ: ಬಹು ದಿನಗಳಿಂದ ಕರ್ನಾಟಕ ಕಾಂಗ್ರೆಸ್ಸಿನಲ್ಲಿ ಸದ್ದು ಮಾಡುತ್ತಿರುವ ಅಧಿಕಾರ ಹಸ್ತಾಂತರ ಇಲ್ಲವೇ ಮುಖ್ಯಮಂತ್ರಿ ಬದಲಾವಣೆ ಸಂಬಂಧ, ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಒಂದು ನಿರ್ಧಾರಕ್ಕೆ ಬಂದಿದ್ದಾರೆ. ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರನ್ನು ದೆಹಲಿಗೆ ಕರೆಸಿಕೊಂಡು, ತಮ್ಮ ಸಮ್ಮುಖದಲ್ಲಿ ಇಬ್ಬರು ನಾಯಕರು ಮಾತುಕತೆ ನಡೆಸುವಂತೆ ಸೂಚಿಸುವ ಸಾಧ್ಯತೆಯಿದೆ. ಈ ವೇಳೆ ಸಂಬಂಧಿಸಿದ ವಿಚಾರಕ್ಕೆ ಪಕ್ಕಾ ಸ್ಪಷ್ಟತೆ ಸಿಗುವ ಸಾಧ್ಯತೆಯಿದೆ.



ಸೋನಿಯಾಗಾಂಧಿ

ಅಧಿಕಾರ ಹಸ್ತಾಂತರ ವಿಚಾರ ದಿನದಿಂದ ದಿನಕ್ಕೆ ಸೂಕ್ಷ್ಮಗೊಳ್ಳುತ್ತಾ ಸಾಗುತ್ತಿದೆ ಎನ್ನುವ ಅರಿವು ಹೈಕಮಾಂಡಿಗೂ ಇದೆ. ಹಾಗಾಗಿ ರಾಜ್ಯದ ತಮ್ಮ ಆಪ್ತ ಮೂಲಗಳಿಂದ ಮಾಹಿತಿಯನ್ನು ಹೈಕಮಾಂಡ್ ಪಡೆದುಕೊಂಡಿದೆ. ಯಾರ ಪರವಾಗಿ ನಿಲುವು ತೆಗೆದುಕೊಂಡರೂ ಅದು ಇನ್ನೊಂದು ಬಣಕ್ಕೆ ಪಥ್ಯವಾಗುವ ಸಾಧ್ಯತೆ ಕಮ್ಮಿ. ಹಾಗಾಗಿ ತಮ್ಮ ■ 6ನೇ ಪುಟಕ್ಕೆ

ತಾಂತ್ರಿಕ ಸಮಸ್ಯೆಯಿಂದ ನೋಂದಣಿ ಕಾರ್ಯದಲ್ಲಿ ಸ್ವಲ್ಪ ವ್ಯತ್ಯಯ

ಆದರೂ ವಿಭಾಗ ಪತ್ರ, ದಾನ ಪತ್ರ ನೋಂದಣಿ ಸ್ಥಗಿತವಾಗಿಲ್ಲ

ಬೆಳಗಾವಿ, ಸುವರ್ಣ ವಿಧಾನಸೌಧ, ಡಿ.17(ಕೆಎಂಶಿ)– ರಾಜ್ಯದಲ್ಲಿ ಕಾವೇರಿ–2 ಮತ್ತು ಇ–ಸ್ವತ್ತು ಡಿಜಿಟಲ್ ಡೇಟಾ ಪರಸ್ಪರ ಲಿಂಕ್ ಮಾಡುವಲ್ಲಿ ಉಂಟಾಗಿರುವ ತಾಂತ್ರಿಕ ತೊಂದರೆ ಸರಿಪಡಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿ ಕೊಡಲಾಗುವುದು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ವಿಧಾನ ಪರಿಷತ್ತಿನಲ್ಲಿ ತಿಳಿಸಿದ್ದಾರೆ.


ಕೃಷ್ಣ ಬೈರೇಗೌಡ

ಪ್ರಶ್ನೋತ್ತರ ವೇಳೆಯಲ್ಲಿ ಡಿ.ಎಸ್. ಅರುಣ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಕಾವೇರಿ 2.0 ತಂತ್ರಾಂಶದಲ್ಲಿ ವಿಭಾಗಪತ್ರ ಹಾಗೂ ದಾನಪತ್ರಗಳ ನೋಂದಣಿ ಸ್ಥಗಿತವಾಗಿಲ್ಲ. ಆರ್‌ಟಿಸಿ, ಮೋಜಿಣಿ ನಕ್ಷೆ ಇ–ಸ್ವತ್ತು ಖಾತಾ, ಇ–ಆಸ್ತಿ ಖಾತಾ ಹಾಗೂ ಯುಎಲ್ ಎಮ್‌ಎಸ್–ಖಾತಾ ಹೊಂದಿರುವ ಸ್ವತ್ತುಗಳ ವಿಭಾಗಪತ್ರ ಹಾಗೂ ದಾನಪತ್ರ ಎಂದಿನಂತೆ ನೋಂದಣಿ ಆಗುತ್ತಿವೆ ಎಂದರು.

ರಾಮೋಜಿಗೌಡ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಉಪವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ಬಾಕಿಯಿರುವ ಪ್ರಕರಣಗಳನ್ನು ಕಳೆದ ಎರಡೂವರೆ ವರ್ಷದಲ್ಲಿ ಶೇ.80 ರಷ್ಟು ವಿಲೇವಾರಿ ಮಾಡಿದ್ದು, ಇನ್ನುಳಿದ ಬಾಕಿ ಪ್ರಕರಣಗಳನ್ನು ಆದಷ್ಟು ಶೀಘ್ರ ಇತ್ಯರ್ಥಗೊಳಿಸಲಾಗುವುದು ಎಂದರು.

ಎಸಿ ನ್ಯಾಯಾಲಯಗಳಲ್ಲಿ 62,857 ಪ್ರಕರಣಗಳು ಬಾಕಿ ಇವೆ. ಇವುಗಳನ್ನು ಸಮರೋಪಾದಿಯಲ್ಲಿ ವಿಲೇವಾರಿ ಮಾಡಿ 14,324ಕ್ಕೆ ಇಳಿಸಲಾಗಿದೆ. ಹೆಚ್ಚು ಪ್ರಕರಣಗಳು ಬಾಕಿ ಇರುವ ಜಿಲ್ಲೆಗಳ ಮೇಲ್ಮನವಿ ಪ್ರಕರಣಗಳನ್ನು ಸಮಾನಾಂತರ ವೃಂದದ ಇತರೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಎಎಸ್ ■ 6ನೇ ಪುಟಕ್ಕೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಗ್ಯದಲ್ಲಿ ಏರುಪೇರು

ಬೆಳಗಾವಿ, ಡಿ.17– ಬೆಳಗಾವಿ ಸುವರ್ಣ ಸೌಧದಲ್ಲಿ ಚಳಿಗಾಲದ ಅಧಿವೇಶನ ಭರದಿಂದ ಸಾಗುತ್ತಿರುವಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆರೋಗ್ಯದಲ್ಲಿ ದಿಢೀರ್ ಏರುಪೇರು ಕಂಡು ಬಂದಿದೆ. ತೀವ್ರ ಹೊಟ್ಟೆ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಅವರು ಬುಧವಾರ ಮಧ್ಯಾಹ್ನದಿಂದ ಸದನಕ್ಕೆ ಗೈರಾಗಿದ್ದು, ನಗರದ ಸರ್ಕ್ಯೂಟ್ ಹೌಸ್‌ನಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ.

ಬುಧವಾರ ಮಧ್ಯಾಹ್ನದ ಬಳಿಕ ಸಿಎಂ ಸಿದ್ದರಾಮಯ್ಯ ಅವರಿಗೆ ಹೊಟ್ಟೆ ನೋವು ಕಾಣಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ವೈದ್ಯರ ಸಲಹೆಯಂತೆ ಅವರು ಅಧಿವೇಶನಕ್ಕೆ ಹೋಗದೆ ಸರ್ಕ್ಯೂಟ್ ಹೌಸ್‌ನಲ್ಲಿ ವಾಸ್ತವ್ಯ ಹೂಡಿದ್ದಾರೆ. ಸಂಜೆಯವರೆಗೆ ನಿಗದಿಯಾಗಿದ್ದ ಎಲ್ಲಾ ಅಧಿಕೃತ ಕಾರ್ಯಕ್ರಮಗಳನ್ನು ರದ್ದುಗೊಳಿಸಲಾಗಿದ್ದು, ಮುಖ್ಯಮಂತ್ರಿಗಳು ಸಂಪೂರ್ಣ ವಿಶ್ರಾಂತಿಗೆ ಶರಣಾಗಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಸಿಎಂ ಪುತ್ರ ಡಾ. ಯತೀಂದ್ರ ಅವರು ಸರ್ಕ್ಯೂಟ್ ಹೌಸ್‌ಗೆ ಧಾವಿಸಿ ತಂದೆಯ ಆರೋಗ್ಯ ವಿಚಾರಿಸಿದ್ದಾರೆ. ■ 6ನೇ ಪುಟಕ್ಕೆ


ಇನ್ನು 15 ವರ್ಷ ಮೀರಿದ ಸರ್ಕಾರಿ ವಾಹನ ಗುಜರಿಗೆ

ಸರ್ಕಾರದಿಂದ ಅನುಮೋದನೆ



ಬೆಳಗಾವಿ, ಡಿ.17– ದೆಹಲಿಯಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ ವಾಹನಗಳ ಗುಜರಿ ನೀತಿ ಇದೀಗ ಕರ್ನಾಟಕದಲ್ಲೂ ಗಂಭೀರವಾಗಿ ಜಾರಿಗೆ ತರಲು ರಾಜ್ಯ ಸರ್ಕಾರ ಚಿಂತನೆಯಲ್ಲಿದೆ.

ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯದ ಎಲ್ಲಾ ಸರ್ಕಾರಿ ಇಲಾಖೆ, ನಿಗಮ, ಮಂಡಳಿ, ನಗರಸಭೆ, ಸರ್ಕಾರದ ಇತರೆ ಅಧೀನ ಸಂಸ್ಥೆಗಳಿಗೆ ಸೇರಿದ ನೋಂದಣಿಯಾಗಿ ಹದಿನೈದು (15) ವರ್ಷ ಮೀರಿದ ವಾಹನಗಳನ್ನು ಕಡ್ಡಾಯವಾಗಿ ರಾಜ್ಯದಲ್ಲಿ ಸ್ಥಾಪಿತವಾಗಿರುವ ರಿಜಿಸ್ಟರ್ಡ್ ವೆಹಿಕಲ್ ಸ್ಕ್ರ್ಯಾಪಿಂಗ್ ಫೆಸಿಲಿಟಿಗಳಲ್ಲಿಯೇ ಸ್ಕ್ರ್ಯಾಪ್ ಮಾಡಲು ರಾಜ್ಯ ಸರಕಾರವು ಕಳೆದ ಸೆಪ್ಟೆಂಬರ್ 12 ರಂದು ಅನುಮೋದನೆ ನೀಡಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾಹಿತಿ ನೀಡಿದರು.


ರಾಮಲಿಂಗಾರೆಡ್ಡಿ

ವಿಧಾನ ಪರಿಷತ್ತಿನಲ್ಲಿ ಬುಧವಾರ ಸದಸ್ಯ ಗೋವಿಂದ ರಾಜು ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಎನ್‌ಐಸಿ ಅವರು ಒದಗಿಸಿರುವ ಮಾಹಿತಿಯ ಪ್ರಕಾರ 2025 ಡಿಸೆಂಬರ್ ಅಂತ್ಯಕ್ಕೆ 15 ವರ್ಷಗಳು ಮೀರಿದ (ಸಾರಿಗೆ ಸಂಸ್ಥೆಗಳ ಬಸ್ಸುಗಳನ್ನು ಹೊರತುಪಡಿಸಿ) ಒಟ್ಟು 18,552 ಸರ್ಕಾರಿ ವಾಹನಗಳ ನೋಂದಣಿಯನ್ನು ಕೇಂದ್ರ ಸರಕಾರವು ವಾಹನ್ ಪೋರ್ಟಲ್‌ನಲ್ಲಿ ರದ್ದು ಪಡಿಸಲಾಗಿದೆ. ಈ 18,552 ವಾಹನಗಳ ಪೈಕಿ ■ 6ನೇ ಪುಟಕ್ಕೆ

6,280 ಕೋಟಿಯ ಪೂರಕ ಬಜೆಟ್‌ಗೆ ಅನುಮೋದನೆ ಕೋರಿದ ಸರ್ಕಾರ

ಬೆಳಗಾವಿ, ಡಿ.17– ವಿವಿಧ ಇಲಾಖೆಗಳ ಬೇಡಿಕೆಗಳನ್ನು ಪೂರೈಸಲು ರಾಜ್ಯ ಸರ್ಕಾರ 6,280 ಕೋಟಿ ರೂಪಾಯಿಗಳ ಪೂರಕ ಬಜೆಟ್‌ಗೆ ವಿಧಾನಸಭೆಯ ಅನುಮೋದನೆ ಕೋರಿದೆ.

ಇದರಲ್ಲಿ ರಾಜ್ಯ ಸರ್ಕಾರವು ಇಲಾಖೆಗಳು ಎತ್ತಿರುವ ಬೇಡಿಕೆಗಳಿಗಾಗಿ 3,421 ಕೋಟಿ ರೂಪಾಯಿ ಖರ್ಚು ಮಾಡಲಿದೆ. 2,240 ಕೋಟಿ ರೂಪಾಯಿ ಕೇಂದ್ರ ನೆರವಿನ ಅಡಿಯಲ್ಲಿ ಸೇರಿಸಲಾಗಿದೆ (ಒಟ್ಟು 5,661 ಕೋಟಿ ರೂಪಾಯಿಗಳು ಏಕೀಕೃತ ನಿಧಿಯಿಂದ ಬಿಡುಗಡೆಯಾಗಿವೆ). ನಂತರ 618 ಕೋಟಿ ರೂಪಾಯಿ ಮೀಸಲಿಟ್ಟ ನಿಧಿಯಿಂದ ಪೂರೈಸಲಾಗುತ್ತದೆ. ಇವುಗಳಲ್ಲಿ, ಹೆಚ್ಚಿನ ಹಣವನ್ನು ರಸ್ತೆ ಕಾಮಗಾರಿಗಳು ಮತ್ತು ರಾಜ್ಯದ ಕಬ್ಬು ರೈತರಿಗೆ ಆರ್ಥಿಕ ಸಹಾಯಕ್ಕಾಗಿ ಕೋರಲಾಗಿದೆ.

ರಾಜ್ಯ ಸರ್ಕಾರವು ಕೇಂದ್ರ ರಸ್ತೆ ಮತ್ತು ಮೂಲ ಸೌಕರ್ಯ ನಿಧಿಗೆ 434 ಕೋಟಿ ರೂ.ಗಳನ್ನು ಹಂಚಿಕೆ ಮಾಡಿದ್ದರೂ, ಕರ್ನಾಟಕದ ಸಕ್ಕರೆ ಕಂಪನಿಗಳಿಗೆ ಸರಬರಾಜು ಮಾಡುವಾಗ ಕಬ್ಬು ಬೆಳೆಯುವ ರೈತರ ಆರ್ಥಿಕ ಸಹಾಯಕ್ಕಾಗಿ 300 ಕೋಟಿ ರೂ.ಗಳನ್ನು ಮೀಸಲಿಟ್ಟಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರ ಹೆಲಿಕಾಪ್ಟರ್ ಪ್ರಯಾಣಕ್ಕಾಗಿ 6.4 ಕೋಟಿ ರೂಪಾಯಿ ವೆಚ್ಚ ಮತ್ತು ಭವಿಷ್ಯದ ಸಂಭಾವ್ಯ ■ 6ನೇ ಪುಟಕ್ಕೆ

ಬ್ಯಾಕ್ಟೀರಿಯಾ ಸೋಂಕಿನಿಂದ ಕುದುರೆ ಮರಿ ಸಾವು

ಮೈಸೂರು ರೇಸ್ ಕ್ಲಬ್‌ನಲ್ಲಿ ರೇಸ್ ಚಟುವಟಿಕೆ ಸ್ಥಗಿತ?

ಮೈಸೂರು, ಡಿ. 17– ಮೈಸೂರು ರೇಸ್ ಕ್ಲಬ್ (ಎಂಆರ್‌ಸಿ)ನಲ್ಲಿ ಎರಡು ವರ್ಷದ ಗಂಡು ಕುದುರೆ ಮರಿಯೊಂದು ಮಾರಕ ವೈರಸ್ ಸೋಂಕಿನಿಂದ ಸಾವನ್ನಪ್ಪಿದೆ. ಈ ಹಿನ್ನೆಲೆಯಲ್ಲಿ ಮೈಸೂರು ರೇಸ್ ಕ್ಲಬ್‌ನಲ್ಲಿ ರೇಸ್ ಚಟುವಟಿಕೆಗಳನ್ನು ಸದ್ಯಕ್ಕೆ ರದ್ದುಪಡಿಸಲು ಉದ್ದೇಶಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.




ಅಸ್ವಸ್ಥಗೊಂಡಿದ್ದ ಕುದುರೆ ಮರಿಯ ಸ್ಯಾಂಪಲ್ ಅನ್ನು ಹರಿಯಾಣದ ಹಿಸಾರ್‌ನ ಕುದುರೆಗಳಿಗೆ ಸಂಬಂಧಿಸಿದ ಐಸಿಎಆರ್ ನ್ಯಾಷನಲ್ ರಿಸರ್ಚ್ ಸೆಂಟರ್‌ಗೆ ಕಳುಹಿಸಲಾಗಿತ್ತು. ಕುದುರೆ ಮರಿಯ ಗ್ಲ್ಯಾಂಡರ್ಸ್ ಟೆಸ್ಟ್‌ನಲ್ಲಿ ಪಾಸಿಟಿವ್ ಬಂದಿದೆ. ಹಾಗಾಗಿ ಇಂತಹ ಅಪಾಯಕಾರಿ ಬ್ಯಾಕ್ಟೀರಿಯಾದಿಂದ ಪಾರಾಗಬೇಕಾದರೆ ತ್ವರಿತ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕಾದ ಅನಿವಾರ್ಯತೆ ಎದುರಾಗಿದೆ. ■ 6ನೇ ಪುಟಕ್ಕೆ

ಕರ್ನಾಟಕದಲ್ಲಿ ಕುಸಿದ ನಿರುದ್ಯೋಗ ದರ

ದೇಶದಲ್ಲೇ 2ನೇ ಸ್ಥಾನ

ನವದೆಹಲಿ, ಡಿ.17– ಉದ್ಯೋಗ ಕ್ಷೇತ್ರದಲ್ಲಿ ದೇಶದ ಇತರೆ ರಾಜ್ಯಗಳ ಪೈಕಿ ಕರ್ನಾಟಕ ಅತ್ಯುತ್ತಮ ಸಾಧನೆ ಮಾಡಿದ್ದು. ಅತೀ ಕಡಿಮೆ ನಿರುದ್ಯೋಗ ದರ ಹೊಂದಿರುವ ರಾಜ್ಯಗಳ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದುಕೊಂಡಿದೆ.

ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ಬಿಡುಗಡೆ ಮಾಡಿರುವ 'ಆವರ್ತಕ ಕಾರ್ಮಿಕ ಬಲ ಸಮೀಕ್ಷೆ' (PLFS – ಜುಲೈ–ಸೆಪ್ಟೆಂಬರ್ 2025) ವರದಿಯಲ್ಲಿ ಈ ಮಹತ್ವದ ಅಂಶ ಬೆಳಕಿಗೆ ಬಂದಿದೆ. ಲೋಕಸಭೆಯಲ್ಲಿ ನಡೆಯುತ್ತಿರುವ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಅಂಕಿ–ಅಂಶ ಹಾಗೂ ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ಈ ಬಗ್ಗೆ ಮಾಹಿತಿ ನೀಡಿದೆ.



ಜುಲೈ–ಸೆಪ್ಟೆಂಬರ್ 2025 ರ ಆವರ್ತಕ ಕಾರ್ಮಿಕ ಬಲ ಸಮೀಕ್ಷೆಗಳು ಪ್ರಸ್ತುತ ಸಾಪ್ತಾಹಿಕ ಸ್ಥಿತಿಯಡಿಯಲ್ಲಿ 15 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ವ್ಯಕ್ತಿಗಳಿಗೆ ಅಖಿಲ ಭಾರತ ನಿರುದ್ಯೋಗ ದರವನ್ನು ಶೇ.5.2 ಎಂದು ನಿಗದಿಪಡಿಸಿದೆ. ಅದರಂತೆ ದೇಶದ ಗ್ರಾಮೀಣ ಪ್ರದೇಶಗಳಲ್ಲಿ ಶೇ.4.4ಕ್ಕೆ ಹೋಲಿಸಿದರೆ ನಗರಗಳು ಹೆಚ್ಚಿನ ಒತ್ತಡವನ್ನು (ಶೇ.6.9) ಎದುರಿಸುತ್ತಲೇ ಇದೆ,

ಈ ಪೈಕಿ ಕರ್ನಾಟಕದ ಗ್ರಾಮೀಣ ನಿರುದ್ಯೋಗ ಪ್ರಮಾಣ ಶೇ.2.5 ರಷ್ಟಿದ್ದರೆ, ನಗರದ ನಿರುದ್ಯೋಗ ಪ್ರಮಾಣ ಶೇ.3.3 ರಷ್ಟಿದೆ. ರಾಜ್ಯವು ಶೇ.57.3 ರ ಕಾರ್ಮಿಕ ಬಲ ಭಾಗವಹಿಸುವಿಕೆಯ ದರ ಮತ್ತು ಶೇ.55.6 ರ ಕಾರ್ಮಿಕ ಜನಸಂಖ್ಯಾ ಅನುಪಾತವನ್ನು ಸಹ ದಾಖಲಿಸಿದೆ. ಇದು ಆರ್ಥಿಕ ಚಟುವಟಿಕೆಯಲ್ಲಿ ಬಲವಾದ ತೊಡಗಿಸಿಕೊಳ್ಳುವಿಕೆಯನ್ನು ಪ್ರತಿಬಿಂಬಿಸುತ್ತದೆ. ಗುಜರಾತ್ ಶೇ.2.2 ರಷ್ಟು ಕಡಿಮೆ ನಿರುದ್ಯೋಗ ದರದೊಂದಿಗೆ ರಾಷ್ಟ್ರೀಯ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಗುಜರಾತ್ ಶೇ.2.2, ಕರ್ನಾಟಕ ಶೇ.2.8, ತಮಿಳುನಾಡು ಶೇ.5.7. ತೆಲಂಗಾಣ ಶೇ.5.7 ಕೇರಳ ಶೇ.8.0 ಮತ್ತು ಆಂಧ್ರ ಪ್ರದೇಶ ಶೇ.8.2 ನಿರುದ್ಯೋಗ ದರ ಹೊಂದಿದ್ದು, ಇದರೊಂದಿಗೆ ದಕ್ಷಿಣ ಭಾರತದ ಇತರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ಉತ್ತಮ ಸ್ಥಿತಿಯಲ್ಲಿದೆ. ■ 6ನೇ ಪುಟಕ್ಕೆ

ಮಹಿಳೆ ಮೇಲೆ ಹಲ್ಲೆ; ಮನೆಗೆ ಬೆಂಕಿ ಹಚ್ಚಿದ ಪ್ರಕರಣಕ್ಕೆ ಬಿಗ್ ಟ್ವಿಸ್ಟ್


ಪತ್ನಿ ಹತ್ಯೆಗೆ ಪತಿಯೇ ಸುಪಾರಿ; ಮೂವರ ಬಂಧನ

ಕೇವಲ ಆರೇ ಗಂಟೆಯಲ್ಲಿ ಪ್ರಕರಣ ಭೇದಿಸಿದ ಮೇಟಗಳ್ಳಿ ಪೊಲೀಸರು

ಮೈಸೂರು, ಡಿ.17(ಆರ್‌ಕೆ)– ಮೈಸೂರಿನ ಬಿಎಂಶ್ರೀ ನಗರದಲ್ಲಿ ನಿನ್ನೆ ರಾತ್ರಿ ಒಂಟಿ ಮಹಿಳೆ ಮೇಲೆ ಹಲ್ಲೆ ನಡೆಸಿ, ಮನೆಗೆ ಬೆಂಕಿ ಹಚ್ಚಿದ್ದ ಪ್ರಕರಣ ಹೊಸ ತಿರುವು ಪಡೆದಿದ್ದು, ಪತಿಯೇ, ಪತ್ನಿ ಹತ್ಯೆಗೆ ಸುಪಾರಿ ನೀಡಿದ ಆತಂಕಕಾರಿ ವಿಚಾರ ಬೆಳಕಿಗೆ ಬಂದಿದೆ.

ಪತ್ನಿ ಹತ್ಯೆಗೆ ಸುಪಾರಿ ನೀಡಿದ ಪತಿ ಮಹೇಶ್(44) ಹಾಗೂ ಆಕೆಯ ಹತ್ಯೆಗೆ ಯತ್ನಿಸಿದ ವಿರಾಜಪೇಟೆಯ ಭಾಸ್ಕರ್ ಮತ್ತು ಅಭಿಷೇಕ್ ಎಂಬುವರನ್ನು ಮೇಟಗಳ್ಳಿ ಠಾಣೆ ಪೊಲೀಸರು ಘಟನೆ ನಡೆದ ಕೇವಲ 6 ಗಂಟೆಯಲ್ಲಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ವಿವರ: ಮೈಸೂರಿನ ಬಿ.ಎಂ.ಶ್ರೀನಗರದ 3ನೇ ಮೇನ್, 14ನೇ ಕ್ರಾಸ್‌ನ ಮನೆಯ 3ನೇ ಮಹಡಿಯಲ್ಲಿ ವಾಸವಿದ್ದ ನಾಗರತ್ನ ಅವರ ಮನೆಗೆ ಮಂಗಳವಾರ ಸಂಜೆ 7 ಗಂಟೆ ಸುಮಾರಿಗೆ ನುಗ್ಗಿದ ಇಬ್ಬರು ಮುಸುಕುಧಾರಿಗಳು ಆಕೆಯ ಮೇಲೆ ಹಲ್ಲೆ ನಡೆಸಿ, ಮನೆಯ ಸಿಲಿಂಡರ್ ಸೋರಿಕೆ ಮಾಡಿ, ಬೆಂಕಿ ಹಚ್ಚಿದ್ದಲ್ಲದೇ ಮನೆಯೊಳಗೆ ಪೆಟ್ರೋಲ್ ಸುರಿದು ಪರಾರಿಯಾಗಿದ್ದರು.


ಸಂತಸದ ಸಮಯದಲ್ಲಿ ನಾಗರತ್ನ ಮತ್ತು ಮಹೇಶ್.

ಇಬ್ಬರು ಮುಸುಕುಧಾರಿಗಳು ಓಡಿಹೋಗುವುದನ್ನು ಅಕ್ಕಪಕ್ಕದವರು ಗಮನಿಸಿದ್ದರು. ಅದೇ ವೇಳೆ ನಾಗರತ್ನ ಅವರ ಮನೆಯಲ್ಲಿ ಬೆಂಕಿ ಹೊತ್ತಿ ಉರಿಯುತ್ತಿದ್ದರಿಂದ ಅಲ್ಲಿಗೆ ಹೋಗಿ ನೋಡಿದಾಗ ನಾಗರತ್ನ ತೀವ್ರವಾಗಿ ಗಾಯಗೊಂಡು ನರಳುತ್ತಿದ್ದರು. ತಕ್ಷಣ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದಲ್ಲದೆ, ಮೇಟಗಳ್ಳಿ ಪೊಲೀಸರು ಮತ್ತು ಅಗ್ನಿಶಾಮಕ ದಳಕ್ಕೆ ಮಾಹಿತಿ ರವಾನಿಸಿದ್ದರು.

ಬನ್ನಿಮಂಟಪ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿದ್ದರು. ಅದೇ ವೇಳೆ ಮೇಟಗಳ್ಳಿ ಠಾಣೆ ಪೊಲೀಸರು ಹಾಗೂ ಬಿಎಂಶ್ರೀ ನಗರದಲ್ಲೇ ಪಾನಿಪೂರಿ ■ 6ನೇ ಪುಟಕ್ಕೆ

ನನಗೆ ಕಿಂಚಿತ್ತು ಬೆಲೆ ಕೊಡದವಳು ಬದುಕಿರಬಾರದು...!

ನನ್ನ ಪತ್ನಿ ನಾಗರತ್ನ ದುರಹಂಕಾರಿ. ನನ್ನನ್ನು ಗುಲಾಮನಂತೆ ನಡೆಸಿಕೊಳ್ಳುತ್ತಿದ್ದಳು. ಪಾನೀಪುರಿ ವ್ಯಾಪಾರ ಮಾಡಿ ಗಳಿಸಿದ ಹಣವನ್ನು ನನ್ನಿಂದ ಕಿತ್ತುಕೊಂಡು ಬಡ್ಡಿ ವ್ಯವಹಾರ ಮಾಡುತ್ತಿದ್ದಳು. ನಾನೆ ಸಂಪಾದನೆ ಮಾಡಿದರೂ ಪ್ರತಿಯೊಂದಕ್ಕೂ ಆಕೆಯ ಮುಂದೆ ಕೈಚಾಚುವ ದಯಾನೀಯ ಪರಿಸ್ಥಿತಿ ನನ್ನದು. ಯಾರಾದರೂ ಮನೆಗೆ ಬಂದಾಗ ಅವರೆದುರೂ ನನ್ನ ಹಿಯ್ಯಾಳಿಸಿ ಮಾತನಾಡುತ್ತಿದ್ದಳು. ಇದರಿಂದ ಬೇಸತ್ತು ಆಕೆಯ ಕೊಲೆ ಮಾಡಿಸಲು ನಿರ್ಧರಿಸಿದೆ ಎಂದು ಮಹೇಶ್ ಪೊಲೀಸರಿಗೆ ತಿಳಿಸಿದ್ದಾನೆ.

ಇದಕ್ಕಾಗಿ ತನಗೆ ಪರಿಚಯವಿರುವ ವಿರಾಜಪೇಟೆಯ ಭಾಸ್ಕರ್ ಮತ್ತು ಅಭಿಷೇಕ್‌ನನ್ನು ಕರೆಸಿಕೊಂಡು, ಪತ್ನಿಯ ಹತ್ಯೆಗೆ 5 ಲಕ್ಷ ಸುಪಾರಿ ಕೊಟ್ಟಿದ್ದೆ. ಅದರಂತೆ ಅವರು ಮಂಗಳವಾರ ಸಂಜೆ ಸ್ಕೆಚ್ ಹಾಕಿ ಕೃತ್ಯವೆಸಗಿದ್ದಾರೆ. ಆಕೆಯ ಕೊಂದು, ಸಾಕ್ಷ್ಯ ನಾಶ ಮಾಡಲೆಂದು ಮನೆಯಲ್ಲಿದ್ದ ಅಡುಗೆ ಗ್ಯಾಸ್ ಸಿಲಿಂಡರ್ ಸೋರಿಕೆ ಮಾಡಿ ಬೆಂಕಿ ಹೊತ್ತಿಸಿದ್ದಲ್ಲದೆ, ತಾವು ತಂದಿದ್ದ ಪೆಟ್ರೋಲ್ ಸುರಿದು ಪರಾರಿಯಾಗಿದ್ದಾರೆ.

ಭಾಸ್ಕರ್ ಮತ್ತು ಅಭಿಷೇಕ್ ಅಪರಾಧ ಕೃತ್ಯಗಳಲ್ಲಿ ಹೊಸಬರಾದ ಕಾರಣ ಉದ್ದೇಶಿತ ಕೊಲೆ ಯತ್ನದಲ್ಲಿ ವಿಫಲರಾಗಿದ್ದಾರೆ. ಘಟನೆ ಬಳಿಕ ಅವರಿಗೆ ವ್ಯವಸ್ಥೆ ಮಾಡಿದ್ದ ಮನೆಯಲ್ಲೇ ರಾತ್ರಿ ಮಲಗಿದ್ದರು. ಆದರೆ ಪೊಲೀಸರ ಮಿಂಚಿನ ಕಾರ್ಯಾಚರಣೆಯಲ್ಲಿ ಎಲ್ಲರೂ ಬಂಧನಕ್ಕೊಳಗಾಗಿದ್ದಾರೆ. ಗಾಯಗೊಂಡಿರುವ ನಾಗರತ್ನ ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಅಪ್ಪ : ಮಗ, ನಾನು ನಿನಗೊಂದು ಹೆಣ್ಣು ನೋಡಿದ್ದೇನೆ. ಆಕೆ ರೂಪವತಿ, ಗುಣವತಿ, ಐಶ್ವರ್ಯವತಿ, ಸುಜ್ಞಾನವತಿ...

ಮಗ : ಅಪ್ಪ ನಾನೊಂದು ಹುಡುಗಿಯನ್ನು ಲವ್ ಮಾಡಿದ್ದೀನಿ. ಆಕೆ ಈಗ ಗರ್ಭವತಿ...!!

ಮೈಸೂರು ಮಿತ್ರ

ಗುರುವಾರ, 18 ಡಿಸೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಜೊತೆಗಿರುವ ರುಕ್ಮಿಣಿಗಿಂತ ಮರೆಯಾದ ರಾಧೆಯೇ ಹೆಚ್ಚು ಕಾಡುವುದು. ರಾಧೆಗಾಗಿ ಕಾದವರೆಲ್ಲ ಕೃಷ್ಣರೇ...

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪ್ರಯತ್ನಕ್ಕೆ ಪರಮೇಶ್ವರನೂ ಸಹಾಯ ಮಾಡುವನು.

ನಿಮ್ಮ ಪತ್ರಗಳು

ಸಜ್ಜನ ರಾಜಕಾರಣಿಯಾಗಿದ್ದ ಶಾಮನೂರು ಶಿವಶಂಕರಪ್ಪ

ಮಾನ್ಯರೆ,



ರಾಜ್ಯದ ಅತ್ಯಂತ ಸಂಭಾವಿತ ರಾಜಕಾರಣಿಗಳಲ್ಲಿ ಒಬ್ಬರೆನಿಸಿದ್ದ ಹಿರಿಯ ರಾಜಕೀಯ ಮುತ್ಸದ್ದಿ ಶಾಮನೂರು ಶಿವಶಂಕರಪ್ಪನವರ ನಿಧನ ನಿಜಕ್ಕೂ ನೋವಿನ ಸಂಗತಿ.

ದೇಶದ ಅತೀ ಹಿರಿಯ ವಯಸ್ಸಿನ ಶಾಸಕರಾಗಿದ್ದ ಶಿವಶಂಕರಪ್ಪನವರು ತಮ್ಮ 95 ವರ್ಷಗಳ ಸುದೀರ್ಘ ಬದುಕಿನಲ್ಲಿ 6 ಬಾರಿ ಶಾಸಕರಾಗಿ ಹಾಗೂ ಒಂದು ಬಾರಿ ಲೋಕಸಭಾ ಸದಸ್ಯರಾಗಿ ರಾಜ್ಯ ಹಾಗೂ ದೇಶದ ರಾಜಕೀಯ ಚರಿತ್ರೆಯಲ್ಲಿ ಅಳಿಸಲಾಗದ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ. ಓರ್ವ ದಿಟ್ಟ ಹಾಗೂ ಪ್ರಾಮಾಣಿಕ ರಾಜಕಾರಣಿಯಾಗಿದ್ದ ಶಿವಶಂಕರಪ್ಪನವರು ಯಾವುದೇ ಕಾರಣಕ್ಕೂ ತಮ್ಮ ಧ್ಯೇಯ ಮತ್ತು ಸಿದ್ಧಾಂತಗಳ ಜೊತೆ ರಾಜೀ ಮಾಡಿಕೊಳ್ಳದ ಓರ್ವ ಅಪರೂಪದ ರಾಜಕಾರಣಿಯೆನಿಸಿದ್ದರು. ಎಲ್ಲಾ ರಾಜಕೀಯ ಪಕ್ಷಗಳ ನಾಯಕರ ಜೊತೆ ಸೌಹಾರ್ದ ಸಂಬಂಧ ಹೊಂದಿದ್ದ ಅವರನ್ನು ರಾಜಕೀಯ ವಲಯದಲ್ಲಿ 'ಅಜಾತ ಶತ್ರು' ಎಂದೇ ಕರೆಯಲಾಗುತ್ತಿತ್ತು. ಜವಳಿಗಳ ನಾಡಾಗಿದ್ದ ದಾವಣಗೆರೆಯನ್ನು ಶಿಕ್ಷಣ ಕಾಶಿಯನ್ನಾಗಿ ರೂಪಿಸಿದ ಕೀರ್ತಿಯೂ ಅವರಿಗೆ ಸಲ್ಲುತ್ತದೆ. ಅವರು ತಮ್ಮ ಕಾರ್ಯಕ್ಷೇತ್ರ ದಾವಣಗೆರೆಯಲ್ಲಿ ಕಟ್ಟಿ ಬೆಳೆಸಿರುವ ಬಾಪೂಜಿ ಶಿಕ್ಷಣ ಸಂಸ್ಥೆ ಇಡೀ ದೇಶದಲ್ಲೇ ಒಂದು ಮಾದರಿ ಶಿಕ್ಷಣ ಸಂಸ್ಥೆಯಾಗಿದೆ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷದ ಖಜಾಂಚಿಯಾಗಿ ದೀರ್ಘ ಕಾಲ ಸೇವೆ ಸಲ್ಲಿಸಿದ ದಾಖಲೆ ಕೂಡ ಅವರು ನಿರ್ಮಿಸಿದ್ದಾರೆ. ಅವರ ನೇರ ನಡೆ, ನುಡಿ ಕೆಲವರಿಗೆ ಅಪಥ್ಯವೆನ್ನಿಸಿದ್ದರೂ ಸಹ, ಅದಕ್ಕಾಗಿ ತಲೆ ಕೆಡಿಸಿಕೊಳ್ಳದೇ ಇದ್ದದ್ದನ್ನು ಇದ್ದ ಹಾಗೇ ಹೇಳಿ ಬಿಡುತ್ತಿದ್ದರು. ಕಾಂಗ್ರೆಸ್‌ನಿಂದ ಪ್ರಾರಂಭವಾದ ಅವರ ರಾಜಕೀಯ ಬದುಕಿನಲ್ಲಿ ಅವರೆಂದೂ ಪಕ್ಷ ತೊರೆಯಲಿಲ್ಲ. ಪಕ್ಷದ ಓರ್ವ ನಿಷ್ಠಾವಂತ ನಾಯಕನಾಗಿ ಅವರ ದಾವಣಗೆರೆ ಜಿಲ್ಲೆಯಲ್ಲಿ ಮಾತ್ರವಲ್ಲದೇ ಇಡೀ ರಾಜ್ಯದಲ್ಲೇ ಗಮನ ಸೆಳೆದರು. ವೀರಶೈವ ಮತ್ತು ಲಿಂಗಾಯತ ಪಂಗಡಗಳು ಒಂದೇ ಎಂದು ನಂಬಿದ್ದ ಅವರು ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷರಾಗಿ ಕೂಡ ಕಾರ್ಯ ನಿರ್ವಹಿಸಿದ್ದಾರೆ. ಇಂತಹ ಸರಳ ಮತ್ತು ಸಜ್ಜನ ರಾಜಕಾರಣಿ ಇಡೀ ದೇಶಕ್ಕೆ ಮಾದರಿಯಾಗಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಕೋರೋಣ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ವಿವೇಕಾನಂದ ನಗರ, ಮೈಸೂರು

ಮಕ್ಕಳ ಮೇಲೆ ಎಐ ದುರುಪಯೋಗ: ಪ್ರತ್ಯೇಕ ಕಾನೂನು ಅಗತ್ಯ

ಮಾನ್ಯರೆ,

ಭಾರತದಲ್ಲಿ ಮಕ್ಕಳ ಕುರಿತು ಅಶ್ಲೀಲ ವಿಡಿಯೊಗಳನ್ನು ಚಿತ್ರೀಕರಿಸುವುದು, ಇಂತಹ ವಿಡಿಯೊಗಳನ್ನು ಇಟ್ಟುಕೊಳ್ಳುವುದು ಅಥವಾ ಹಂಚುವುದು ಪೋಕ್ಸೋ ಕಾಯ್ದೆಯಡಿ ಅಪರಾಧ. ಈ ಕಾಯಿದೆ ಮಕ್ಕಳ ರಕ್ಷಣೆಗೆ ಸಹಾಯಕ. ಆದರೆ ಹೊಸ ತಂತ್ರಜ್ಞಾನ ಅದರಲ್ಲೂ ಎಐಯಿಂದ ಸೃಷ್ಟಿಯಾದ ಡೀಪ್‌ಫೇಕ್ ಚಿತ್ರಗಳು, ನಕಲಿ ವಿಡಿಯೊಗಳು ಮತ್ತು ಇತರ ಕೃತಕ ಚಿತ್ರಗಳ ಬಗ್ಗೆ ನೇರವಾಗಿ ನಿಯಂತ್ರಣ ಮಾಡುವ ಪ್ರತ್ಯೇಕ ಕಾನೂನು ಭಾರತದಲ್ಲಿ ಇನ್ನೂ ಇಲ್ಲ. ಇದು ಪೋಷಕರಲ್ಲಿ ಆತಂಕ ಮೂಡಿಸಿದೆ.ಮಕ್ಕಳನ್ನು ತೋರಿಸುವ ನಕಲಿ ದೌರ್ಜನ್ಯ ವಿಡಿಯೊಗಳನ್ನು ನಿರ್ಮಿಸುವುದು, ಇನ್ನೂ ಗಂಭೀರ ಅಪಾಯ. ಎಐ ಮೂಲ ಚಿತ್ರವನ್ನು ಬದಲಿಸಿ, ನಕಲಿ ದೃಶ್ಯಗಳನ್ನು ಸೇರಿಸುವುದಕ್ಕೆ ತುಂಬಾ ಸುಲಭ. ಇದರಿಂದ ನೈತಿಕ ಸಮಸ್ಯೆಗಳು, ಕಾನೂನು ಪ್ರಶ್ನೆಗಳು ಉದ್ಭವಿಸುತ್ತಿವೆ. ಈ ಕಾರಣಕ್ಕೆ ಎಐ ದುರುಪಯೋಗವೂ ಹೆಚ್ಚಿದೆ. 2025ರಲ್ಲಿ ಸರ್ಕಾರ ಈ ಕುರಿತು ನೂತನ ಕಾನೂನು ತರಲು ಯೋಚಿಸಿದ್ದರೂ ಇಲ್ಲಿವರೆಗೆ ಏನೂ ಕಾರ್ಯರೂಪಕ್ಕೆ ಬಂದಿಲ್ಲ. ಜಗತ್ತಿನ ಅನೇಕ ದೇಶಗಳಲ್ಲೂ ಡೀಪ್‌ಫೇಕ್ ದುರುಪಯೋಗ ಗಂಭೀರ ಸಮಸ್ಯೆಯೆಂದು ಮನಗಂಡು ಇದರ ವಿರುದ್ಧ ಕಠಿಣ ಕ್ರಮ ಮತ್ತು ಕಾನೂನು ಜಾರಿಗೊಳಿಸಿವೆ.

–ಡಾ.ಎಚ್.ಕೆ.ವಿಜಯಕುಮಾರ್, ಮೈಸೂರು.

ಈ ಸ್ಥಳದಲ್ಲಿ ಸಾರ್ವಜನಿಕರು ಎಚ್ಚರಿಕೆ ವಹಿಸಬೇಕು

ಮಾನ್ಯರೆ,

ಮೈಸೂರು ನಗರದ ಪ್ರತಿಷ್ಠಿತ ರಸ್ತೆಗಳಲ್ಲಿ ಒಂದಾಗಿರುವ ದೊಡ್ಡಗಡಿಯಾರ ಮಾರ್ಗದಿಂದ ಸಂಗಮ್ ಚಿತ್ರಮಂದಿರ, ಸಬರ್ಬನ್ ಬಸ್ ನಿಲ್ದಾಣಕ್ಕೆ ತಲುಪುವ ರಸ್ತೆಯಲ್ಲಿ ವಿಪರೀತವಾಗಿ ಪಾದಚಾರಿ ಮಾರ್ಗಗಳಲ್ಲಿ ವ್ಯಾಪಾರ ವಹಿವಾಟು ನಡೆಯುವುದರಿಂದ ಸಾಮಾನ್ಯವಾಗಿ ಜನಜಂಗುಳಿ ಹೆಚ್ಚಾಗಿರುತ್ತದೆ. ಇದನ್ನೇ ಗುರಿಯಾಗಿಟ್ಟುಕೊಂಡು ಕೆಲವು ಕಿಡಿಗೇಡಿಗಳು ಸಾರ್ವಜನಿಕರು, ಮಹಿಳೆಯರು, ಹಿರಿಯ ನಾಗರಿಕರು, ಮಕ್ಕಳು, ಮುಗ್ಧ ಜನರನ್ನೊಳಗೊಂಡಂತೆ ಗ್ರಾಮೀಣ ಭಾಗದ ಸಾರ್ವಜನಿಕರು ಸೇರಿ ಪ್ರತಿನಿತ್ಯ ಬರುವ ವಿದ್ಯಾರ್ಥಿಗಳನ್ನು ಹಿಂಬಾಲಿಸಿ ಅವರ ಬಳಿ ಇರುವ ಪರ್ಸ್‌ಗಳು ಸೇರಿ ಅನೇಕ ಬೆಲೆ ಬಾಳುವ ಆಭರಣ ವಸ್ತುಗಳನ್ನು ಕಳ್ಳತನ ಮಾಡುತ್ತಾರೆ. ಆದ್ದರಿಂದ ಸಂಬಂಧಪಟ್ಟ ನಗರ ಪಾಲಿಕೆ ಅಧಿಕಾರಿಗಳು ಮತ್ತು ನಗರ ಪೊಲೀಸ್ ಅಧಿಕಾರಿಗಳು ಕೂಡಲೇ ಈ ರಸ್ತೆಯ ಪಾದಚಾರಿ ಮಾರ್ಗಗಳಲ್ಲಿ ವ್ಯಾಪಾರ ವಹಿವಾಟುಗಳನ್ನು ತೆರವುಗೊಳಿಸುವ ಮೂಲಕ ಸಾರ್ವಜನಿಕರಿಗೆ ರಕ್ಷಣೆ ಒದಗಿಸಲು ಮುಂದಾಗಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

ಮೊಟ್ಟೆ ಬಗ್ಗೆ ಸರ್ಕಾರ ನಿಖರ ಮಾಹಿತಿ ನೀಡಲಿ

ಮಾನ್ಯರೆ,

ಕೋಳಿ ಮೊಟ್ಟೆಯಲ್ಲಿ ಕ್ಯಾನ್ಸರ್‌ಕಾರಕ ಅಂಶ ಪತ್ತೆಯಾಗಿದೆ ಎಂಬ ಆತಂಕಕಾರಿ ಸಂಗತಿಯೊಂದು ಸುದ್ದಿ ಮಾಧ್ಯಮಗಳು ಸೇರಿದಂತೆ ಅಂತರ್ಜಾಲ ಸುದ್ದಿ ತಾಣಗಳು ಮತ್ತು ಯುಟ್ಯೂಬ್‌ನಲ್ಲಿ ಪ್ರಸಾರವಾಗಿದೆ. ಈ ಬಗ್ಗೆ ಸಾರ್ವಜನಿಕರು ಆತಂಕಗೊಂಡಿದ್ದಾರೆ. ಇಷ್ಟು ವರ್ಷಗಳಲ್ಲಿ ಇಲ್ಲದ್ದು ಈಗ ದಿಢೀರನೆ ಈ ಅಂಶ ಬೆಳಕಿಗೆ ಬಂದಿರುವುದರ ಹಿಂದೆ ಕಾಣದ ಕೈಗಳ ಮಾಫಿಯಾ ಇರಬಹುದು. ಸರ್ಕಾರ ಈ ಕೂಡಲೇ ತಜ್ಞ ಆಹಾರ ಸುರಕ್ಷತಾ ಅಧಿಕಾರಿಗಳಿಂದ ಈ ಬಗ್ಗೆ ಸೂಕ್ತ ಪರೀಕ್ಷೆಗಳನ್ನು ನಡೆಸಬೇಕು. ಆದರೆ ಕೆಲವು ಪಶುವೈದ್ಯರು ಹೇಳುವಂತೆ ಮಾಂಸದ ಕೋಳಿ ಮತ್ತು ಮೊಟ್ಟೆ ಕೋಳಿಗಳಿಗೆ ನೈಟ್ರೊಫ್ಯೂರನ್ಸ್ ಆಧಾರಿತ ದ್ರಾವಣ ಮತ್ತು ಔಷಧಿಗಳ ಬಳಕೆ ಮಾಡುತ್ತಾರೆ. ಇದರಲ್ಲಿ ಕ್ಯಾನ್ಸರ್‌ಕಾರಕ ಅಂಶ ಇರಬಹುದು ಎನ್ನುವ ಅನುಮಾನ ವ್ಯಕ್ತಪಡಿಸುತ್ತಾರೆ. ಈ ಬಗ್ಗೆ ಸರ್ಕಾರ ನಿಖರ ಮಾಹಿತಿಯನ್ನು ಸಾರ್ವಜನಿಕರಿಗೆ ತಿಳಿಸುವಂತಾಗಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು



ರಾಘವೇಂದ್ರ ಸಿ.ಎಸ್.
ಕನ್ನಡ ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಮಕ್ಕಳ ಕಲಿಕೆ ಮೊದಲು ಮನೆಯಿಂದಲೇ ಅಲ್ಲವೇ?

ಇಂದಿನ ಸಮಾಜವು ವೇಗವಾಗಿ ಬದಲಾಗುತ್ತಿರುವ ಕಾಲಘಟ್ಟದಲ್ಲಿದೆ. ತಾಂತ್ರಿಕ ಪ್ರಗತಿ, ನಗರೀಕರಣ, ಜೀವನಶೈಲಿಯ ಬದಲಾವಣೆ, ಸ್ಪರ್ಧಾತ್ಮಕ ಬದುಕು– ಇವೆಲ್ಲವೂ ಕುಟುಂಬ ವ್ಯವಸ್ಥೆಯ ಮೇಲೆ ಗಾಢವಾದ ಪರಿಣಾಮ ಬೀರಿವೆ. ಇಂತಹ ಪರಿಸ್ಥಿತಿಯಲ್ಲಿ ಪೋಷಕರ ಜವಾಬ್ದಾರಿಗಳು ಹಾಗೂ ಮಕ್ಕಳ ಕರ್ತವ್ಯಗಳು ಎಂದರೆ ಕೇವಲ ಹಕ್ಕು– ಬಾಧ್ಯತೆಗಳ ಮಾತಷ್ಟೇ ಅಲ್ಲ; ಅದು ಮೌಲ್ಯಗಳು, ಸಂಬಂಧಗಳು ಮತ್ತು ಮಾನವೀಯತೆಯನ್ನು ಉಳಿಸುವ ಒಂದು ಮಹತ್ತರ ಹೊಣೆಗಾರಿಕೆಯಾಗಿದೆ.



> ಶಾಲೆಯಲ್ಲಿ ಕಲಿಯುವುದಕ್ಕಿಂತ ಹೆಚ್ಚಾಗಿ ಮಕ್ಕಳು ತಮ್ಮ ಮನೆಯಲ್ಲಿ ಪೋಷಕರ ವರ್ತನೆಯನ್ನು ನೋಡಿ ಕಲಿಯುತ್ತಾರೆ. ಶಾಲೆಯಲ್ಲಿ ಇರುವುದಕ್ಕಿಂತ ಹೆಚ್ಚಿನ ಸಮಯವನ್ನು ಮನೆಯಲ್ಲಿ ಕಳೆಯುವುದರಿಂದ ಪೋಷಕರ ಜವಾಬ್ದಾರಿ ಮತ್ತು ಕರ್ತವ್ಯಗಳು ತುಸು ಹೆಚ್ಚಾಗಿಯೇ ಇರುತ್ತದೆ. ಅದನ್ನು ಅರಿತು ಮಕ್ಕಳ ವರ್ತನೆಯಲ್ಲಿ ಸಕಾರಾತ್ಮಕ ಬೆಳವಣಿಗೆಯನ್ನು ಮೂಡಿಸುವಲ್ಲಿ ಪೋಷಕರ ಪಾತ್ರ ಪ್ರಧಾನವಾದುದು, ಪ್ರಮುಖವಾದುದಾಗಿರುತ್ತದೆ.

'ಲಕ್ಷ, ಲಕ್ಷ ಕೊಟ್ಟು ಶಾಲೆಗೆ ಸೇರಿಸಿರುವುದು ಯಾಕೆ? ಶಾಲೆಯ ಮುಖ್ಯಸ್ಥರು, ಶಿಕ್ಷಕರು ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳುವುದು, ಒಳ್ಳೆಯ ಬುದ್ಧಿ ಕಲಿಸುವುದು ಅವರ ಕರ್ತವ್ಯ.....!

ಪೋಷಕರೊಬ್ಬರು ತಮ್ಮ ಮಗುವಿನ ತಪ್ಪನ್ನು ಸಮರ್ಥಿಸಿಕೊಳ್ಳಲು ಶಾಲೆಯ, ಶಿಕ್ಷಕರ ಮೇಲೆ ಹೊರಿಸಿದ್ದನ್ನು ಕೇಳಿ ಕ್ಷಣ ಹೊತ್ತು ಬೇಸರದೊಂದಿಗೆ ಆಶ್ಚರ್ಯವು ಆಯಿತು. ಪೋಷಕರಾಗಿ ತಮ್ಮ ಕರ್ತವ್ಯವನ್ನು ಮರೆತು ಎಲ್ಲವನ್ನೂ ಇನ್ನೊಬ್ಬರ ಮೇಲೆ ಹೊರಿಸುವ ಈ ಮನೋಭಾವ ಇತ್ತೀಚಿನ ದಿನಗಳಲ್ಲಿ ತುಂಬಾ ಹೆಚ್ಚಾಗಿ ಕಂಡುಬರುತ್ತಿದೆ.

ಶಾಲೆಯಲ್ಲಿ ಕಲಿಯುವುದಕ್ಕಿಂತ ಹೆಚ್ಚಾಗಿ ಮಕ್ಕಳು ತಮ್ಮ ಮನೆಯಲ್ಲಿ ಪೋಷಕರ ವರ್ತನೆಯನ್ನು ನೋಡಿ ಕಲಿಯುತ್ತಾರೆ. ಶಾಲೆಯಲ್ಲಿ ಇರುವುದಕ್ಕಿಂತ ಹೆಚ್ಚಿನ ಸಮಯವನ್ನು ಮನೆಯಲ್ಲಿ ಕಳೆಯುವುದರಿಂದ ಪೋಷಕರ ಜವಾಬ್ದಾರಿ ಮತ್ತು ಕರ್ತವ್ಯಗಳು ತುಸು ಹೆಚ್ಚಾಗಿಯೇ ಇರುತ್ತವೆ. ಅದನ್ನು ಅರಿತು ಮಕ್ಕಳ ವರ್ತನೆಯಲ್ಲಿ ಸಕಾರಾತ್ಮಕ ಬೆಳವಣಿಗೆಯನ್ನು ಮೂಡಿಸುವಲ್ಲಿ ಪೋಷಕರ ಪಾತ್ರ ಪ್ರಧಾನವಾದುದು, ಪ್ರಮುಖವಾದುದಾಗಿರುತ್ತದೆ.

■ ಒಳ್ಳೆಯ ಸಂಸ್ಕಾರವನ್ನು ಕಲಿಸಬೇಕು

ಮನೆಯೇ ಮೊದಲ ಪಾಠಶಾಲೆ, ತಾಯಿ ತಾನೇ ಮೊದಲ ಗುರು ಎಂಬ ಮಾತಿಗೆ ಅನುಗುಣವಾಗಿ ಮನೆಯಲ್ಲಿಯೇ ಮೊದಲಿಗೆ ಮಕ್ಕಳಿಗೆ ಉತ್ತಮ ಸಂಸ್ಕಾರವನ್ನು ಕಲಿಸಿಕೊಡುವುದು ಪೋಷಕರ ಆದ್ಯ ಕರ್ತವ್ಯವಾಗಿದೆ. ಹೇಗೆ ಮನೆ ಕಟ್ಟಲು ಅಡಿಪಾಯ ಅನ್ನುವುದು ಬಹಳ ಮುಖ್ಯವಾಗುತ್ತದೆಯೋ ಹಾಗೆಯೇ ಮನೆಯಲ್ಲಿ ನಾವು ಕಲಿಸಿಕೊಡುವ ಸಂಸ್ಕಾರಗಳು ಕೂಡ ಅಷ್ಟೇ ಮುಖ್ಯವಾಗಿರುತ್ತವೆ. ಗುರು ಹಿರಿಯರಿಗೆ ಗೌರವ ಕೊಟ್ಟು ಮಾತನಾಡುವುದನ್ನು, ಸತ್ಯ ಹೇಳುವುದನ್ನು, ತನ್ನಂತೆ ಇತರರನ್ನು ಕಾಣಬೇಕೆಂಬ ಸದ್ಬುದ್ಧಿಯನ್ನು, ಮಾನವೀಯ ಗುಣಗಳನ್ನು ಅಳವಡಿಸಿಕೊಂಡು ಬದುಕುವುದನ್ನು ಹೀಗೆ ಒಳ್ಳೆಯ ವಿಚಾರಗಳನ್ನು ಕಲಿಸಿಕೊಡುವುದು ಒಳ್ಳೆಯದು. ಒಳ್ಳೆಯ ಸಂಸ್ಕಾರದಲ್ಲಿ ಬೆಳೆದು ಬಂದ ಮಕ್ಕಳು ಸಮಾಜದಲ್ಲಿ ಗೌರವಯುತವಾಗಿಯೇ ಬಾಳಿ ಬದುಕುವುದರಲ್ಲಿ ಯಾವುದೇ ಸಂದೇಹವಿಲ್ಲ. ನಾವೆಲ್ಲ ದುರ್ಗಸಿಂಹನ ಎರಡು ಗಿಣಿಗಳ ಕಥೆಯನ್ನು ಓದಿ ಅಥವಾ ಕೇಳಿ ಬಂದವರು. ಬೆಳವಣಿಗೆಯಲ್ಲಿ ಪರಿಸರದ ಪಾತ್ರವೇನು ಎಂದು ಸೊಗಸಾಗಿ ಚಿತ್ರಿಸಿ ಕೊಡುವ ಕಥೆ ಅದು. ಹಾಗೆಯೇ ಪೋಷಕರು ಕೂಡ ಮಕ್ಕಳಿಗೆ ಮನೆಯಲ್ಲಿ, ಮನೆಯ ಸುತ್ತ ಮುತ್ತ ಒಳ್ಳೆಯ ವಾತಾವರಣದೊಂದಿಗೆ ಉತ್ತಮ ಸಂಸ್ಕಾರಯುತ ಗುಣಗಳನ್ನು ಬೆಳೆಸಿಕೊಳ್ಳಲು ಅನುವು ಮಾಡಿಕೊಡಬೇಕು.

■ ಆರ್ಥಿಕವಾಗಿ ಸಬಲರನ್ನಾಗಿಸುವಿಕೆ

ಡಾ.ಕೆ. ಶಿವರಾಮ ಕಾರಂತರು ಹೇಳುವಂತೆ ಮಕ್ಕಳಿಗಾಗಿ ಆಸ್ತಿಯನ್ನು ಮಾಡದೇ ಮಕ್ಕಳನ್ನೇ ಆಸ್ತಿಯನ್ನಾಗಿ ರೂಪುಗೊಳ್ಳುವಂತೆ ಮಾಡುವುದು ಪೋಷಕರ ಆದ್ಯ ಕರ್ತವ್ಯಗಳಲ್ಲಿ ಒಂದಾಗಿದೆ. ನಾನು ಪಟ್ಟ ಕಷ್ಟ ನಮ್ಮ ಮಕ್ಕಳು ಪಡಬಾರದೆಂಬ ಅತಿಯಾದ ಕಾಳಜಿಯಿಂದ ಮಕ್ಕಳಿಗೆ ಕೇಳುವುದಕ್ಕಿಂತ ಮೊದಲೇ ಎಲ್ಲವನ್ನು ಕೊಡಿಸಿ ಅವರಿಗೆ ವಸ್ತು, ವ್ಯಕ್ತಿಗಳ ಬೆಲೆ ಗೊತ್ತಾಗದಂತೆ ಮಾಡುವ ಬದಲು ಹಣದ ಬೆಲೆಯನ್ನು, ಅದರ ಮೌಲ್ಯವನ್ನು ತಿಳಿಸಿ ಪ್ರಾಮಾಣಿಕವಾಗಿ ದುಡಿದು ಜೀವನದಲ್ಲಿ ಯಶಸ್ವಿಯಾಗುವುದನ್ನು ಕಲಿಸಬೇಕು. ಆರ್ಥಿಕವಾಗಿ ಸದೃಢರಾಗಲು, ತಮ್ಮ ಕಾಲ ಮೇಲೆ ತಾವೇ ನಿಲ್ಲಲು ಅಂದರೆ ಪರಾವಲಂಬಿಗಳಾಗದೇ ಸ್ವಾವಲಂಬಿಗಳಾಗಿ ನೆಲೆ ನಿಲ್ಲುವಂತೆ ಮಾಡಬೇಕು. ಅಪ್ಪ–ಅಮ್ಮ ಮಾಡಿಟ್ಟ ಆಸ್ತಿಗಳಿಗಿಂತ ಮಕ್ಕಳು ತಮ್ಮ ಸ್ವಸಾಮರ್ಥ್ಯದಿಂದ ದುಡಿದು ಬದುಕುವ ಶಕ್ತಿಯನ್ನು ರೂಪಿಸಿಕೊಳ್ಳುವಂತೆ ಮಾಡಬೇಕು.

■ ಮಾನಸಿಕವಾಗಿ ಮತ್ತು ಭಾವನಾತ್ಮಕವಾಗಿ ಸದೃಢರನ್ನಾಗಿ ಮಾಡಬೇಕು

ಇತ್ತೀಚಿನ ದಿನಗಳಲ್ಲಿ ಸಣ್ಣ ಪುಟ್ಟ ಸಮಸ್ಯೆಗಳಿಗೆಲ್ಲ ಮಾನಸಿಕವಾಗಿ ಖಿನ್ನತೆಗೆ ಒಳಗಾಗುವ ಯುವ ಜನತೆಯನ್ನು, ಸಮಸ್ಯೆಗಳಿಗೆ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುವವರನ್ನು ನೋಡಿದಾಗ ನಿಜಕ್ಕೂ ವ್ಯಥೆ ಉಂಟಾಗುತ್ತದೆ. ಪೋಷಕರು ತಮ್ಮ ಮಕ್ಕಳಿಗೆ ಮಾನಸಿಕವಾಗಿ ಮತ್ತು ಭಾವನಾತ್ಮಕವಾಗಿ ಸದೃಢತೆಯನ್ನು ರೂಢಿಸಿಕೊಳ್ಳುವುದನ್ನು ಕಲಿಸಬೇಕು. ಏನೇ ಸಮಸ್ಯೆಗಳು ಎದುರಾದರೂ ಧೈರ್ಯದಿಂದ ಮುನ್ನುಗ್ಗುವ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳುವಲ್ಲಿ ನೆರವಾಗಬೇಕು. ಭಾವನಾತ್ಮಕವಾಗಿ ಮತ್ತೊಬ್ಬರ ಭಾವನೆಗಳನ್ನು ಅರ್ಥಮಾಡಿಕೊಳ್ಳುವ ಗುಣವನ್ನು, ಸಹಾಯ ಮಾಡುವ ಗುಣವನ್ನು, ಬದುಕಿನಲ್ಲಿ ಎಂತಹ ಸಂದರ್ಭ ಎದುರಾದರೂ ಧೈರ್ಯವಾಗಿ ನಿಂತು ಎದುರಿಸುವ ಆತ್ಮಸ್ಥೈರ್ಯವನ್ನು ಬೆಳೆಸಿಕೊಳ್ಳುವಲ್ಲಿ ಪೋಷಕರು ನೆರವಾಗಬೇಕು.

■ ಉತ್ತಮ ಶಿಕ್ಷಣವನ್ನು ಒದಗಿಸಿಕೊಡಬೇಕು

ಇಲ್ಲಿ ಉತ್ತಮ ಶಿಕ್ಷಣ ಎಂದರೆ ಪ್ರತಿಷ್ಠಿತವಾದ ಶಾಲೆ ಅಥವಾ ಕಾಲೇಜಿಗೆ ಸೇರಿಸಬೇಕೆಂದು ಅರ್ಥವಲ್ಲ. ಹಾಗೆ ನೋಡಿದರೆ ಇಂದಿನ ದಿನಗಳಲ್ಲಿ ಶಿಕ್ಷಣ ಎಂದರೆ ಅದು ಕೇವಲ ಅಂಕ ಗಳಿಕೆಗೆ ಮಾತ್ರ ಸೀಮಿತವಾಗಿರುವುದು ದುರಂತವೆಂದೇ ಹೇಳಬೇಕು. ಶಿಕ್ಷಣ ಎಂದರೆ ಕೇವಲ ಗಿಳಿಪಾಠವನ್ನು ಒಪ್ಪಿಸುವುದಲ್ಲ, ಉತ್ತಮ ಅಂಕಗಳನ್ನು ಪಡೆದು, ಹೇಗೋ ಕೆಲಸ ಗಿಟ್ಟಿಸಿಕೊಂಡು ಹಣ ಮಾಡುವುದಲ್ಲ, ಇವೆಲ್ಲಕ್ಕಿಂತ ಹೆಚ್ಚಾಗಿ ಸಮಾಜದಲ್ಲಿ ಗೌರವಯುತವಾಗಿ ಮತ್ತೊಬ್ಬರ ಕಷ್ಟ ಸುಖಗಳಿಗೆ ಸ್ಪಂದಿಸುವ ಗುಣವನ್ನು ಬೆಳೆಸಿಕೊಳ್ಳುವುದು ಮುಖ್ಯ. ನಮ್ಮ ಮಕ್ಕಳನ್ನು ಮತ್ತೊಬ್ಬ ಮಗುವಿನೊಂದಿಗೆ ಹೋಲಿಕೆ ಮಾಡುತ್ತಾ ಅವರಂತೆ ನೀನಾಗಬೇಕೆಂಬ ಒತ್ತಡವನ್ನು ಹಾಕದೇ ಸಹಜವಾಗಿ ಆ ಮಗುವಿನಲ್ಲಿ ಉತ್ತಮ ಗುಣಗಳನ್ನು ಪಡೆದುಕೊಳ್ಳುವ ಶಿಕ್ಷಣವನ್ನು ನೀಡಬೇಕು.

ಜೊತೆಗೆ ಸ್ಪರ್ಧೆಗಳಲ್ಲಿ, ಜೀವನದಲ್ಲಿ ಸೋಲು – ಗೆಲುವುಗಳು ಸರ್ವಸಾಮಾನ್ಯವೆಂಬ ಎಂತಹ ಪರಿಸ್ಥಿತಿಯಲ್ಲಿಯೂ ಎದೆಗುಂದದೇ ಗಟ್ಟಿಯಾಗಿ ನೆಲೆ ನಿಲ್ಲುವ ಮೂಲಕ ಸದೃಢತೆಯನ್ನು ರೂಢಿಸಿಕೊಳ್ಳುವ ಶಿಕ್ಷಣವನ್ನು ಒದಗಿಸಿಕೊಡಬೇಕು. ಶಿಕ್ಷಣ ಎಂದರೆ ಅದು ಕೇವಲ ಅಂಕ ಗಳಿಕೆಗೆ, ಉದ್ಯೋಗದ ಅರಸುವಿಕೆಗೆ, ಜೀವನದ ಭದ್ರತೆಗೆ ಎನ್ನುವುದಕ್ಕಿಂತ ಹೆಚ್ಚಾಗಿ ಸ್ವತಂತ್ರವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳಲು, ವಿಚಾರಗಳನ್ನು ವಿನಿಮಯಪಡಿಸಲು, ಎಲ್ಲರೊಂದಿಗೆ ಸಹಜವಾಗಿ ಬೆರೆಯುವಂತಾಗಲು ಅನುವು ಮಾಡಿಕೊಡಬೇಕು. ಮಕ್ಕಳನ್ನು ಮಾರ್ಕ್ಸ್‌ವಾದಿಗಳನ್ನಾಗಿ ಮಾಡುವುದಕ್ಕಿಂತ ಮನುಷ್ಯತ್ವ ಉಳ್ಳ ಪ್ರಜೆಗಳನ್ನಾಗಿ ಮಾಡುವತ್ತ ಗಮನ ಹರಿಸುವ ಶಿಕ್ಷಣವನ್ನು ನೀಡುವುದು ಪೋಷಕರ ಜವಾಬ್ದಾರಿಯಾಗಿದೆ.

ಇವೆಲ್ಲ ಈ ಕಾಲದಲ್ಲಿ ಸಾಧ್ಯವೇ? ಹೇಗೋ ಪದವಿ ಪಡೆದರಾಯಿತು, ಕೆಲಸ ಸಿಕ್ಕರೆ ಸಾಕು ಇದಕ್ಕಾಗಿ ಶಿಕ್ಷಣ ಸಾಕು ಎಂದುಕೊಂಡರೆ ಮಾನಸಿಕವಾಗಿ ಮಕ್ಕಳು ಕುಗ್ಗುವ ಸಾಧ್ಯತೆಗಳು ಅಥವಾ ಸಮಸ್ಯೆ ಎದುರಾದರೆ ಅದರಿಂದ ಪಲಾಯನ ಮಾಡುವ ಸಾಧ್ಯತೆಗಳೇ ಜಾಸ್ತಿ ಆಗುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದೇ ನನ್ನ ಅಭಿಪ್ರಾಯವಾಗಿದೆ.

■ ಕಾನೂನನ್ನು ಕಾಪಾಡುವ ಜವಾಬ್ದಾರಿ

ಮುಖ್ಯವಾಗಿ ಪೋಷಕರು ಮಕ್ಕಳಿಗೆ ಕಲಿಸಿಕೊಡಲೇಬೇಕಾದ ಜವಾಬ್ದಾರಿ ಇದಾಗಿದೆ.ಕಾನೂನಿನ ಪಾಲನೆಗಳನ್ನು ಮಾಡುವ, ಕಾನೂನಿನ ನಿಯಮಗಳನ್ನು ಪಾಲಿಸುವುದನ್ನು ಕಲಿಸಿಕೊಡಬೇಕು. ಒಂದು ಸಣ್ಣ ಜಾಹೀರಾತಿನ ಉದಾಹರಣೆಯನ್ನು ಇಲ್ಲಿ ನೀಡಬಹುದು. ತಂದೆಯೊಬ್ಬ ಮಗನೊಂದಿಗೆ ಬರುವಾಗ ಸಿಗ್ನಲ್ ಜಂಪ್ ಮಾಡಿ ಬರುತ್ತಾನೆ. ಮಗ ಅದನ್ನು ಹೇಳಿದಾಗ ತಂದೆ ಟ್ರಾಫಿಕ್ ಪೊಲೀಸ್ ಇರುವ ಜಾಗಕ್ಕೆ ಹೋಗಿ ತಾನು ಮಾಡಿರುವ ತಪ್ಪಿಗೆ ದಂಡವನ್ನು ಕಟ್ಟಲು ಸಿದ್ಧನಾಗುತ್ತಾನೆ.ಆಶ್ಚರ್ಯಗೊಂಡ ಪೊಲೀಸ್ ಕ್ಯಾಮರಾ ಇರುವುದಕ್ಕೆ ನೀವು ದಂಡ ಕಟ್ಟಲು ವಾಪಾಸ್ಸು ಬಂದಿರೇನು? ಎಂಬ ಪ್ರಶ್ನೆಗೆ ತಂದೆ ಇಲ್ಲ ಸರ್ ನನ್ನ ಮಗ ನನ್ನಂತೆ ಈ ತಪ್ಪನ್ನು ಮಾಡಬಾರದೆಂದು ಬಂದೆ ಎಂಬ ಉತ್ತರವನ್ನು ನೀಡುತ್ತಾನೆ. ಸಣ್ಣ ಜಾಹೀರಾತಿನ ಪ್ರಸಂಗವಾದರೂ ತಿಳಿಸಿಕೊಡುವ ಪರಿಣಾಮ ಅಗಾಧವಾದುದು. ಕಾನೂನಿನ ನಿಯಮಗಳನ್ನು ಪಾಲಿಸುವ ಗುಣವನ್ನು ತಂದೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ತನ್ನ ಮಗನಿಗೆ ತಿಳಿಸಿಕೊಟ್ಟಂತಾಗುತ್ತದೆ.

ಮೊಬೈಲ್ ಫೋನ್ ಬಳಸುವಂತಿಲ್ಲ, ಹೊರಗಡೆಯಿಂದ ತಂದ ತಿಂಡಿಗಳನ್ನು ಕೊಡುವಂತಿಲ್ಲ ಹೀಗೆ ತಮ್ಮ ಸಂಸ್ಥೆಗಳಿಗೆ ಅನುಗುಣವಾದ ನಿಯಮಗಳನ್ನು ರೂಪಿಸಿದರೂ ಕೂಡ ಕದ್ದುಮುಚ್ಚಿ ಮಕ್ಕಳ ಮೇಲಿನ ಅತಿಯಾದ ಪ್ರೀತಿಯಿಂದ ನಿಯಮಗಳನ್ನು ತಾವೇ ಮುರಿದರೆ ಅಥವಾ ಮುರಿಯಲು ಸಹ ಕಲಿಸಿದರೆ ಮುಂದೊಂದು ದಿನ ತಮ್ಮ ಪೋಷಕರಿಗೆ ಸುಳ್ಳನ್ನು ಹೇಳುವ, ಮೋಸ ಮಾಡುವ ಬುದ್ಧಿಯನ್ನು ಮಕ್ಕಳು ಬೆಳೆಸಿಕೊಳ್ಳುತ್ತಾರೆ.ಆದ್ದರಿಂದ ಮೊದಲು ಪೋಷಕರು ಕಾನೂನುಗಳನ್ನು, ನಿಯಮಗಳನ್ನು ಪಾಲಿಸಬೇಕು.ಆ ಮೂಲಕ ಮಕ್ಕಳಿಗೆ ಕಾನೂನಿನ ಅರಿವನ್ನು ಕಲಿಸಿಕೊಡಬೇಕು.ಮಕ್ಕಳು ನಮ್ಮ ಮಾತನ್ನು ಕೇಳುವುದಿಲ್ಲ, ನಾವು ಮಾಡಿದಂತೆ ನಮ್ಮನ್ನು ಅನುಸರಿಸುತ್ತಾರೆ. ಹಾಗಾಗಿ ಪೋಷಕರು ತಮ್ಮ ಮಕ್ಕಳಿಗೆ ಕಾನೂನು ನಿಯಮಗಳನ್ನು ಕಾಪಾಡುವ ಜವಾಬ್ದಾರಿಯನ್ನು ಕಲಿಸಿಕೊಡಲೇಬೇಕು.

■ ಮಕ್ಕಳನ್ನು ಸ್ನೇಹಿತರಂತೆ ಕಾಣಬೇಕು

ಎಷ್ಟೇ ಮುದ್ದಾಗಿ ತಮ್ಮ ಮಕ್ಕಳನ್ನು ಬೆಳೆಸಿದರೂ ಕೂಡ ಪ್ರೀತಿ, ಪ್ರೇಮ ಎಂಬ ವಿಷಯ ಬಂದಾಗ ಪೋಷಕರು ಮೊದಲಿಗೆ ವಿರೋಧಿಗಳಾಗುತ್ತಾರೆ. ಇದನ್ನು ಬಿಟ್ಟು ತಮ್ಮ ಮಕ್ಕಳಿಗೆ ವಾಸ್ತವದ ಅರಿವನ್ನು ಮಾಡಿಸ ಬೇಕು. ತಮ್ಮ ಮಕ್ಕಳಿಗೆ ವಯಸ್ಸಿನಿಂದ ಆಗುವ ಬದಲಾವಣೆಗಳನ್ನು, ಅವರ ಮನಸ್ಸುಗಳಲ್ಲಿ ಉಂಟಾಗುವ ತಳಮಳವನ್ನು ಅರ್ಥಮಾಡಿಕೊಳ್ಳುವ, ಅವರೊಂದಿಗೆ ಸ್ನೇಹಿತರಂತೆ ಮಾತನಾಡಿ ಅವರ ಭಾವನೆಗಳಿಗೆ ಸ್ಪಂದಿಸುವ ಗುಣ ಬೆಳೆಸಿಕೊಳ್ಳಬೇಕು. ಏನೇ ಸಮಸ್ಯೆ ಬಂದರೂ ನಮ್ಮ ಪೋಷಕರು ಜೊತೆಗೆ ನಿಲ್ಲುತ್ತಾರೆ. ಮಾರ್ಗದರ್ಶನ ನೀಡುತ್ತಾರೆ, ನಮ್ಮನ್ನು ಗೆಳೆಯರಂತೆ ಕಾಣುತ್ತಾರೆ ಎಂಬ ಆಶಾಭಾವನೆ ಮಕ್ಕಳ ಮನದಲ್ಲಿ ಮೂಡುವಂತೆ ಮಾಡುವುದು ಪ್ರತಿಯೊಬ್ಬ ಪೋಷಕರ ಜವಾಬ್ದಾರಿಯಾಗಿದೆ.

■ ನುಡಿದಂತೆ ನಡೆಯುವವರು ನಾವಾಗಬೇಕು

ಹೇಳುವುದು ಒಂದು, ಮಾಡುವುದು ಒಂದು ಎಂಬಂತೆ ಪೋಷಕರೆ ಮಕ್ಕಳಿಗೆ ಸುಳ್ಳನ್ನಾಡಬಾರದು, ಮೋಸ ಮಾಡಬಾರದು, ಭ್ರಷ್ಟಾಚಾರ ಎಸಗಬಾರದು, ಬೇಡದ ಕೆಲಸಗಳನ್ನು ಮಾಡಬಾರದು ಇತ್ಯಾದಿ ಹಿತವಚನಗಳ ತಿಳಿಸಿ ತಾವೇ ಅವುಗಳನ್ನು ಮಾಡಿದರೆ ಮಕ್ಕಳಲ್ಲಿ ಗೊಂದಲ ಏರ್ಪಡುತ್ತದೆ. ಹಾಗಾಗಿ ಪೋಷಕರು ನುಡಿದಂತೆ ನಡೆಯುವ, ನಡೆದಂತೆ ನುಡಿಯುವ ಗುಣವನ್ನು ಮೊದಲಿಗೆ ತಾವು ರೂಢಿಸಿಕೊಂಡಾಗ ಮಾತ್ರ ಮಕ್ಕಳು ಅವುಗಳನ್ನು ಅನುಸರಿಸಲು ಸಾಧ್ಯವಾಗಬಲ್ಲದು.

ಇವುಗಳಿಗಿಂತ ಹೆಚ್ಚಾಗಿ ಗುರು ಹಿರಿಯರಿಗೆ ಗೌರವ ತೋರುವ, ಹೆಣ್ಣು ಮಕ್ಕಳನ್ನು ಪೂಜ್ಯಭಾವದಿಂದ ಕಾಣುವ, ತಮ್ಮಂತೆಯೇ ಇತರರ ಭಾವನೆಗಳಿಗೂ ಬೆಲೆ ಕೊಡುವ, ಮತ್ತೊಬ್ಬರ ಮೇಲೆ ಅಸೂಯೆ ಪಡೆಯದಂತಹ ಭಾವನೆಗಳನ್ನು ಬೆಳೆಯುವಂತೆ ನೋಡಿಕೊಳ್ಳುವುದು ಪೋಷಕರ ಅತೀ ದೊಡ್ಡ ಜವಾಬ್ದಾರಿಯಾಗಿರುತ್ತದೆ.

ಇದೆಲ್ಲ ಹೇಳಿದ ಮಾತ್ರಕ್ಕೆ ಪೋಷಕರ ಕರ್ತವ್ಯ, ಜವಾಬ್ದಾರಿ ಮಾತ್ರ ಮುಖ್ಯ ಶಾಲೆ, ಸಮಾಜ, ಪರಿಸರದ ಪಾತ್ರವೇನು ಇಲ್ಲವೆಂದು ಅರ್ಥವಲ್ಲ. ಮಕ್ಕಳ ಪಾಲನೆ, ಪೋಷಣೆ ಮತ್ತು ಬೆಳವಣಿಗೆಯಲ್ಲಿ ಪಾಲಕರ, ಪೋಷಕರ ಜವಾಬ್ದಾರಿ ಹೆಚ್ಚಾಗಿರುವುದರಿಂದ ಇತರರಿಗಿಂತ ಹೆಚ್ಚಾದ ಜವಾಬ್ದಾರಿ ಇರುತ್ತದೆ. ಆದ್ದರಿಂದ ಜವಾಬ್ದಾರಿಯನ್ನು ಅರಿತು ಅದನ್ನು ಬೆಳೆಸುವ ಅಗತ್ಯವಿದೆ.

ಈ ಮೇಲಿನ ಬರಹವನ್ನು ಅವಲೋಕನಕ್ಕೆ ಗುರಿಪಡಿಸಿದಾಗ ಒದಗಿಬರುವ ತೀರ್ಮಾನದ ಮಾತುಗಳೆಂದರೆ ಪ್ರಸ್ತುತ ದಿನಗಳಲ್ಲಿ ಪೋಷಕರ ಜವಾಬ್ದಾರಿಗಳು ಮತ್ತು ಮಕ್ಕಳ ಕರ್ತವ್ಯಗಳು ಪರಸ್ಪರ ಅವಿಭಾಜ್ಯ ಸಂಬಂಧ ಹೊಂದಿವೆ. ಪೋಷಕರು ಮಕ್ಕಳಿಗೆ ಪ್ರೀತಿ, ಭದ್ರತೆ, ಮೌಲ್ಯಬೋಧನೆ ಮತ್ತು ಸರಿಯಾದ ಮಾರ್ಗದರ್ಶನ ನೀಡಿದಾಗ ಮಾತ್ರ ಮಕ್ಕಳು ಸಮರ್ಥ ಹಾಗೂ ಸಂವೇದನಾಶೀಲ ನಾಗರಿಕರಾಗಿ ರೂಪುಗೊಳ್ಳುತ್ತಾರೆ. ಅದೇ ರೀತಿ, ಮಕ್ಕಳು, ಪೋಷಕರ ತ್ಯಾಗವನ್ನು ಅರಿತು ಗೌರವ, ಕೃತಜ್ಞತೆ ಮತ್ತು ಜವಾಬ್ದಾರಿಯುತ ವರ್ತನೆಯನ್ನು ತೋರಿಸಿದಾಗ ಕುಟುಂಬ ಸಂಬಂಧಗಳು ಗಟ್ಟಿಯಾಗುತ್ತವೆ. ಇಂದಿನ ವೇಗದ ಯುಗದಲ್ಲಿ ತಾಂತ್ರಿಕತೆ ಹೆಚ್ಚಾದರೂ ಮಾನವೀಯತೆ ಕಡಿಮೆಯಾಗಬಾರದು. ಪೋಷಕರು ಮತ್ತು ಮಕ್ಕಳು ಪರಸ್ಪರ ಅರ್ಥಮಾಡಿಕೊಂಡು, ಸಹಕಾರ ಮತ್ತು ಸಂವಾದದ ಮೂಲಕ ಬದುಕನ್ನು ಮುನ್ನಡೆಸಿದರೆ ಮಾತ್ರ ಸಂಸ್ಕಾರಯುತ ಕುಟುಂಬ, ಶಿಸ್ತಿನ ಸಮಾಜ ಮತ್ತು ಸುಸ್ಥಿರ ಭವಿಷ್ಯವನ್ನು ನಿರ್ಮಿಸಲು ಸಾಧ್ಯವಾಗುತ್ತದೆ.

ಸತತ ಪರಿಶ್ರಮದಿಂದಷ್ಟೆ ಫಲ ಸಾಧ್ಯ

● ಮೈಸೂರು ನಗರ ಡಿಸಿಪಿ ಬಿಂಧುಮಣಿ ವಿಶ್ವಾಸದ ನುಡಿ

● ಮಾನಸ ಯುವ ಸಂವರ್ಧನೆ ಸಮಾರೋಪ ಸಮಾರಂಭ



ಮಾನಸ ಯುವ ಸಂವರ್ಧನೆ 2025–26 ಕಾರ್ಯಕ್ರಮದಲ್ಲಿ ಡಿಸಿಪಿ ಬಿಂಧುಮಣಿ ಮಾತನಾಡಿದರು.

ಮೈಸೂರು, ಡಿ.17(ವಿವಿಹೆಚ್)– ಎಲ್ಲಾ ಅಡೆತಡೆಗಳನ್ನು ಮೆಟ್ಟಿ ನಿಂತು ಗುರಿ ಸಾಧನೆ ಮಾಡಬೇಕು ಎಂದಾದರೆ ಉನ್ನತ ಶಿಕ್ಷಣ ಪಡೆಯಬೇಕು. ಶಿಕ್ಷಣದ ಮೇಲೆ ನಂಬಿಕೆಯಿಟ್ಟು ಬದುಕು ರೂಪಿಸಿಕೊಂಡವರು ನಾವು ಎಂದು ಮೈಸೂರು ನಗರ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಆರ್.ಎನ್.ಬಿಂಧುಮಣಿ ಕಿವಿಮಾತು ಹೇಳಿದರು.

ಮಾನಸಗಂಗೋತ್ರಿಯ ಸೆನೆಟ್ ಭವನದಲ್ಲಿ, ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿಶೇಷ ಘಟಕದ ವತಿಯಿಂದ ಮಾನಸ ಯುವ ಸಂವರ್ಧನೆ 2025–26 (ಯುವ ಸಬಲೀಕರಣ ಮತ್ತು ಔದ್ಯೋಗಿಕ ಕಾರ್ಯಾಗಾರ) ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಾಲೇಜಿನಲ್ಲಿ ರಂಗತಂಡ ಸೇರಿದ್ದರಿಂದ ಸಂವಹನ ಕಲೆ ಬೆಳೆಸಿಕೊಂಡೆ. ಅದರಿಂದ ಆತ್ಮಸ್ಥೈರ್ಯ ಹೆಚ್ಚಾಯಿತು. ಅದರ ಮೂಲಕ ಸ್ಪರ್ಧಾತ್ಮಕ ಪರೀಕ್ಷೆಯೆಡೆಗೆ ಮುಖಮಾಡಿ, ನಿರಂತರ ಪರಿಶ್ರಮ, ಸತತ ಪ್ರಯತ್ನದ ಫಲದಿಂದ ಇವತ್ತು ಈ ಸ್ಥಾನದಲ್ಲಿ ನಿಂತಿದ್ದೇನೆ. ಜೀವನದಲ್ಲಿ ಕಷ್ಟಗಳು ಬರಬೇಕು. ಕಷ್ಟಗಳೇ ನಮ್ಮನ್ನು ಗಟ್ಟಿಗೊಳಿಸುವ, ಉತ್ತೇಜಿಸುವ ಕೆಲಸ ಮಾಡುತ್ತವೆ. ಕರ್ನಾಟಕ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದಕ್ಕೆ ಆತ್ಮತೃಪ್ತಿಯಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಸ್ಪರ್ಧಾತ್ಮಕ ಪರೀಕ್ಷೆಗೆ ಮಾರ್ಗದರ್ಶನ ಕೊರತೆ ಇದ್ದಾಗ, ವ್ಯವಸ್ಥಿತ ತಯಾರಿ ಸಾಧ್ಯವಿಲ್ಲ. ನಿಮ್ಮ ಪ್ರಯತ್ನಕ್ಕೆ ಪ್ರತಿಫಲ ಇದ್ದೇ ಇರುತ್ತದೆ. ಸಾಧನೆಯ ಹಾದಿಯಲ್ಲಿ ಅನೇಕ ಅಡೆತಡೆಗಳು ಬರುತ್ತವೆ. ಅವುಗಳನ್ನು ಎದೆಗುಂದದೆ ಎದುರಿಸಿದಾಗ ಯಶಸ್ಸು ಸಾಧ್ಯವಾಗುತ್ತದೆ ಎಂದು ಸಲಹೆ ನೀಡಿದರು.

ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು ಮಾತನಾಡಿ, ವಿದ್ಯಾರ್ಥಿಗಳು ಭತ್ತ ಬೆಳೆಯುವ ಗದ್ದೆಗಳಾಗಬೇಕು. ಅದನ್ನು ತುಂಬುವ ಜೊಳ್ಳಾಗಬಾರದೆಂಬ ಕುವೆಂಪು ವಾಣಿಯನ್ನು ನೆನಪಿಟ್ಟುಕೊಂಡು ಬೆಳೆಯಬೇಕು. ಸೋಲಿಗೆ ನೂರಾರು ಕಾರಣ ಹೇಳಬಹುದು. ಆದರೆ ಸಾಧನೆಗೆ ಪರಿಶ್ರಮವೊಂದೇ ಮಾರ್ಗವಾಗಿದ್ದು, ಅವಮಾನ ಮಾಡುವವರು, ಅನುಮಾನ ಪಡುವವರನ್ನು ಎದುರಿಸಿದಾಗ ಸಮರ್ಥರಾಗಿ ಬೆಳೆಯಲು ಸಾಧ್ಯ ಎಂದರು.

ಮನುಷ್ಯ ಮನಸ್ಸನ್ನ ಏಕಾಗ್ರತೆಯಿಂದ ಇಟ್ಟುಕೊಂಡಾಗ ಒಳ್ಳೆಯ ನಿರ್ಣಯ ಕೈಗೊಳ್ಳಲು ಸಾಧ್ಯ. ಯುವ ಸಮೂಹ ಬೆಂಕಿ ಕಿಡಿಗಳಾಗಬೇಕು. ಅದರಿಂದ ಸಮಾಜದ ಮಾತ್ರವಲ್ಲದೇ ನಿಮ್ಮ ಜೀವನದ ಜ್ಯೋತಿ ಹಚ್ಚಿಸಿ ಬೇರೊಬ್ಬರಿಗೆ ಬೆಳಕಾಗಬಹುದು ಎಂದು ಸಲಹೆ ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಎನ್.ಕೆ.ಲೋಕನಾಥ್, ಕುಲಸಚಿವೆ (ಆಡಳಿತ) ಎಂ.ಕೆ.ಸವಿತಾ, ಕುಲಸಚಿವ (ಪರೀಕ್ಷಾಂಗ) ಡಾ.ಎನ್.ನಾಗರಾಜು, ಪ್ರೊ. ಕೆ.ಎನ್.ಮಂಜುನಾಥ್, ಮಾನಸ ಯುವ ಸಂವರ್ಧನೆ 2025–26 ಕಾರ್ಯಕಾರಿ ಸಮಿತಿ ಅಧ್ಯಕ್ಷ ಪ್ರೊ.ಡಿ.ಆನಂದ್, ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವಿಭಾಗದ ಅಧ್ಯಕ್ಷೆ ಪ್ರೊ. ಎನ್.ಕೆ. ಲೋಲಾಕ್ಷಿ ಉಪಸ್ಥಿತರಿದ್ದರು.

ಎಐ ತಂತ್ರಜ್ಞಾನ ಚಮತ್ಕಾರ!

ಚಿರತೆ ಬಂತು ಚಿರತೆ: ಜನರಲ್ಲಿ ಆತಂಕ



ಮೈಸೂರು, ಡಿ.17(ಎಂಟಿವೈ)ಎಐ ತಂತ್ರಜ್ಞಾನದ ಮೂಲಕ 'ಮೈಸೂರಲ್ಲಿ ಚಿರತೆ ಪ್ರತ್ಯಕ್ಷ' ಚಿತ್ರ ವರದಿ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದ್ದು, ಜನರಲ್ಲಿ ಆತಂಕ ಸೃಷ್ಟಿಸಿದೆ.

ಕಳೆದ ಮೂರು ದಿನದ ಹಿಂದೆ ಅಶೋಕಪುರಂನಲ್ಲಿರುವ ಸ್ಯಾಂಡಲ್ ಫ್ಯಾಕ್ಟರಿ ಹಾಗೂ ರೈಲ್ವೆ ವರ್ಕ್ ಶಾಪ್‌ನಲ್ಲಿ ಚಿರತೆ ಕಾಣಿಸಿಕೊಂಡಿದೆ ಎಂಬ ಮಾಹಿತಿ ಹರಡಿತ್ತು. ಅಲ್ಲದೆ, ರೈಲ್ವೆ ವರ್ಕ್‌ಶಾಪ್ ಆವರಣದ ಮರದ ಕೊಂಬೆ ಮೇಲೆ ಚಿರತೆ ಕುಳಿತಿರುವಂತೆ ಎಐ ಸೃಷ್ಟಿಸಿದ ಫೋಟೋ ವೈರಲ್ ಆಗಿತ್ತು. ಇದೀಗ ವರ್ಕ್‌ಶಾಪ್ ಮುಂದೆ ನೀರು ಕುಡಿಯುತ್ತಿರುವಂತೆ ಚಿರತೆಯ ಎಐ ಫೋಟೊ ಸೃಷ್ಟಿಸಿ ವೈರಲ್ ಮಾಡಲಾಗಿದೆ. ಅರಣ್ಯ ಇಲಾಖೆ ಹೈರಾಣಾಗಿದ್ದು, ಸ್ಥಳೀಯರು ಭಯದ ವಾತಾವರಣದಲ್ಲಿ ಸಿಲುಕಿದ್ದಾರೆ. ಎಐ ಫೋಟೊ ವೈರಲ್ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲು ಅರಣ್ಯ ಇಲಾಖೆ ನಿರ್ಧರಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಹಿರಿಯ ವೈದ್ಯ ಡಾ.ಸಿ.ಡಿ.ಶ್ರೀನಿವಾಸಮೂರ್ತಿ ಅವರಿಂದ ಮೈಸೂರಿಗೆ ಮಹತ್ವದ ಕೊಡುಗೆ

● ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಬಣ್ಣನೆ ● 'ಡಾ.ಸಿ.ಡಿ.ಎಸ್. ರೈಟ್ಸ್' ಪುಸ್ತಕ ಬಿಡುಗಡೆ ● ಡಾ.ಕೆ.ಬಿ.ಗಣಪತಿ ಅವರು ನನ್ನ ಮಾರ್ಗದರ್ಶಕರು ; ಡಾ.ಸಿ.ಡಿ.ಶ್ರೀನಿವಾಸಮೂರ್ತಿ ಸ್ಮರಣೆ





ಮೈಸೂರು ರೇಸ್ ಕ್ಲಬ್‌ನ ಕ್ಲಬ್‌ಹೌಸ್ ಆವರಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಹಿರಿಯ ವೈದ್ಯ ಡಾ.ಸಿ.ಡಿ.ಶ್ರೀನಿವಾಸಮೂರ್ತಿ (ಡಾ.ಸಿಡಿಎಸ್) ಅವರ 'ಡಾ.ಸಿ.ಡಿ.ಎಸ್. ರೈಟ್ಸ್' ಪುಸ್ತಕ ಬಿಡುಗಡೆ (ಮಧ್ಯದ ಚಿತ್ರ) ಮಾಡಲಾಯಿತು. (ಎಡದಿಂದ) ಡಾ.ಸಿಡಿಎಸ್ ಅವರ ಸೊಸೆ ಸುಪರ್ಣಾ ಚಂದ್ರಗಿರಿ, ಡಾ.ಸಿ.ಡಿ.ಶ್ರೀನಿವಾಸಮೂರ್ತಿ, ಅವರ ಪತ್ನಿ ಶಾಂತಾ ಶ್ರೀನಿವಾಸ್, ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಅಕಾಡೆಮಿ ನ್ಯೂಸ್ ಪೇಪರ್ಸ್ ಪ್ರೈವೇಟ್ ಲಿಮಿಟೆಡ್‌ನ ಕಾರ್ಯಕಾರಿ ನಿರ್ದೇಶಕರಾದ ಕೆ.ಕೆ.ದೇವಮ್ಮ (ರ್‍ಯಾಲಿ ಗಣಪತಿ), 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರಾದ ವಿಕ್ರಂ ಮುತ್ತಣ್ಣ ಅವರು ಉಪಸ್ಥಿತರಿದ್ದರು. ಎಡ ಹಾಗೂ ಬಲ ಚಿತ್ರಗಳಲ್ಲಿ ಗಣ್ಯರನ್ನು ಕಾಣಬಹುದು.

ಮೈಸೂರು,ಡಿ.17(ಪಿಎಂ)– ವೈದ್ಯಕೀಯ ಕ್ಷೇತ್ರ ಹಾಗೂ ಮೈಸೂರಿಗೆ ಹಿರಿಯ ವೈದ್ಯ ಡಾ.ಸಿ.ಡಿ.ಶ್ರೀನಿವಾಸಮೂರ್ತಿ (ಡಾ.ಸಿ.ಡಿ.ಎಸ್) ಅವರು ಮಹತ್ವದ ಕೊಡುಗೆ ನೀಡಿದ್ದಾರೆ ಎಂದು ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಹೇಳಿದರು.

ಮೈಸೂರು ರೇಸ್ ಕ್ಲಬ್‌ನ ಕ್ಲಬ್‌ಹೌಸ್ ಆವರಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಹಿರಿಯ ವೈದ್ಯ, ಡಾ.ಸಿ.ಡಿ.ಶ್ರೀನಿವಾಸ ಮೂರ್ತಿ ಅವರ 'ಡಾ.ಸಿ.ಡಿ.ಎಸ್. ರೈಟ್ಸ್' (Dr.C.D.S.Writes) ಪುಸ್ತಕ (ಇಂಗ್ಲಿಷ್ ಕೃತಿ) ಬಿಡುಗಡೆ ಸಮಾರಂಭ ಹಾಗೂ ಶ್ರೀಮತಿ ಶಾಂತಾ ಶ್ರೀನಿವಾಸ್ ಮತ್ತು ಡಾ.ಸಿ.ಡಿ.ಶ್ರೀನಿವಾಸಮೂರ್ತಿ ದಂಪತಿಯ 60ನೇ ವಿವಾಹ ವಾರ್ಷಿಕೋತ್ಸವದಲ್ಲಿ ಅತಿಥಿಯಾಗಿ ಪಾಲ್ಗೊಂಡು, ಪುಸ್ತಕ ಬಿಡುಗಡೆ ಬಳಿಕ ಅವರು ಮಾತನಾಡಿದರು.

ಡಾ.ಸಿ.ಡಿ.ಎಸ್ ದಂಪತಿಗೆ ನಿಮ್ಮೆಲ್ಲರ ಪರವಾಗಿ 60ನೇ ವಿವಾಹ ವಾರ್ಷಿಕೋತ್ಸವದ ಶುಭಾಶಯ ಕೋರುತ್ತೇನೆ. ಜೊತೆಗೆ 'ಸ್ಟಾರ್ ಆಫ್ ಮೈಸೂರ್'ಗೆ ಬರೆದಿರುವ ಅಂಕಣ ಬರಹಗಳನ್ನು ಪುಸ್ತಕವಾಗಿ ಹೊರತಂದಿರುವುದಕ್ಕೂ ಅವರನ್ನು ಅಭಿನಂದಿಸುತ್ತೇನೆ. ಅಲ್ಲದೆ, ಜೊತೆಗೆ ಡಾ.ಸಿಡಿಎಸ್ ಅವರ ಜೀವನ ಚರಿತ್ರೆ ಬಗ್ಗೆ ಮತ್ತೊಂದು ಪುಸ್ತಕ ಹೊರ ತಂದಿರುವ ಅವರ ಕುಟುಂಬಕ್ಕೂ ಅಭಿನಂದಿಸುತ್ತೇನೆ. ವೈದ್ಯಕೀಯ ಕ್ಷೇತ್ರದಲ್ಲಿ ಡಾ.ಸಿಡಿಎಸ್ ಅವರನ್ನು ಹಲವು ದಶಕಗಳಿಂದ ಬಲ್ಲೆ. ಅವರು ವೈದ್ಯರಾಗಿ ಹಲವು ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸಿದ್ದು, ಈ ವೇಳೆ ಮಹತ್ವದ ಕೊಡುಗೆಗಳನ್ನು ಅವರು ನೀಡಿದ್ದಾರೆ ಎಂದು ತಿಳಿಸಿದರು.

ಬರವಣಿಗೆ ಮುಂದುವರೆಸಿ: ಅತಿಥಿಯಾಗಿ ಪಾಲ್ಗೊಂಡಿದ್ದ ಅಕಾಡೆಮಿ ನ್ಯೂಸ್ ಪೇಪರ್ಸ್ ಪ್ರೈವೇಟ್ ಲಿಮಿಟೆಡ್‌ನ ಕಾರ್ಯಕಾರಿ ನಿರ್ದೇಶಕರಾದ ಕೆ.ಕೆ.ದೇವಮ್ಮ (ರ್‍ಯಾಲಿ ಗಣಪತಿ) ಅವರು ಮಾತನಾಡಿ, ಇಂತಹ ವಿಶೇಷ ಮತ್ತು ಸುಂದರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ಅತ್ಯಂತ ಸಂತಸ ತಂದಿದೆ. ಡಾ.ಸಿಡಿಎಸ್ ರೈಟ್ಸ್ ಪುಸ್ತಕದ ಲೇಖನಗಳನ್ನು ಈಗಾಗಲೇ 'ಸ್ಟಾರ್ ಆಫ್ ಮೈಸೂರ್'ನಲ್ಲಿ ಓದಿದ್ದು, ಹಾಗಾಗಿ ಕೃತಿಯ ಲೇಖನಗಳ ಬಗ್ಗೆ ನನಗೆ ಗೊತ್ತಿದೆ. ಇದೇ ವೇಳೆ ಡಾ.ಸಿಡಿಎಸ್ ಅವರಲ್ಲಿ ಒಂದು ವಿಶೇಷ ವಿನಂತಿ ಮಾಡುತ್ತಿದ್ದು, ಅದೇನೆಂದರೆ ಅವರು ಬರವಣಿಗೆಯನ್ನು ಮುಂದುವರೆಸಬೇಕು ಎಂದರು.

ಕೆಬಿಜಿಯವರಿಗೆ ವೈದ್ಯ ಸ್ನೇಹಿತರೇ ಜಾಸ್ತಿ: 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರಾದ ಕೆ.ಜಿ.ವಿಕ್ರಂ ಮುತ್ತಣ್ಣ ಅವರು ಡಾ.ಸಿಡಿಎಸ್ ದಂಪತಿಗೆ ವಿವಾಹ ವಾರ್ಷಿಕೋತ್ಸವದ ಶುಭಾಶಯ ತಿಳಿಸಿದರು. ಬಳಿಕ ಮಾತನಾಡಿದ ಅವರು, ಹಿರಿಯ ಪತ್ರಕರ್ತರಾಗಿದ್ದ ನನ್ನ ತಂದೆ ಡಾ.ಕೆ.ಬಿ.ಗಣಪತಿ (ಕೆಬಿಜಿ) ಅವರಿಗೆ ಪತ್ರಕರ್ತರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯ ಸ್ನೇಹಿತರು ಇದ್ದಾರೆ ಎಂದು ಈಗಷ್ಟೇ ಅರಿವಾಯಿತು. ವಾಸ್ತವವಾಗಿ ಈ ಸಮಾರಂಭವು ನನ್ನ ಜೀವನದ ಮುಖ್ಯ ಭಾಗ ಎಂದೇ ಭಾವಿಸುತ್ತೇನೆ. ಏಕೆಂದರೆ ಇಲ್ಲಿರುವ ಅನೇಕ ವೈದ್ಯರು ನಮ್ಮ ಕುಟುಂಬಕ್ಕೆ ವೈದ್ಯಕೀಯ ಸೇವೆ ನೀಡಿದ್ದಾರೆ. ಡಾ.ಸಿಡಿಎಸ್ ಅವರು ಕಾಮಾಕ್ಷಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ವೇಳೆ ನನ್ನ ತಂದೆಯವರಿಗೆ ಅನೇಕ ಅನಾರೋಗ್ಯ ಸನ್ನಿವೇಶದಲ್ಲಿ ಸೂಕ್ತ ಚಿಕಿತ್ಸೆ ಕಲ್ಪಿಸಿದ್ದಾರೆ. ನಾನು ಚಿಕ್ಕವನಿದ್ದಾಗ ನಿರಂತರವಾಗಿ ಏನಾದರೂ ಗಾಯ ಮಾಡಿಕೊಳ್ಳುತ್ತಿದ್ದೆ. ಹೀಗಾಗಿ ಕಾಮಾಕ್ಷಿ ಆಸ್ಪತ್ರೆಗೆ ಆಗಾಗ್ಗೆ ಭೇಟಿ ನೀಡಬೇಕಾಗಿತ್ತು ಎಂದು ನೆನಪಿಸಿಕೊಂಡರು.

ಕೆಬಿಜಿ ನನ್ನ ಮೆಂಟರ್: ಇದಕ್ಕೂ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ ಹಿರಿಯ ವೈದ್ಯ ಡಾ.ಸಿ.ಡಿ.ಶ್ರೀನಿವಾಸ ಮೂರ್ತಿ, ಹಿರಿಯ ಪತ್ರಕರ್ತರಾದ ಡಾ.ಕೆ.ಬಿ.ಗಣಪತಿ (ಕೆಬಿಜಿ) ಅವರು ನನಗೆ ಲೇಖನ ಮತ್ತು ಅಂಕಣಗಳನ್ನು ಬರೆಯಲು ಉತ್ತೇಜನ ನೀಡಿದರು. ಅವರು ಮೊದಲು ನನಗೆ ನನ್ನ ವೃತ್ತಿ ಯಿಂದಾಗಿ ಪರಿಚಿತರಾದರು. ನಂತರ ಮಿತ್ರರಾದ ಅವರು ಅಂತಿಮವಾಗಿ ನನ್ನ ಮೆಂಟರ್ (ಮಾರ್ಗದರ್ಶಕರು) ಆದರು ಎಂದು ಸ್ಮರಿಸಿದರು.

ಮೈಸೂರಿನ ಪ್ರತಿಷ್ಠಿತ ಪತ್ರಿಕೆ 'ಸ್ಟಾರ್ ಆಫ್ ಮೈಸೂರ್'ಗೆ ಬರೆದಿದ್ದ ಅಂಕಣಗಳು ಮತ್ತು ಕಾನ್ಫರೆನ್ಸ್ ಮ್ಯಾಗಜಿನ್‌ಗೆ ಬರೆದ ಲೇಖನಗಳನ್ನು ಸೇರಿಸಿ ಡಾ.ಸಿಡಿಎಸ್ ರೈಟ್ಸ್ ಪುಸ್ತಕ ಹೊರ ತಂದಿದ್ದೇನೆ. ಡಾ.ಸಿಡಿಎಸ್ ರೈಟ್ಸ್ ಹೊರ ತರಬೇಕೆಂಬುದು ವರ್ಷದ ಹಿಂದಿನ ನನ್ನ ಆಲೋಚನೆ. ಈ ಪುಸ್ತಕವನ್ನು ನೀವೇ ಬಿಡುಗಡೆ ಮಾಡಬೇಕೆಂದು ಕೆ.ಬಿ.ಗಣಪತಿಯವರಲ್ಲಿ ಇದೇ ವರ್ಷದ ಜನವರಿಯಲ್ಲಿ ಹೇಳಿದ್ದೆ. ಅವರು ಸಹ ಒಪ್ಪಿಕೊಂಡಿದ್ದರು. ಆದರೆ ಅವರು ಇಂದು ನಮ್ಮೊಟ್ಟಿಗೆ ಇಲ್ಲ ಎಂದು ನೊಂದು ನುಡಿದರು.

ಡಾ.ಕೆ.ಬಿ.ಗಣಪತಿಯವರ ಉತ್ತೇಜನದಿಂದ ಮೊದಲಿಗೆ ಪುಸ್ತಕ ಒಂದರ ವಿಮರ್ಶೆ ಬರೆದಿದ್ದೆ. ಅದನ್ನು ಅವರು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಆ ಬಳಿಕ ಆಗಾಗ್ಗೆ ಲೇಖನ ಬರೆಯುವಂತೆ ಉತ್ತೇಜಿಸುತ್ತಿದ್ದರು. ಹಾಗಾಗಿ ಬರೆಯಲು ಪ್ರಾರಂಭಿಸಿದೆ. ಅವುಗಳು 'ಸ್ಟಾರ್ ಆಫ್ ಮೈಸೂರ್'ನಲ್ಲಿ ಅಂಕಣ ಬರಹಗಳಾಗಿ ಪ್ರಕಟವಾಗಿದವು. ಆ ಅಂಕಣ ಬರಹ ಸೇರಿದಂತೆ ಕಾನ್ಫರೆನ್ಸ್ ಮ್ಯಾಗಜಿನ್‌ನಲ್ಲಿ ಬರೆದ ಲೇಖನಗಳನ್ನು ಸೇರಿಸಿ ಈ ಪುಸ್ತಕವಾಗಿ ಹೊರತಂದಿದ್ದೇನೆ ಎಂದರು.

ನನಗೆ ಪುಸ್ತಕ ಬರೆಯುವ ಅಭ್ಯಾಸ ಇರಲಿಲ್ಲ. ನಾನು ಚಿಕ್ಕ ವಯಸ್ಸಿನಲ್ಲಿ ಸರ್ಕಾರಿ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿದ್ದು. ಪ್ರೌಢಶಾಲೆಗೆ ಸೇರಬೇಕಾದರೆ ಇಂಗ್ಲಿಷ್ ಮಾಧ್ಯಮಕ್ಕೆ ಸೇರಿದೆ. ಆಗ ನನಗೆ ಪಾಠ ಅರ್ಥವಾಗದೇ ಕನ್ನಡ ಮಾಧ್ಯಮಕ್ಕೆ ವಾಪಸ್ಸಾಗುವ ಮನಸ್ಸು ಹೊಂದಿದ್ದೆ ಆದರೆ ನಮ್ಮ ತಂದೆಯವರು ಇಂಗ್ಲಿಷ್ ಕಲಿಸಲು ಒಬ್ಬರು ಶಿಕ್ಷಕರನ್ನೇ ನೇಮಿಸಿದರು. ಅವರು ಇಂಗ್ಲಿಷ್ ಕಲಿಯಲು ಪ್ರೇರೇಪಿಸಿದರು. ಬಳಿಕ ಇಂಗ್ಲಿಷ್ ಕಲಿಯಲು ಸಾಧ್ಯವಾಯಿತು ಎಂದು ಹಳೇ ನೆನಪಿಗೆ ಜಾರಿದರು.

ಇದೇ ವೇಳೆ ಡಾ.ಸಿ.ಡಿ.ಶ್ರೀನಿವಾಸ ಮೂರ್ತಿ ಕುಟುಂಬಸ್ಥರು ಬರೆದು, ಹೊರ ತಂದಿರುವ 'ದಿ ಲೈಫ್ ಆಫ್ ಡಾ.ಸಿ.ಡಿ. ಶ್ರೀನಿವಾಸಮೂರ್ತಿ' ಎಂಬ ಮತ್ತೊಂದು ಕೃತಿಯನ್ನೂ (ಇಂಗ್ಲಿಷ್ ಕೃತಿ) ಬಿಡುಗಡೆ ಮಾಡಲಾಯಿತು. ಡಾ.ಸಿ.ಡಿ.ಶ್ರೀನಿವಾಸ ಮೂರ್ತಿ ಅವರ ಪತ್ನಿ ಶಾಂತಾ ಶ್ರೀನಿವಾಸ್, ಪುತ್ರರಾದ ಡಾ.ಸಂಜಯ್ ಚಂದ್ರಗಿರಿ, ಸಿ.ಎಸ್.ರವಿಶಂಕರ್, ಸೊಸೆಯಂದಿರಾದ ಸುಪರ್ಣಾ ಚಂದ್ರಗಿರಿ, ಆರತಿ ರವಿಶಂಕರ್ ಸೇರಿದಂತೆ ಮತ್ತಿತರರು ಹಾಜರಿದ್ದರು. ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಉದ್ಯಮಿ ಜಗನ್ನಾಥ ಶೆಣೈ, ವೈದ್ಯರಾದ ಡಾ.ಕೆ.ಜಾವೀದ್ ನಯೀಮ್, ಡಾ.ಉಮೇಶ್ ಕಾಮತ್, ಭಾರತ ಸರ್ಕಾರದ ಕ್ಯಾಬಿನೆಟ್ ಸೆಕ್ರೆಟರಿಯೇಟ್‌ನ ನಿವೃತ್ತ ಜಂಟಿ ಕಾರ್ಯದರ್ಶಿ ರವಿಜೋಶಿ ಸೇರಿದಂತೆ ಅನೇಕ ಗಣ್ಯರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಸರಸ್ವತಿಪುರಂ ಅಗ್ನಿಶಾಮಕ ಠಾಣೆಯ ಕಟ್ಟಡ ಕೆಡವಿ ಅದೇ ವಾಸ್ತು ಶೈಲಿಯಲ್ಲಿ ಹೊಸ ಕಟ್ಟಡ ನಿರ್ಮಿಸಲು ತೀರ್ಮಾನ

ವಿಧಾನ ಸಭೆಯಲ್ಲಿ ಶಾಸಕ ಕೆ.ಹರೀಶ್‌ಗೌಡರಿಗೆ ಗೃಹ ಸಚಿವರ ಉತ್ತರ



ಕೆ.ಹರೀಶ್‌ಗೌಡ

ಬೆಳಗಾವಿ, ಡಿ.17– ಮೈಸೂರಿನ ಸರಸ್ವತಿಪುರಂ ಅಗ್ನಿಶಾಮಕ ಠಾಣೆಯ ಕಟ್ಟಡ ಕೆಡವಿ, ಹಾಲಿ ಇರುವ ವಾಸ್ತು ಶೈಲಿಯನ್ನೇ ಹೋಲುವಂತೆ ಹೊಸ ಕಟ್ಟಡ ನಿರ್ಮಿಸಲು ತೀರ್ಮಾನಿಸಲಾಗಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರು ತಿಳಿಸಿದ್ದಾರೆ.

ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರ ಪ್ರಶ್ನೆಗೆ ಸಚಿವರು ಉತ್ತರ ನೀಡಿದರು. ಮೈಸೂರಿನ ಸರಸ್ವತಿಪುರಂನಲ್ಲಿರುವ ಅಗ್ನಿಶಾಮಕ ಠಾಣೆಯ ಕಟ್ಟಡ ಕುಸಿದು ಹಾಗೂ ಶಿಥಿಲಾವಸ್ಥೆಯಲ್ಲಿರುವುದರಿಂದ ಈ ಠಾಣೆಯ ಅಗ್ನಿಶಾಮಕ ಕಟ್ಟಡವನ್ನು ಕೆಡವಿ ಹೊಸದಾಗಿ ಮರು ನಿರ್ಮಾಣ ಹಾಗೂ ಆವರಣದಲ್ಲಿ ಅಧಿಕಾರಿ ಸಿಬ್ಬಂದಿಗಳಿಗೆ ವಸತಿ ಗೃಹ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ಎಂದು ಶಾಸಕರು ಪ್ರಶ್ನಿಸಿದ್ದರು.

ಅವರಿಗೆ ಉತ್ತರಿಸಿದ ಗೃಹ ಸಚಿವರು, ಮೈಸೂರು ನಗರದ ಹೃದಯ ಭಾಗದಲ್ಲಿರುವ ಸರಸ್ವತಿಪುರಂ ಅಗ್ನಿಶಾಮಕ ಠಾಣೆಯು ಪಾರಂಪರಿಕ ಕಟ್ಟಡಗಳ ವ್ಯಾಪ್ತಿಗೆ ಒಳಪಟ್ಟಿದ್ದು, ಕಟ್ಟಡವು 1898 ರಲ್ಲಿ ನಿರ್ಮಾಣಗೊಂಡು ಸುಮಾರು 126 ವರ್ಷಗಳ ಹಳೆಯದಾದ ರಾಜರ ಕಾಲದ ಪಾರಂಪರಿಕ ಕಟ್ಟಡವಾಗಿರುತ್ತದೆ. ಸದರಿ ಕಟ್ಟಡದಲ್ಲಿ 1942 ನೇ ಇಸವಿಯಲ್ಲಿ ಅಗ್ನಿಶಾಮಕ ಠಾಣೆ ಪ್ರಾರಂಭವಾಗಿ ಅಂದಿನಿಂದಲೂ ಕಾರ್ಯ ನಿರ್ವಹಿಸುತ್ತಿದ್ದು ಈ ಕಟ್ಟಡದಲ್ಲಿ ಮುಖ್ಯ ಅಗ್ನಿಶಾಮಕ ಅಧಿಕಾರಿ, ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಹಾಗೂ ಅಗ್ನಿಶಾಮಕ ಠಾಣಾಧಿಕಾರಿಗಳ ಕಛೇರಿಗಳು, ಇತರೆ 64 ಅಧಿಕಾರಿ/ಸಿಬ್ಬಂದಿಗಳನ್ನೊಳಗೊಂಡ ಅಗ್ನಿಶಾಮಕ ಠಾಣೆ ಇದ್ದು, ದಿನದ 24 ಗಂಟೆಯು ಕರ್ತವ್ಯ ನಿರ್ವಹಿಸುತ್ತಾ ಸಾರ್ವಜನಿಕರ ಸೇವೆಗೆ ಸದಾ ಸನ್ನದ್ಧರಾಗಿರುತ್ತಾರೆ.

30–11–2019 ರಂದು ಮಳೆಯಿಂದಾಗಿ ಸರಸ್ವತಿಪುರಂ ಅಗ್ನಿಶಾಮಕ ಠಾಣೆಯ ಸ್ವಾಗತ ಕಮಾನು ಕುಸಿದು ಬಿದ್ದಿರುವುದರಿಂದ, ಸದರಿ ಕಟ್ಟಡವು ಸಹ ಶಿಥಿಲಾವಸ್ಥೆಯಲ್ಲಿರುವುದರ ಮೇರೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಪಾರಂಪರಿಕ ಸಮಿತಿಯ ನಡವಳಿಯಂತೆ, ಸದಸ್ಯ ಕಾರ್ಯದರ್ಶಿಗಳು, ಅರ್ಜಿದಾರರಿಂದ ಹಾಲಿ ಇರುವ ಕಟ್ಟಡದ ವಾಸ್ತು ಶೈಲಿಯನ್ನೇ ಹೋಲುವಂತಹ ನಿರ್ಮಾಣದ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಅಗತ್ಯ ನಕ್ಷೆಗಳು. 3ಡಿ ನಕ್ಷೆಗಳೊಂದಿಗೆ ಹಾಲಿ ಕಟ್ಟಡವನ್ನು ಕೆಡವಿ ಹೊಸ ಕಟ್ಟಡ ಪುನರ್ ನಿರ್ಮಾಣ ಮಾಡುವ ಪ್ರಸ್ತಾವನೆಯನ್ನು ಪಡೆದು ಮೈಸೂರು ಮಹಾನಗರ ಪಾಲಿಕೆ ಮುಖಾಂತರವಾಗಿ ಶೀಘ್ರವಾಗಿ ಪಡೆದು ಹಾಲಿ ಕಟ್ಟಡವನ್ನು ಕೆಡವಿ ಹೊಸ ಅಗ್ನಿಶಾಮಕ ಠಾಣೆ ಮತ್ತು ವಸತಿ ಗೃಹಗಳ ಕಟ್ಟಡ ನಿರ್ಮಾಣಕ್ಕೆ ನಿರ್ಣಯಿಸಲಾಗಿರುತ್ತದೆ ಎಂದು ಹೇಳಿದರು.

ಅಗ್ನಿಶಾಮಕ ಠಾಣೆಯನ್ನು ಕೆಡವಿ ಹೊಸದಾಗಿ ಅಗ್ನಿಶಾಮಕ ಠಾಣೆ ಹಾಗೂ ಆವರಣದಲ್ಲಿ ವಸತಿ ಗ್ರಹ ನಿರ್ಮಾಣ ಮಾಡಲು ರೂ. 30.00 ಕೋಟಿಗಳ ಅನುದಾನ ಮಂಜೂರು ಮಾಡುವ ಬಗ್ಗೆ ಸರ್ಕಾರದ ನಿಲುವೇನು ಎಂಬ ಪ್ರಶ್ನೆಗೆ ಉತ್ತರಿಸಿದ ಸಚಿವರು, ಹಳೆಯ ಅಗ್ನಿಶಾಮಕ ಠಾಣೆಯನ್ನು ಕೆಡವಿ ಹೊಸದಾಗಿ ಅಗ್ನಿಶಾಮಕ ಠಾಣಾ ಮತ್ತು 30 ವಸತಿ ಗೃಹಗಳ ಕಟ್ಟಡಗಳನ್ನು ನಿರ್ಮಾಣ ಮಾಡಲು ಲೋಕೋಪಯೋಗಿ ಇಲಾಖೆಯಿಂದ ರೂ. 30.00 ಕೋಟಿಗಳ ಅಂದಾಜು ದರ ಪಟ್ಟಿಯನ್ನು ಪಡೆದು ಅನುದಾನ ಮಂಜೂರು ಮಾಡುವಂತೆ ಅಗ್ನಿಶಾಮಕ ಇಲಾಖೆ 2025ರ ಆ.12 ರಂದು ಸರ್ಕಾರಕ್ಕೆ ಸಲ್ಲಿಸಿತ್ತು. ಅದರಂತೆ ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿ, ಆರ್ಥಿಕ ಇಲಾಖೆಯು ಸದರಿ ಪ್ರಸ್ತಾವನೆಯು ಹೊಸ ಯೋಜನೆಯಾಗಿದ್ದು, 2025–26 ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಒದಗಿಸಿರುವುದಿಲ್ಲ. ಪ್ರಸ್ತುತ ಆರ್ಥಿಕ ವಿಸ್ತರಣೆ ಇಲ್ಲದ ಹಿನ್ನಲೆಯಲ್ಲಿ ಹೆಚ್ಚುವರಿ ಅನುದಾನ ಅವಕಾಶವಾಗುವುದಿಲ್ಲವಾದ್ದರಿಂದ ಒದಗಿಸಲು ಪ್ರಸ್ತಾವನೆಯನ್ನು ಸದ್ಯಕ್ಕೆ ಮುಂದೂಡಲಾಗಿದೆ ಎಂದು ತಿಳಿಸಿದರು.

ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನ

ನಂಜನಗೂಡು, ಡಿ. 17 – ನಂಜನಗೂಡು ತಾಲೂಕು ಭಗೀರಥ ಉಪ್ಪಾರ ನೌಕರರ ಸಂಘದ ವತಿಯಿಂದ ನಂಜನಗೂಡು ತಾಲೂಕಿನ ಉಪ್ಪಾರ ಜನಾಂಗದ ವಿದ್ಯಾರ್ಥಿಗಳಿಗೆ 2024– 25 ನೇ ಸಾಲಿನಲ್ಲಿ ಎಸ್‌ಎಸ್‌ಎಲ್ ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೆ 85 ಕಿಂತ ಹೆಚ್ಚು ಅಂಕ ಪಡೆದಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನಿಸಲಾಗಿದ್ದು, ವಿದ್ಯಾರ್ಥಿಗಳು ತಮ್ಮ ದೃಢೀಕೃತ ಅಂಕ ಪಟ್ಟಿ, ಜಾತಿ ಪ್ರಮಾಣ ಪತ್ರ ಮತ್ತು ಆಧಾರ್ ಕಾರ್ಡ್, ದೂರವಾಣಿ ಸಂಖ್ಯೆ ಮತ್ತು ಭಾವಚಿತ್ರದೊಂದಿಗೆ ಡಿ.25 ರೊಳಗೆ ನಗರದ ಬಸವನಗುಡಿ ಬ್ಲಾಕ್ ನಲ್ಲಿರುವ ಆಸರೆ ಮನೆ ನಂ 4447, ಕೆ ಬಿ ಚನಬಸವ ಶೆಟ್ಟಿ ನಂಜನಗೂಡು ಇಲ್ಲಿಗೆ ಅರ್ಜಿ ಸಲ್ಲಿಸುವಂತೆ ತಾಲೂಕು ಭಗೀರಥ ನೌಕರರ ಸಂಘದ ಅಧ್ಯಕ್ಷ ಪ್ರಕಟಣೆಯಲ್ಲಿ ಕೋರಿದ್ದಾರೆ.

ಗೌರವಾನ್ವಿತ 4ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು.
ಓ.ಎಸ್.ನಂ: 1036/2021

ವಾದಿಗಳು: ಎಸ್. ಶಾಂತಕುಮಾರ್ ಇವರು ಮರಣ ಹೊಂದಿದ್ದು ಇವರ ವಾರಸುದಾರರು ಮತ್ತು ಇತರರು

ವಿರುದ್ಧ

ಪ್ರತಿವಾದಿಗಳು : ಶ್ರೀನಿವಾಸಮೂರ್ತಿ ಮತ್ತು ಇತರರು 4(**b**) : ಸಂಧ್ಯ ಎಂ ಪಿ ಬಿನ್ ಲೇಟ್ ಪ್ರಕಾಶ್ ಎಂ ಎಸ್ ಕೋಂ ಜಿ ಟಿ ಪ್ರದೀಪ್ ವಯಸ್ಸು 34 ವರ್ಷ 4(**C**) : ಶಿಲ್ಪ ಎಂ ಪಿ ಬಿನ್ ಲೇಟ್ ಪ್ರಕಾಶ್ ಎಂ ಎಸ್ ಕೋಂ ರವಿಪುಡಿಲಿ ವಯಸ್ಸು 31 ವರ್ಷ ಇಬ್ಬರ ವಾಸ:– ನಂ.17, ಸ್ಯಾಂಡಲ್‌ವುಡ್ ತೈಲ ಕಾರ್ಖಾನೆಯ ಹಿಂಭಾಗ, ಪಂಪಾಪತಿ ರಸ್ತೆ, ಜಯನಗರ ಎಕ್ಸ್‌ಟೆನ್ಷನ್, ಮೈಸೂರು 570014

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ದಾವೆಯನ್ನು ವಾದಿಗಳು ಪ್ರತಿವಾದಿಗಳ ವಿರುದ್ಧ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ಸಲ್ಲಿಸಿದ್ದು, ಈ ದಾವೆಯಲ್ಲಿ ನಿಮ್ಮನ್ನು 4(**b**) ಮತ್ತು 4(**c**) ನೇ ಪ್ರತಿವಾದಿಗಳನ್ನಾಗಿ ಮಾಡಿದ್ದು, ಈ ಸಂಬಂಧವಾಗಿ ನಿಮಗೆ ನ್ಯಾಯಾಲಯದಿಂದ ಸಮನ್ಸ್ ಜಾರಿಗೊಳಿಸಿದ್ದರೂ ಸಹಾ ನೀವು ಸದರಿ ನೋಟೀಸನ್ನು ಪಡೆದುಕೊಳ್ಳದೇ ಸತಾಯಿಸುತ್ತಿರುತ್ತೀರಿ. ಆದಕಾರಣ ಈ ದಾವೆಯು ದಿನಾಂಕ19/01/2026 ರಂದು ಬೆಳಿಗ್ಗೆ 11.00 ಗಂಟೆಗೆ ನಿಮ್ಮ ಹಾಜರಾತಿಗಾಗಿ ಇದ್ದು ಸದರಿ ದಿನದಂದು ತಾವುಗಳು ಖುದ್ದಾಗಿ ಅಥವಾ ನಿಮ್ಮ ವಕೀಲರ ಮೂಲಕ ಮೇಲ್ಕಂಡ ದಾವೆಯಲ್ಲಿ ಘನ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ಮೇಲ್ಕಂಡ ದಾವೆಯು ನಿಮ್ಮ ಗೈರು ಹಾಜರಿಯಲ್ಲಿ ಏಕ ಪಕ್ಷೀಯವಾಗಿ ಆದೇಶವಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/– ಶಿರಸ್ತೇದಾರರು
ಗೌರಾವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ವಾದಿಗಳ ಪರ ವಕೀಲರು
ಸಿ.ಎಂ. ಜಗದೀಶ್ ಬಿ.ಎಸ್ಸಿ, ಎಲ್‌ಎಲ್‌ಬಿ
ವಕೀಲರು, ನಂ1533,ಎನ್.ಟಿ.ರಸ್ತೆ,ಅಗ್ರಹಾರ, ಮೈಸೂರು
ದಿನಾಂಕ: 16–12–2025, ಮೈಸೂರು

ಗೃಹಲಕ್ಷ್ಮೀ ಸಂಬಂಧ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ತಪ್ಪು ಮಾಹಿತಿ

● ವಿಧಾನಸಭೆಯಲ್ಲಿ ಆಡಳಿತ–ವಿಪಕ್ಷ ಸದಸ್ಯರ ನಡುವೆ ವಾಗ್ವಾದ ● ಕೆಲ ಕಾಲ ಸದನದ ಕಲಾಪ ಮುಂದೂಡಿಕೆ



ಬೆಳಗಾವಿ, ಸುವರ್ಣ ವಿಧಾನಸೌಧ, ಡಿ.17(ಕೆಎಂಶಿ)– ಗೃಹಲಕ್ಷ್ಮಿ ಫಲಾನುಭವಿಗಳಿಗೆ ಹಣ ಪಾವತಿಗೆ ಸಂಬಂಧಿಸಿದಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸದನಕ್ಕೆ ತಪ್ಪು ಮಾಹಿತಿ ನೀಡಿ ಅಗೌರವ ತೋರಿದ್ದಾರೆ ಎಂಬ ಬಿಜೆಪಿ ಶಾಸಕರ ಆರೋಪ ವಿಧಾನಸಭೆಯಲ್ಲಿಂದು ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ವಾಗ್ವಾದಕ್ಕೆ ಎಡೆ ಮಾಡಿಕೊಟ್ಟು, ಸದನ ಕಲಾಪ ಕೆಲಕಾಲ ಮುಂದೂಡಿದ ಪ್ರಸಂಗ ನಡೆಯಿತು.

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸದನಕ್ಕೆ ಆಗಮಿಸಿ ಉತ್ತರದ ಬಗ್ಗೆ ಸ್ಪಷ್ಟನೆ ನೀಡಬೇಕೆಂದು ಬಿಜೆಪಿ ಸದಸ್ಯರು ಪಟ್ಟುಹಿಡಿದು ಆಗ್ರಹಿಸಿ, ಧರಣಿಗೆ ಮುಂದಾದರು.

ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, ಕಳೆದ ಮೂರು ದಿನಗಳಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಸದನದಲ್ಲಿ ಕಾಣುತ್ತಿಲ್ಲ, ಗೃಹಲಕ್ಷ್ಮಿ ಹಣ ಫಲಾನುಭವಿಗಳಿಗೆ ಪಾವತಿ ವಿಚಾರದಲ್ಲಿ ಸದನಕ್ಕೆ ತಪ್ಪು ಮಾಹಿತಿ ಕೊಟ್ಟಿದ್ದಾರೆ, ಈ ವಿಚಾರ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ನೋಟಿಸ್ ನೀಡಲಾಗಿತ್ತು, ಮೂರು ದಿನಗಳಿಂದ ಚರ್ಚೆಯಾಗುತ್ತಿದೆ, ಸಚಿವರು ಸದನದಲ್ಲಿ ಕಾಣುತ್ತಿಲ್ಲ, ಚಂದ್ರಲೋಕದಲ್ಲಿದ್ದಾರೆಯೇ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಚಿವರು ಉತ್ತರ ನೀಡುವಾಗ, ನಾವು ಸ್ಪಷ್ಟನೆ ಕೇಳಿದಾಗಲೂ ಫೆಬ್ರವರಿ ಹಣ ಕೊಟ್ಟಿದ್ದೇವೆ ಎಂದಿದ್ದಾರೆ. ಅಧಿಕಾರಿಗಳ ಬಳಿ ಸರಿಯಾದ ಮಾಹಿತಿ ಪಡೆದು ಸೂಕ್ತ ಉತ್ತರ ಕೊಡಬೇಕಲ್ಲವೇ? ಸಚಿವರ ಉತ್ತರವನ್ನು ಸತ್ಯವೆಂದೇ ಭಾವಿಸುತ್ತೇವೆ. ಈ ರೀತಿ ಆಗುವುದಾದರೆ ಮಂತ್ರಿಗಳು ಹೇಳುವುದು ಬರೀ ಸುಳ್ಳು ಎಂದಾಗುತ್ತದೆ ಎಂದರು.

ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಮುಖ್ಯಮಂತ್ರಿಗಳ ಗಮನಕ್ಕೆ ಬಂದಾಗ ಸ್ಪಷ್ಟನೆ ನೀಡಿದ್ದಾರೆ.

ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ವಿಷಾದ

ಗೃಹಲಕ್ಷ್ಮಿ ಯೋಜನೆ ಹಣದ ವಿಚಾರವಾಗಿ ವಿಧಾನಸಭೆ ಅಧಿವೇಶನದಲ್ಲಿ ತಪ್ಪು ಮಾಹಿತಿ ನೀಡಿ ವಿರೋಧ ಪಕ್ಷಗಳ ತೀವ್ರ ಟೀಕೆ, ವಿರೋಧಕ್ಕೆ ಗುರಿಯಾಗಿರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಬುಧವಾರ ಸದನದಲ್ಲಿ ಸ್ಪಷ್ಟನೆ ನೀಡಿದರು. ಗೃಹಲಕ್ಷ್ಮಿ ಯೋಜನೆಯ ಎರಡು ತಿಂಗಳ ಹಣ ಪಾವತಿಯಲ್ಲಿ ವಿಳಂಬವಾಗಿರುವುದನ್ನು ಒಪ್ಪಿಕೊಂಡ ಅವರು, ತನಗೆ ಜವಾಬ್ದಾರಿಯ ಅರಿವಿದ್ದು, ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದರು.

ಮುಖ್ಯಮಂತ್ರಿಗಳು ಈಗಾಗಲೇ ಸದನದಲ್ಲಿ ಈ ವಿಷಯವನ್ನು ಆದಷ್ಟು ಶೀಘ್ರದಲ್ಲಿ ಪರಿಹರಿಸುವುದಾಗಿ ಹೇಳಿದ್ದಾರೆ. ಹಣವನ್ನು ಬೇರೆ ಕಡೆಗೆ ವರ್ಗಾಯಿಸಲಾಗಿಲ್ಲ ಅಥವಾ ಯಾವುದೇ ದುರುಪಯೋಗವಾಗಿಲ್ಲ ಎಂದು ಸಚಿವೆ ಸ್ಪಷ್ಟಪಡಿಸಿದರು. ಎರಡು ತಿಂಗಳ ಹಣ ಪಾವತಿಯಲ್ಲಿ ವ್ಯತ್ಯಯವಾಗಿರುವುದು ಪರಿಶೀಲನೆ ವೇಳೆ ಬೆಳಕಿಗೆ ಬಂದಿದ್ದು, ಮುಂದಿನ ದಿನಗಳಲ್ಲಿ ಅದನ್ನು ಸರಿಪಡಿಸುವುದಾಗಿ ಅವರು ತಿಳಿಸಿದರು. ತಮ್ಮ ಮಾತಿನಿಂದ ಯಾರಿಗಾದರೂ ನೋವಾಗಿದ್ದರೆ ವಿಷಾದ ವ್ಯಕ್ತಪಡಿಸುವುದಾಗಿ ಲಕ್ಷ್ಮೀ ಹೇಳಿದರು.

ಫೆಬ್ರವರಿ ಮತ್ತು ಮಾರ್ಚ್ ಹಣ ಪಾವತಿಯಾಗದಿದ್ದರೆ, ಫಲಾನುಭವಿಗಳಿಗೆ ಹಣ ಪಾವತಿಸುವ ಭರವಸೆ ನೀಡಿದ್ದಾರೆ. ಸದನವನ್ನು ತಪ್ಪು ದಾರಿಗೆ ಎಳೆಯುವ ಯಾವ ಉದ್ದೇಶವೂ ಮಂತ್ರಿಗಳಿಗಿಲ್ಲ ಎಂದು ಸ್ಪಷ್ಟನೆ ನೀಡಿದರು. ಇದಕ್ಕೆ ತೃಪ್ತರಾಗದ ಬಿಜೆಪಿ ಸದಸ್ಯರು, ಸಂಬಂಧಪಟ್ಟ ಸಚಿವರು ಸದನಕ್ಕೆ ಆಗಮಿಸಬೇಕು ಎಂದು ಪಟ್ಟುಹಿಡಿದರು.

ಮಧ್ಯಪ್ರವೇಶಿಸಿದ ಸಭಾಧ್ಯಕ್ಷ ಯು.ಟಿ.ಖಾದರ್, ಸದನಕ್ಕೆ ತಪ್ಪು ಮಾಹಿತಿ ಕೊಟ್ಟಿದ್ದಾರೆಂದು ಆಕ್ಷೇಪ ಮಾಡುತ್ತೀರಿ. ಸಂಬಂಧಪಟ್ಟ ಸಚಿವರನ್ನು ಕರೆದು ಮಾತನಾಡಿ ಸೂಕ್ತ ಉತ್ತರ ಕೊಡಿಸುವುದಾಗಿ ಭರವಸೆ ನೀಡಿ, ಪ್ರಶ್ನೋತ್ತರ ಕಲಾಪ ನಡೆಸಲು ಸಹಕರಿಸಿ ಎಂದರು.

ಬಿಜೆಪಿ ಸದಸ್ಯರು ಒಮ್ಮೆಲೇ ಮಾತನಾಡಿ, ಇದೇ ವಿಚಾರ ಮೂರು ದಿನಗಳಿಂದ ಚರ್ಚೆಯಾಗುತ್ತಿದೆ. ಇದು ಕೇವಲ ಹಣದ ವಿಚಾರವಲ್ಲ. ಸದನಕ್ಕೆ ತಪ್ಪು ಮಾಹಿತಿ ಕೊಟ್ಟಿದ್ದಾರೆ. ಆ ರೀತಿ ತಪ್ಪು ಮಾಹಿತಿ ಕೊಟ್ಟವರನ್ನು ಕರೆಸಿ ಸ್ಪಷ್ಟಪಡಿಸಿದ ನಂತರವೇ ಸದನ ನಡೆಸಿ, ಅಲ್ಲಿಯವರೆಗೂ ನಾವು ಪ್ರಶ್ನೋತ್ತರ ನಡೆಸಲು ಸಹಕರಿಸುವುದಿಲ್ಲ. ಮೂರು ದಿನಗಳಿಂದ ಸಚಿವರು ಎಲ್ಲಿ ಹೋಗಿದ್ದಾರೆ.

ಒಂದು ಕೋಟಿ 20 ಲಕ್ಷ ಜನರಿಗೆ ಸಂಬಂಧಿಸಿದ ವಿಚಾರವಿದು, ಅವರ ಖಾತೆಗಳಿಗೆ ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಹಣ ಪಾವತಿಯಾಗಿಲ್ಲ. ಎರಡು ತಿಂಗಳು ಬಿಟ್ಟು ಮುಂದಿನ ತಿಂಗಳ ಹಣ ಕೊಟ್ಟಿರುವುದು ಇತಿಹಾಸದಲ್ಲಿ ನಡೆದಿಲ್ಲ. ಮೋಸ ಮಾಡಲು ಈ ರೀತಿ ಮಾಡಿದ್ದಾರೆಯೇ, ಹಣ ಸ್ವಂತಕ್ಕೆ ಬಳಸಿದ್ದಾರೆಯೇ, ಪಕ್ಷಕ್ಕೆ ಕೊಟ್ಟಿದ್ದಾರೆಯೇ ಅಥವಾ ಖಜಾನೆ ಖಾಲಿಯಾಗಿದೆಯೇ ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಭದ್ರಾ ಮೇಲ್ದಂಡೆ ಯೋಜನೆ ಅನುದಾನ, ಮನ್ರೇಗಾ, ಜಲ ಜೀವನ್ ಮಿಷನ್ ಬಾಕಿ ಅನುದಾನ ಬಿಡುಗಡೆ ಮಾಡದ ಕೇಂದ್ರ ಸರ್ಕಾರ ದಿವಾಳಿಯಾಗಿದೆ ಎನ್ನಲು ಸಾಧ್ಯವೇ ಎಂದರು.

ಜನ ಪ್ರತಿನಿಧಿಯಾಗಿ ಟೆಂಗಿನಕಾಯಿ ತಮ್ಮ ಕ್ಷೇತ್ರದ ಜನರ ಅಭಿಪ್ರಾಯದ ಆಧಾರದ ಮೇಲೆ ಪ್ರಶ್ನೆ ಕೇಳಿದ್ದಾರೆ. ಸಚಿವರು ಉತ್ತರ ನೀಡಿದಾಗಲೂ ನಾನು ಇದ್ದೆ. ಕಂತುಗಳ ಆಧಾರದ ಮೇಲೆ ಹಣ ಪಾವತಿಯಾದ ಬಗ್ಗೆ ಉತ್ತರಿಸಿದ್ದಾರೆ. ಸೆಪ್ಟೆಂಬರ್‌ವರೆಗೆ ಬಿಡುಗಡೆಯಾಗಿದೆ ಎಂಬುದಾಗಿ ಸಚಿವರು ಹೇಳಿದ್ದಾರೆ. ಈ ಮಧ್ಯೆ 2 ತಿಂಗಳು ಬಂದಿಲ್ಲ ಎಂಬುದರ ಬಗ್ಗೆ ಪ್ರಶ್ನೆ ಎತ್ತಿದ್ದು, ಹಣಕಾಸು ಇಲಾಖೆ ಜವಾಬ್ದಾರಿ ಹೊತ್ತಿರುವ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿದ್ದಾರೆ.

ಬಿಜೆಪಿ ಸರ್ಕಾರ ಇದ್ದಾಗ ಕೇಂದ್ರದಲ್ಲಿ ನಿರ್ಮಲಾ ಸೀತರಾಮನ್ ಬಜೆಟ್ ಮಂಡಿಸಿ ಭದ್ರಾ ಮೇಲ್ದಂಡೆ ಯೋಜನೆಗೆ 5,300 ಕೋಟಿ ರೂ. ಅನುದಾನ ಘೋಷಿಸಿದರು. ಅದರ ಆಧಾರದ ಮೇಲೆ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಬಜೆಟ್‌ನಲ್ಲಿ ಹಣ ಘೋಷಿಸಿದರು. ಇದುವರೆಗೂ ಹಣ ಬಿಡುಗಡೆ ಆಗಿಲ್ಲ. ನರೇಗಾ ಹಾಗೂ ಜಲ ಜೀವನ್ ಮಿಷನ್ ಯೋಜನೆಯ ಸಾವಿರಾರು ಕೋಟಿ ಹಣ ಬಾಕಿ ಇದೆ. ಹಾಗೆಂದು ಕೇಂದ್ರ ಸರ್ಕಾರ ದಿವಾಳಿಯಾಗಿದೆ ಎನ್ನಲು ಆಗುವುದಿಲ್ಲ.

ನಮ್ಮ ಗ್ಯಾರಂಟಿ ಯೋಜನೆಗಳಿಗೆ ಬದ್ಧವಾಗಿದ್ದೇವೆ. ಎನ್‌ಡಿಎ ದೇಶದ ಬೇರೆ ರಾಜ್ಯಗಳಲ್ಲಿ ನಮ್ಮ ಯೋಜನೆಗಳ ನಕಲು ಮಾಡಿ ಚುನಾವಣೆ ಗೆದ್ದು ಅಧಿಕಾರ ಪಡೆದಿದೆ. ನಮ್ಮ ಯೋಜನೆಗಳು ಇಲ್ಲದಿದ್ದರೆ, ನೀವು ಗೆಲ್ಲಲು ಸಾಧ್ಯವಾಗುತ್ತಿರಲಿಲ್ಲ ಎಂದರು.

ಕೃಷಿ ಸಚಿವ ಚಲುವರಾಯಸ್ವಾಮಿ ಮಾತನಾಡಲು ಮುಂದಾದಾಗ, ಆಡಳಿತ ಮತ್ತು ಬಿಜೆಪಿ ಸದಸ್ಯರ ನಡುವೆ ಏರಿದ ದನಿಯಲ್ಲಿ ಮಾತಿನ ಚಕಮಕಿ ನಡೆದು ಸದನ ಗೊಂದಲ, ಗದ್ದಲದ ಗೂಡಾಯಿತು.

ಸಭಾಧ್ಯಕ್ಷರು ಪ್ರಶ್ನೋತ್ತರ ಕಲಾಪಕ್ಕೆ ಸಹಕರಿಸುವಂತೆ ಮನವಿ ಮಾಡುತ್ತಿದ್ದಂತೆ ಬಿಜೆಪಿ ಶಾಸಕರು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಸಭಾಧ್ಯಕ್ಷರ ಪೀಠದ ಮುಂದಿನ ಜಾಗಕ್ಕೆ ಧಾವಿಸಿ ಧರಣಿಗೆ ಮುಂದಾದರು. ಸದನ ನಿಯಂತ್ರಣದಲ್ಲಿ ಬಾರದಿರುವುದನ್ನು ಗಮನಿಸಿದ ಸಭಾಧ್ಯಕ್ಷರು ಕಲಾಪವನ್ನು ಕೆಲಕಾಲ ಮುಂದೂಡಿದರು.

ಎಲ್. ಪ್ರಭುಗೆ ಪಿಹೆಚ್.ಡಿ



ಮೈಸೂರು, ಡಿ. 17– ಡಾ. ಲಾನ್ಸಿ ಡಿಸೋಜಾ ಅವರ ಮಾರ್ಗದರ್ಶನದಲ್ಲಿ ಎಲ್. ಪ್ರಭು ಅವರು 'ಮನೋವಿಜ್ಞಾನ' ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಮಿತ್ರ 46
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ

ರೌಡಿಶೀಟರ್ ಮಹೇಶ್ ಹತ್ಯೆ ಪ್ರಕರಣ: ಐವರ ಬಂಧನ

ಮಂಡ್ಯ, ಡಿ.17– ಪಾಂಡವಪುರ ತಾಲೂಕಿನ ಲಕ್ಷ್ಮೀಸಾಗರದ ರೌಡಿಶೀಟರ್ ಮಹೇಶ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ನಗರದ ಎಸ್ಪಿ ಕಚೇರಿ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಣಿಕ್ಯನಹಳ್ಳಿ ಗ್ರಾಮದ ಭೀಮ ಅಲಿಯಾಸ್ ಚಂದ್ರಶೇಖರ, ಮಂಡ್ಯ ತಾಲೂಕಿನ ಆಲ್ಕೆರೆ ಗ್ರಾಮದ ಬಸವರಾಜು ಅಲಿಯಾಸ್ ಶಿವ, ಹೇಮಂತ್ ಕುಮಾರ್ ಅಲಿಯಾಸ್ ಹೇಮಂತ, ಬೇವಿನಕುಪ್ಪೆ ಗ್ರಾಮದ ಶಶಾಂಕ್ ಹಾಗೂ ಮಲ್ಲಯ್ಯನ ದೊಡ್ಡಿ ಗ್ರಾಮದ ಸುಮಂತ್ ಅಲಿಯಾಸ್ ಮಟ್ಟ ಬಂಧಿತ ಆರೋಪಿಗಳು. ನ.29ರಂದು ಮಧ್ಯರಾತ್ರಿ 12.30ರಲ್ಲಿ ರೌಡಿಶೀಟರ್ ಮಹೇಶ್ ತನ್ನ ಸ್ನೇಹಿತರಾದ ಮರೀಗೌಡ ಮತ್ತು ಕಿರಣ್ ಎಂಬುವರೊಂದಿಗೆ ಜಕ್ಕನಹಳ್ಳಿಯಿಂದ ಲಕ್ಷ್ಮೀಸಾಗರಕ್ಕೆ ಹೋಗುತ್ತಿದ್ದ ವೇಳೆ ಅಮೃತಿ ಗ್ರಾಮದ ಬಳಿ ದುಷ್ಕರ್ಮಿಗಳು ಕಣ್ಣಿಗೆ ಖಾರದ ಪುಡಿ ಎರಚಿ ಬೈಕ್ ಅಡ್ಡಗಟ್ಟಿದ್ದರು. ಈ ವೇಳೆ ಮರೀಗೌಡ ಹಾಗೂ ಕಿರಣ್ ಬೈಕ್‌ನಲ್ಲಿ ಪರಾರಿಯಾದರೆ, ಮಹೇಶನನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಭೀಕರವಾಗಿ ಹತ್ಯೆ ಮಾಡಿದ್ದರು.

ರೌಡಿಶೀಟರ್ ಮಹೇಶ್ ಹಾಗೂ ಭೀಮ, ಬಸವರಾಜು ಇವರೆಲ್ಲರೂ ಸ್ನೇಹಿತರಾಗಿದ್ದು, ಹಳೇ ವೈಷಮ್ಯಕ್ಕೆ ಆಗಾಗ ಬಾರ್ ಸೇರಿದಂತೆ ಮತ್ತಿತರ ಕಡೆ ಹೊಡೆದಾಡಿಕೊಂಡಿದ್ದಾರೆ. ಆದರೆ ಇದುವರೆಗೂ ಗಲಾಟೆ ವಿಚಾರವಾಗಿ ಯಾವುದೇ ದೂರು ದಾಖಲಾಗಿಲ್ಲ. ಇವರ ಹಳೇ ವೈಷಮ್ಯ ವಿಕೋಪಕ್ಕೆ ಹೋಗಿ ಮಹೇಶ್ ನನ್ನ ಮೇಲೆ ಹಲ್ಲೆ ಮಾಡಬಹುದು ಎಂಬ ಹಿನ್ನೆಲೆಯಲ್ಲಿ ಭೀಮ ಹಾಗೂ ಆತನ ಸ್ನೇಹಿತರಾದ ಬಸವರಾಜು ಮಾತನಾಡಿಕೊಂಡು ಶಶಾಂಕ್, ಹೇಮಂತ್ ಮತ್ತು ಸುಮಂತ ಸಹಾಯ ಪಡೆದು ಹತ್ಯೆ ಮಾಡಿದ್ದಾರೆ ಎಂದರು.

ಹತ್ಯೆಗೂ ಮುನ್ನ ಅಂದು ಮಹೇಶ್, ಮರೀಗೌಡ ಹಾಗೂ ಕಿರಣ್ ಜಕ್ಕನಹಳ್ಳಿಯ ಬಾರ್‌ವೊಂದರಲ್ಲಿ ಮದ್ಯಸೇವನೆ ಮಾಡುತ್ತಿರುವ ವಿಚಾರ ತಿಳಿದ ಭೀಮ ಮತ್ತು ಬಸವರಾಜು ತಂಡ ಹತ್ಯೆಗೆ ಸ್ಕೆಚ್ ಹಾಕಿ ಮಹೇಶ್ ಮತ್ತು ಸ್ನೇಹಿತರು ಬೈಕ್‌ನಲ್ಲಿ ಬಾರ್‌ನಿಂದ ತೆರಳಿದಾಗ ಹಿಂಬಾಲಿಸಿದ್ದಾರೆ. ನಂತರ ಅಮೃತಿ ಗ್ರಾಮದ ಬಳಿ ಬಂದಾಗ ಅವರ ಮೇಲೆ ಹಲ್ಲೆ ನಡೆಸಿ, ಹತ್ಯೆಗೈದಿದ್ದಾರೆ ಎಂದರು.

ಹತ್ಯೆಯಾದ ಮಹೇಶ್ ರೌಡಿಶೀಟರ್ ಆಗಿದ್ದು, 8 ಪ್ರಕರಣಗಳಲ್ಲಿ ಭಾಗಿಯಾಗಿದ್ದಾನೆ. ಈ ಹಿಂದೆ ಇವನನ್ನು ಬೀದರ್‌ಗೆ ಗಡಿಪಾರು ಮಾಡಲಾಗಿತ್ತು. ಗಡಿಪಾರು ಮುಗಿದ ಬಳಿಕ ಗ್ರಾಮಕ್ಕೆ ಮರಳಿದ್ದ. ಈತ ಬೆಂಗಳೂರಿನಲ್ಲಿ ಆಟೋ ಚಾಲಕನಾಗಿದ್ದ. ಪ್ರಕರಣಗಳ ವಿಚಾರಣೆ ಇದ್ದ ವೇಳೆ ಗ್ರಾಮಕ್ಕೆ ಬರುತ್ತಿದ್ದ ಎಂದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ಆರೋಪಿಗಳ ಪತ್ತೆಗೆ ಎಎಸ್ಪಿಗಳಾದ ತಿಮ್ಮಯ್ಯ, ಗಂಗಾಧರಸ್ವಾಮಿ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಶಾಂತಮಲ್ಲಪ್ಪ, ಇನ್ಸ್‌ಪೆಕ್ಟರ್ ಶರತ್‌ಕುಮಾರ್ ನೇತೃತ್ವದಲ್ಲಿ ಸಿಬ್ಬಂದಿಗಳ ತಂಡ ರಚಿಸಲಾಗಿತ್ತು. ಆರೋಪಿಗಳ ಜಾಡು ಹಿಡಿದ ತನಿಖಾ ತಂಡ ಬೆಂಗಳೂರಿನ ಜಿಗಣಿ ಬಳಿ ಎಲ್ಲಾ ಆರೋಪಿಗಳನ್ನು ಬಂಧಿಸಲು ಯಶಸ್ವಿಯಾಗಿದ್ದಾರೆ ಎಂದು ಶ್ಲಾಘಿಸಿದರು. ಗೋಷ್ಠಿಯಲ್ಲಿ ಎಎಸ್ಪಿಗಳಾದ ತಿಮ್ಮಯ್ಯ, ಗಂಗಾಧರ ಸ್ವಾಮಿ, ಡಿವೈಎಸ್ಪಿ ಶಾಂತಮಲ್ಲಪ್ಪ ಇದ್ದರು.



ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿದರು.

ಒಂಟಿ ಮಹಿಳೆಯರ ಗುರಿ: ಸರಗಳ್ಳನ ಬಂಧನ

ಮಂಡ್ಯ: ಒಂಟಿ ಮಹಿಳೆಯರನ್ನು ಗುರಿಯಾಗಿಸಿಕೊಂಡು ಸರಗಳ್ಳತನ ಮಾಡುತ್ತಿದ್ದ ಆರೋಪಿ ಬಂಧಿಸುವಲ್ಲಿ ಪಾಂಡವಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ ಎಂದು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಮೂಲತಃ ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲೂಕಿನ ಚಿಕ್ಕೂರು ಗ್ರಾಮದ ದರ್ಶನ್(19) ಬಂಧಿತ ಆರೋಪಿ. ಮೈಸೂರಿನ ಹೂಟಗಳ್ಳಿಯಲ್ಲಿ ವಾಸವಿದ್ದ ದರ್ಶನ್ ಶೋಕಿ ಮತ್ತು ವೈಯಕ್ತಿಕ ಚಟಗಳಿಗಾಗಿ ಸರಗಳ್ಳತನಕ್ಕೆ ಇಳಿದಿದ್ದ ಎನ್ನಲಾಗಿದೆ. ಆರೋಪಿಯಿಂದ 5.60 ಲಕ್ಷ ರೂ. ಮೌಲ್ಯದ 47 ಗ್ರಾಂ ತೂಕದ ಚಿನ್ನಾಭರಣ, ಕೃತ್ಯಕ್ಕೆ ಬಳಸಿದ್ದ ಬೈಕ್ ಅನ್ನು ವಶಪಡಿಸಿಕೊಳ್ಳಲಾಗಿದೆ.

ಡಿ.7ರಂದು ಮಧ್ಯಾಹ್ನ 3.30ರಲ್ಲಿ ಪಾಂಡವಪುರ ತಾಲೂಕಿನ ಕಟ್ಟು ಗ್ರಾಮದ ನಿವಾಸಿ ಸೀತಾರಾಮು ಅವರ ಪತ್ನಿ ಜಯಮ್ಮ ತಮ್ಮ ಮನೆ ಮುಂದೆ ಕುಳಿತಿದ್ದಾಗ ಕುಡಿಯಲು ನೀರು ಕೇಳುವ ನೆಪದಲ್ಲಿ ಬೈಕ್‌ನಲ್ಲಿ ಬಂದ ಈತ ನೀರು ಕುಡಿದ ಬಳಿಕ ಜಯಮ್ಮ ಅವರ ಕತ್ತಿನಲ್ಲಿದ್ದ 7 ಗ್ರಾಂ ತೂಕದ ಚಿನ್ನದ ಗುಂಡು, 3 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಕಿತ್ತು ಪರಾರಿಯಾಗಿದ್ದ. ಈ ಸಂಬಂಧ ದೂರು ದಾಖಲಿಸಿಕೊಂಡಿದ್ದ ಪಾಂಡವಪುರ ಪೊಲೀಸರು ಘಟನೆ ನಡೆದ 24 ಗಂಟೆಯಲ್ಲೇ ಆರೋಪಿಯನ್ನು ಬಂಧಿಸಿದ್ದಾರೆ. ಅಲ್ಲದೇ ಇದೇ ರೀತಿ ಮತ್ತೆರಡು ಸರಗಳ್ಳತನ ಪ್ರಕರಣದಲ್ಲಿ ಭಾಗಿಯಾಗಿದ್ದಾನೆ ಎಂದು ಎಸ್ಪಿ ತಿಳಿಸಿದರು.

ರೌಡಿ ಚಟುವಟಿಕೆ ಕಡಿವಾಣಕ್ಕೆ ಕ್ರಮ

ಮಂಡ್ಯ: ಜಿಲ್ಲೆಯಲ್ಲಿ ರೌಡಿ ಚಟುವಟಿಕೆಗಳನ್ನು ಹಾಗೂ ಸರಗಳ್ಳತನಕ್ಕೆ ಕಡಿವಾಣ ಹಾಕಲು ಕ್ರಮ ಕೈಗೊಳ್ಳಲಾಗುವುದು ಎಂದು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಲಕ್ಷ್ಮೀಸಾಗರದ ರೌಡಿಶೀಟರ್ ಮಹೇಶ್ ಹತ್ಯೆ ಹೊರತುಪಡಿಸಿದರೆ, ಆತನ ಹತ್ಯೆ ಪ್ರಕರಣದ ಆರೋಪಿಗಳ ಮೇಲೆ ಯಾವುದೇ ದೂರುಗಳಿಲ್ಲ. ಜೊತೆಗೆ ರೌಡಿಶೀಟರ್‌ಗಳನ್ನು ಹತೋಟಿಗೆ ತರಲು ಪೊಲೀಸ್ ಇಲಾಖೆ ಮುಂದಾಗಿದೆ. ಆ ನಿಟ್ಟಿನಲ್ಲಿ ಮೂವರು ರೌಡಿಶೀಟರ್‌ಗಳ ಮೇಲೆ ಗುಂಡಾ ಕಾಯ್ದೆ ತೆರೆದು ಬಂಧಿಸಲಾಗಿದೆ. ಈ ಪೈಕಿ ಒಬ್ಬ ಬಳ್ಳಾರಿ, ಮತ್ತಿಬ್ಬರು ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾರೆ. ಇನ್ನೂ ಹಲವು ರೌಡಿಶೀಟರ್ ಮೇಲೆ ನಿಗಾ ವಹಿಸಲಾಗಿದ್ದು, ರೌಡಿ ಚಟುವಟಿಕೆಗಳಿಗೆ ಕಡಿವಾಣ ಹಾಕಲಾಗಿದೆ ಎಂದರು.

ಜಿಲ್ಲೆಯಲ್ಲಿ ಪ್ರಸಕ್ತ ವರ್ಷ 10 ಸರಗಳ್ಳತನ ಪ್ರಕರಣ ದಾಖಲಾಗಿವೆ. ಕೆ.ಆರ್.ಪೇಟೆ, ಮಳವಳ್ಳಿ, ಶ್ರೀರಂಗಪಟ್ಟಣ, ಪಾಂಡವಪುರದಲ್ಲಿ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಕಳ್ಳತನದಲ್ಲಿ ಮಹಿಳೆಯರು ಭಾಗಿಯಾಗಿರುವ ಬಗ್ಗೆ ಮಾಹಿತಿ ಇದೆ. ಹೆಚ್ಚು ಮಹಿಳೆಯರು ಸೇರುವ ಬಸ್ ನಿಲ್ದಾಣ ಹಾಗೂ ಬಸ್‌ಗಳನ್ನೇ ಗುರಿಯಾಗಿಸಿಕೊಂಡು ಕಳ್ಳತನ ಮಾಡಲಾಗುತ್ತಿದೆ. ಕಳ್ಳರ ಪತ್ತೆ ಹಚ್ಚಲು ಕ್ರಮ ವಹಿಸಲಾಗುತ್ತಿದೆ. ಆದರೆ ಬಸ್ ನಿಲ್ದಾಣಗಳಲ್ಲಿರುವ ಸಿಸಿ ಕ್ಯಾಮರಾ ಸಮರ್ಪಕವಾಗಿಲ್ಲದ ಕಾರಣ ಕಳ್ಳರ ಪತ್ತೆ ಹಚ್ಚಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಬಸ್ ನಿಲ್ದಾಣಗಳಲ್ಲಿ ಗುಣಮಟ್ಟದ ಸಿಸಿ ಕ್ಯಾಮರಾಗಳನ್ನು ಅಳವಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದರು.

ಮಕ್ಕಳಿಗೆ ಪಲ್ಸ್ ಪೋಲಿಯೋ ಕಡ್ಡಾಯ



ಸಭೆಯಲ್ಲಿ ತಹಸೀಲ್ದಾರ್ ಜಿ.ಆದರ್ಶ್ ಮಾತನಾಡಿದರು.

ನಾಗಮಂಗಲ, ಡಿ.17– ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ಡಿ.21ರಿಂದ 24ರವರೆಗೆ ನಡೆಯಲಿದ್ದು, ಐದು ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯವಾಗಿ ಲಸಿಕೆ ನೀಡುವಂತೆ ತಹಸೀಲ್ದಾರ್ ಜಿ.ಆದರ್ಶ್ ಆರೋಗ್ಯ ಇಲಾಖೆ ಸಿಬ್ಬಂದಿಗಳಿಗೆ ಸೂಚಿಸಿದರು.

ಪಟ್ಟಣದ ಟಿಹೆಚ್‌ಓ ಕಚೇರಿ ಸಭಾಂಗಣದಲ್ಲಿ ನಡೆದ ತಾಲೂಕು ಮಟ್ಟದ ಪಲ್ಸ್ ಪೋಲಿಯೋ ಕಾರ್ಯಪಡೆ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಪುರಸಭೆ ಕಸ ವಿಲೇವಾರಿ ವಾಹನಗಳಲ್ಲಿ ಪೋಲಿಯೋ ಲಸಿಕಾ ಕಾರ್ಯಕ್ರಮದ ಕುರಿತು ಆಡಿಯೋ ಮೂಲಕ, ಪ್ರಮುಖ ಸ್ಥಳಗಳಾದ ಬಸ್ ನಿಲ್ದಾಣ, ಮಿನಿವಿಧಾನಸೌಧ, ಬೆಳ್ಳೂರು ಪಪಂ ವ್ಯಾಪ್ತಿ ಸೇರಿದಂತೆ ಟೋಲ್‌ಗಳಲ್ಲಿ ಪ್ರಚಾರ ಕೈಗೊಳ್ಳುವಂತೆ ತಿಳಿಸಿದರು.

ತಾಲೂಕು ಆರೋಗ್ಯಾಧಿಕಾರಿ ಡಾ. ನಾರಾಯಣ್ ಮಾತನಾಡಿ, ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕಾಗಿ ತಾಲೂಕಿನಲ್ಲಿ 151 ತಂಡ ರಚಿಸಲಾಗಿದೆ. ಒಟ್ಟು 71 ಬೂತ್‌ಗಳಲ್ಲಿ ಗ್ರಾಮೀಣ ಭಾಗದ 6625 ಹಾಗೂ ನಗರ ಪ್ರದೇಶದ 1744 ಮಕ್ಕಳು ಸೇರಿದಂತೆ ಒಟ್ಟು 8369 ಮಕ್ಕಳಿಗೆ ಲಸಿಕೆ ಹಾಕಲಾಗುವುದು ಎಂದರು.

ಈ ವೇಳೆ ಎಆರ್‌ಟಿಓ ಹೊನ್ನೇಗೌಡ, ಬಿಇಓ ಲೋಕೇಶ್, ವೈದ್ಯರು ಹಾಗೂ ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

ಕನ್ನಡ ನಾಡು, ನುಡಿ ರಕ್ಷಣೆಗೆ ಹೋರಾಟ

ಕೆ.ಆರ್.ಪೇಟೆ, ಡಿ.17– ಕನ್ನಡ ನಾಡು–ನುಡಿ, ನೆಲ–ಜಲದ ಸಂರಕ್ಷಣೆ ಸೇರಿದಂತೆ ರಾಜ್ಯದ ಜ್ವಲಂತ ಸಮಸ್ಯೆಗಳ ನಿರ್ಮೂಲನೆಗೆ ಜಯ ಕರ್ನಾಟಕ ಸಂಘಟನೆ ಕ್ರಿಯಾಶೀಲವಾಗಿ ರಾಜ್ಯದ ಉದ್ದಗಲಕ್ಕೂ ಹೋರಾಡುತ್ತಿದೆ ಎಂದು ಜಯ ಕರ್ನಾಟಕ ಸಂಘಟನೆ ರಾಜ್ಯಾಧ್ಯಕ್ಷ ಡಾ.ಜಗದೀಶ್ ತಿಳಿಸಿದರು.

ಪಟ್ಟಣದ ಟಿ.ಬಿ.ಬಡಾವಣೆಯಲ್ಲಿ ತಾಲೂಕು ಜಯ ಕರ್ನಾಟಕ ಸಂಘಟನೆಯಿಂದ ನಡೆದ ಕನ್ನಡ ರಾಜ್ಯೋತ್ಸವ ಉದ್ಘಾಟಿಸಿ, ಸಾಧಕರು, ನಿವೃತ್ತ ಯೋಧರು ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಅವರು ಮಾತನಾಡಿದರು.

ಮುತ್ತಪ್ಪ ರೈ ಅವರಿಂದ ಸ್ಥಾಪಿತವಾದ ಜಯ ಕರ್ನಾಟಕ ಸಂಘಟನೆ ಕನ್ನಡ ಭಾಷೆ, ನೆಲ, ಜಲ ಹಾಗೂ ಸಂಸ್ಕೃತಿ ಉಳಿವಿಗಾಗಿ ರಾಜ್ಯದ ಎಲ್ಲಾ ಜಿಲ್ಲಾ, ತಾಲೂಕುಗಳಲ್ಲಿ ಶಾಖೆಗಳನ್ನು ತೆರೆದು ಹೋರಾಟ ಮಾಡುತ್ತಿದೆ. ಆ ಮೂಲಕ ಕನ್ನಡದ ಅಸ್ಮಿತೆ ಎತ್ತಿ ಹಿಡಿದಿದೆ ಎಂದರು.

ಕನ್ನಡ ನಾಡಿನಲ್ಲಿ ವಾಸಿಸುವ ಅನ್ಯ ಭಾಷಿಕರು ಕನ್ನಡ ಕಲಿತು ಕನ್ನಡದಲ್ಲೇ ವ್ಯವಹರಿಸಬೇಕು ಎಂಬ ಸಂದೇಶ ನೀಡುವ ಜೊತೆಗೆ ಕನ್ನಡ ಭಾಷೆ, ನೆಲ, ಜಲ ಹಾಗೂ ಸಂಸ್ಕೃತಿಗೆ ಧಕ್ಕೆ ಉಂಟಾದಾಗ ಯಾವುದೇ ಹೋರಾಟಕ್ಕೆ ನಮ್ಮ ಸಂಘಟನೆ ಕಾರ್ಯಕರ್ತರು ಶಿಸ್ತಿನ ಸಿಪಾಯಿಗಳಂತೆ ಸನ್ನದ್ಧರಾಗಿದ್ದಾರೆ. ಈ ಹಿಂದೆ ಪೊಲೀಸರು ಅಕಾಲಿಕವಾಗಿ ನಿಧನರಾದರೇ 20 ಲಕ್ಷ ಪರಿಹಾರ ನೀಡಲಾಗುತ್ತಿತ್ತು. ಆದರೆ ನಾವು ಹೋರಾಟ ನಡೆಸಿದ ಪರಿಣಾಮ 50 ಲಕ್ಷ ಪರಿಹಾರ ನೀಡಲಾಗುತ್ತಿದೆ ಎಂದರು.

ಈ ವೇಳೆ ಶಾಸಕರು ಸೇರಿದಂತೆ ಸಾಧಕರನ್ನು ಸನ್ಮಾನಿಸಲಾಯಿತು. ಶಾಸಕ ಹೆಚ್.ಟಿ. ಮಂಜು ಅಧ್ಯಕ್ಷತೆ ವಹಿಸಿದ್ದರು. ತೆಂಡೇಕೆರೆ ಬಾಳೆಹೊನ್ನೂರು ಶಾಖಾ ಮಠದ ಗಂಗಾಧರ ಶಿವಾಚಾರ್ಯ ಸ್ವಾಮೀಜಿ, ಕಾಪನಹಳ್ಳಿ ಗವಿಮಠದ ಶ್ರೀಸ್ವತಂತ್ರ ಚನ್ನವೀರಯ್ಯ ಸ್ವಾಮೀಜಿ, ಬೆಡದಹಳ್ಳಿ ಪಂಚಭೂತೇಶ್ವರ ಮಠದ ರುದ್ರಮುನಿ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಆದಿಚುಂಚನಗಿರಿ ಹೇಮಗಿರಿ ಶಾಖಾ ಮಠದ ಕಾರ್ಯದರ್ಶಿ ಡಾ.ಜೆಎನ್.ರಾಮಕೃಷ್ಣೇಗೌಡ, ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ನಾಗೇಂದ್ರ ಕುಮಾರ್, ರಾಜ್ಯ ಆರ್‌ಟಿಓ ಅಧಿಕಾರಿಗಳ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ್, ವಿಷ್ಣು ಸೇನಾ ಸಮಿತಿ ರಾಜ್ಯಾಧ್ಯಕ್ಷ ಡಾ. ಪ್ರಶಾಂತ್ ಚಕ್ರವರ್ತಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎ.ಬಿ. ಕುಮಾರ್, ಸಂಘಟನೆಯ ರಾಜ್ಯ ಕಾನೂನು ಸಲಹೆಗಾರ ನಾರಾಯಣ ಸ್ವಾಮಿ, ಗೌರವಾಧ್ಯಕ್ಷ ಮುನಿಸ್ವಾಮಿ, ರಾಜ್ಯ ಉಪಾಧ್ಯಕ್ಷ ವಿಜಯ, ಮಂಡ್ಯ ಜಿಲ್ಲಾಧ್ಯಕ್ಷ ಡಾ.ಯೋಗಣ್ಣ, ಹಾಸ್ಯ ನಟ ಟೆನ್ನಿಸ್ ಕೃಷ್ಣ, ಕಿರುತೆರೆ ಕಲಾವಿದರಾದ ಶಿವಣ್ಣ, ಚಾರ್ಲಿ ಕುಮಾರ್, ನಂದೀಶ್ ಸೇರಿದಂತೆ ಇನ್ನಿತರರಿದ್ದರು.



ಶಾಸಕ ಹೆಚ್.ಟಿ.ಮಂಜು ಅವರನ್ನು ಸನ್ಮಾನಿಸಲಾಯಿತು.

ಕೇಂದ್ರದ ವಿರುದ್ಧ ಜಿಲ್ಲಾ ಕಾಂಗ್ರೆಸ್ ಪ್ರತಿಭಟನೆ

ಮಂಡ್ಯ, ಡಿ.17– ಮಹಾತ್ಮ ಗಾಂಧಿ ಹೆಸರಲ್ಲಿದ್ದ ಮನರೇಗಾ ಕಾಯ್ದೆ ಹೆಸರನ್ನು ರಾಮ್‌ಜೀ ಕಾಯ್ದೆ ಎಂದು ಬದಲಿಸಲು ಕೇಂದ್ರ ಸರ್ಕಾರ ನಿರ್ಧರಿಸಿರುವುದನ್ನು ವಿರೋಧಿಸಿ ನಗರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮಹಾತ್ಮ ಗಾಂಧಿ ಫೋಟೋ ಹಿಡಿದು ಬುಧವಾರ ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಎದುರಿನ ಉದ್ಯಾನವನದಲ್ಲಿರುವ ಮಹಾತ್ಮ ಗಾಂಧೀಜಿ ಪ್ರತಿಮೆ ಎದುರು ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟಿಸಿ, ಬಿಜೆಪಿ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮನರೇಗಾಯಿಂದ ಮಹಾತ್ಮ ಗಾಂಧಿ ಹೆಸರನ್ನು ತೆಗೆದುಹಾಕುವ ಕೇಂದ್ರ ಸರ್ಕಾರದ ನಿರ್ಧಾರವು ಅವರ ಮೇಲಿನ ಸರ್ಕಾರದ ಅಸಮಾಧಾನವನ್ನು ಪ್ರತಿಬಿಂಬಿಸುತ್ತದೆ ಎಂದು ಆರೋಪಿಸಿದರು.

ಕೇಂದ್ರ ಸರ್ಕಾರ ತಕ್ಷಣವೇ ಈ ನಿರ್ಧಾರ ಕೈಬಿಟ್ಟು ಮಸೂದೆ ವಾಪಸ್ ಪಡೆಯಬೇಕು. ಇಲ್ಲದಿದ್ದರೆ ರಾಜ್ಯಾದ್ಯಂತ ಬಿಜೆಪಿ ವಿರುದ್ಧ ಕಾಂಗ್ರೆಸ್ ಉಗ್ರ ಹೋರಾಟ ಮಾಡ ಬೇಕಾಗುತ್ತದೆ ಎಂದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್, ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಉಪಾಧ್ಯಕ್ಷ ವಿಜಯಕುಮಾರ್, ರಮೇಶ್, ಕಮಲರಾಜ್, ಪದ್ಮ ಮೋಹನ್, ಪ್ರಕಾಶ್, ಕಿರಣ್ ಕುಮಾರ್, ಕ್ರಾಂತಿ ಸಿಂಹ, ಸಿ.ಎಂ.ದ್ಯಾವಪ್ಪ, ಗುರು ಆತ್ಮಾನಂದ, ಹೆಚ್.ವಿ.ನಾಗರಾಜು, ಅಭಿಲಾಶ್, ಕೃಷ್ಣೇಗೌಡ ಇತರರಿದ್ದರು.



ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೂರನೇ ಪುಟದಿಂದ

ವರ್ಷ ಮೀರಿದ ಸರ್ಕಾರಿ ವಾಹನ ಗುಜರಿಗೆ

ಆರ್‌ವಿಎಸ್‌ಎಫ್ (Registered Vehicle Scrapping Facility) ನಲ್ಲಿ ಒಟ್ಟು 1,493 ವಾಹನಗಳನ್ನು ಸ್ಕ್ರ್ಯಾಪ್ ಮಾಡಲಾಗಿದೆ ಮತ್ತು 17,059 ವಾಹನಗಳನ್ನು ಸ್ಕ್ರ್ಯಾಪ್ ಮಾಡುವುದು ಬಾಕಿ ಇದೆ ಎಂದು ತಿಳಿಸಿದರು. 2023ರಿಂದ ಇಲ್ಲಿವರೆಗೆ ರಾಜ್ಯದ ನಾಲ್ಕು ನಿಗಮ ಸಂಸ್ಥೆಗಳಲ್ಲಿ 3212 ವಾಹನ ಗಳು ನಿಷ್ಕ್ರಿಯಗೊಂಡಿವೆ. 579 ವಾಹನಗಳನ್ನು ನಿಷ್ಕ್ರೀಯಗೊಳಿಸಲು ಬಾಕಿ ಇದೆ ಎಂದು ಸಚಿವ ರಾಮಲಿಂಗಾರೆಡ್ಡಿ ಮಾಹಿತಿ ನೀಡಿದರು.

ಬೌದ್ಧ ಭಿಕ್ಕುಗಳಿಗೆ ಮಾಸಿಕ ವೇತನ: ಇದೇ ವೇಳೆ ರಾಜ್ಯ ಬೌದ್ಧ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೌದ್ಧ ಭಿಕ್ಕುಗಳಿಗೆ ಮುಜರಾಯಿ ಇಲಾಖೆ ವತಿಯಿಂದ ತಕ್ಷಣದಿಂದಲೇ ಅನ್ವಯವಾಗುವಂತೆ ಅಲ್ಪಸಂಖ್ಯಾತ ಇಲಾಖೆ ವತಿಯಿಂದ ತಿಂಗಳ ವೇತನವನ್ನು ನೀಡಲಾಗುವುದು ರಾಮಲಿಂಗಾರೆಡ್ಡಿ ತಿಳಿಸಿದರು.

ಪ್ರಶ್ನೋತ್ತರ ವೇಳೆ ಕೆ.ಶಿವಕುಮಾರ್ ಅವರು ಕೇಳಿದ ಪ್ರಶ್ನೆಗೆ ವಕ್ಫ್ ಮತ್ತು ಅಲಸಂಖ್ಯಾತ ಕಲ್ಯಾಣ ಸಚಿವ ಜಮೀರ್ ಅಹಮದ್ ಅವರ ಪರವಾಗಿ ಉತ್ತರಿಸಿದ ರಾಮಲಿಂಗಾರೆಡ್ಡಿ ಅವರು, ರಾಜ್ಯದ ನಾನಾ ಕಡೆ ಬೌದ್ಧ ಕೇಂದ್ರಗಳಲ್ಲಿ ಬೌದ್ಧ ಭಿಕ್ಕುಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಕೆಲವು ಕಡೆ ಕೆಲವರಿಗೆ ದೈನಂದಿನ ಜೀವನ ನಿರ್ವಹಣೆ ಮಾಡುವುದು ಕಷ್ಟಕರವಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಹೀಗಾಗಿ ಇಲಾಖೆ ವತಿಯಿಂದಲೇ ಅವರಿಗೆ ಮಾಸಿಕ ವೇತನ ನೀಡುವುದಾಗಿ ತಿಳಿಸಿದರು.

ಈ ಸಂಬಂಧ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿ ತತಕ್ಷಣದಿಂದಲೇ ಜಾರಿಯಾಗುವಂತೆ ವೇತನ ನೀಡಲಾಗುವುದು. ಸರ್ಕಾರ ಅವರ ಹಿತ ಕಾಪಾಡಲು ಬದ್ಧವಿದೆ ಎಂದು ಆಶ್ವಾಸನೆ ನೀಡಿದರು.

ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ವತಿಯಿಂದ ನೊಂದಾಯಿತ ಜೈನ ಬಸದಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ಮುಖ್ಯ ಅರ್ಚಕರಿಗೆ 6000, ಸಹಾಯಕ ಅರ್ಚಕರಿಗೆ 5000 ರೂ. ಇದೇ ರೀತಿ ಮಸೀದಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪೇಶ್, ಇಮಾಮ್ ಮತ್ತು ಮುಯಿಜೀನ್ ಅವರುಗಳಿಗೆ ಕ್ರಮವಾಗಿ ಕ್ರಮವಾಗಿ 6 ಸಾವಿರ ಹಾಗೂ 5000 ನೀಡುತ್ತಿದ್ದೇವೆ ಎಂದು ವಿವರಿಸಿದರು.

1 ಟು 1 ಮಾತುಕತೆ

ಆಪ್ತರೊಬ್ಬರ ಸಲಹೆಯ ಪ್ರಕಾರ ಇಬ್ಬರು ನಾಯಕರನ್ನು ದೆಹಲಿಗೆ ಕರೆಸಿಕೊಂಡು, ಇದಕ್ಕೆ ಪರಿಹಾರ ಕಂಡುಕೊಳ್ಳಲು ಖುದ್ದು ಸೋನಿಯಾ ಗಾಂಧಿ ನಿರ್ಧರಿಸಿದ್ದಾರೆ. ಅಹಿಂದ ಮತಗಳನ್ನು ಕಳೆದುಕೊಳ್ಳದಂತೆ ಸಿದ್ದರಾಮಯ್ಯನವರ ಒಪ್ಪಿಗೆಯೊಂದಿಗೆ ಅಧಿಕಾರ ಹಸ್ತಾಂತರ ನಡೆಯುವ ಹಾಗಿದ್ದರೆ ನಡೆಯಬೇಕು. ಇಲ್ಲದಿದ್ದರೆ, ಮುಂದಿನ ದಿನಗಳಲ್ಲಿ ಇದು ಪಾರ್ಟಿಗೆ ಹಿನ್ನಡೆಯಾಗಬಹುದು ಎಂಬ ಎಚ್ಚರಿಕೆಯನ್ನು ಬಿ.ಕೆ.ಹರಿಪ್ರಸಾದ್ ನೀಡಿದ್ದಾರೆ ಎಂದು ಹೇಳಲಾಗುತ್ತಿದೆ.

ಫೆಬ್ರವರಿ ಅಂತ್ಯದಲ್ಲಿ ಅಥವಾ ಮಾರ್ಚ್ ಮೊದಲ ವಾರದಲ್ಲಿ ಬಜೆಟ್ ಮಂಡಿಸಬೇಕಿದೆ. ಹಾಗಾಗಿ, ಮುಖ್ಯಮಂತ್ರಿ ಬದಲಾವಣೆಯ ನಿರ್ಧಾರವನ್ನು ಈ ಮಾಸಾಂತ್ಯದೊಳಗೆ ತೆಗೆದುಕೊಳ್ಳಬೇಕು. ಯಾಕೆಂದರೆ, ಮುಂದಿನ ಬಜೆಟ್ ಮಂಡಿಸಲು ಕನಿಷ್ಠ ಪಕ್ಷ ಮೂವತ್ತು ದಿನಗಳ ತಯಾರಿಬೇಕಾಗುತ್ತದೆ. ಇದು ಸಾಧ್ಯವಾಗದೇ ಇದ್ದಲ್ಲಿ, ಬಜೆಟ್ ಮಂಡನೆಯ ನಂತರ, ನಿರ್ಧಾರ ತೆಗೆದುಕೊಳ್ಳಿ ಎನ್ನುವ ಸಲಹೆಯನ್ನು ಬಿ.ಕೆ.ಹರಿಪ್ರಸಾದ್ ನೀಡಿದ್ದಾರೆ ಎಂದು ಹೇಳಲಾಗುತ್ತಿದೆ.

ಬಿಪಿಎಲ್ ಕಾರ್ಡುಗಳು ಅನರ್ಹ

ಕಾನೂನು ಮಾಪನ ಶಾಸ್ತ್ರ ಇಲಾಖೆಯ ವತಿಯಿಂದ ಬೆಳಗಾವಿ ಮತ್ತು ಕಲಬುರಗಿ ವಿಭಾಗದಲ್ಲಿ ಸುಮಾರು 71 ಸಕ್ಕರೆ ಕಾರ್ಖಾನೆಗಳ ತಪಾಸಣೆ ಮಾಡಿದ್ದು, ಕಬ್ಬು ಬೆಳೆಗಾರರ ಹಿಂದೆ ಇದ್ದ ಲೋಪದೋಷಗಳನ್ನು ಸರಿಪಡಿಸಲಾಗಿದೆ. ತೂಕದಲ್ಲಿ ಮೋಸ ತಡೆಯಲಾಗಿದೆ. ಇಲ್ಲಿಯವರೆಗೂ ಸುಮಾರು 50 ಸಾವಿರ ಕೋಟಿ ಅಭಿಸಂಧಾನ ಶುಲ್ಕ ವಸೂಲಿ ಮಾಡಲಾಗಿದೆ ಎಂದು ತಿಳಿಸಿದರು.

3517 ನೂತನ ನ್ಯಾಯಬೆಲೆ ಅಂಗಡಿ: ರಾಜ್ಯದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ನ್ಯಾಯಬೆಲೆ ಅಂಗಡಿಗಳನ್ನು ಆದ್ಯತೆ ಮೇಲೆ ಮಂಜೂರು ಮಾಡಲು ಒಂದು ತಿಂಗಳೊಳಗೆ ಕ್ರಮ ವಹಿಸಲಾಗುವುದು. ಇದರಲ್ಲಿ ಜಿಲ್ಲಾಧಿ ಕಾರಿ ಅಧ್ಯಕ್ಷತೆಯ ಮೇರೆಗೆ ಸುಮಾರು 3517 ನೂತನ ನ್ಯಾಯ ಬೆಲೆ ಅಂಗಡಿ ಗಳನ್ನು ಒಳ ಮೀಸಲಾತಿ ಆಧಾರದ ಮೇಲೆ ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ ನಮ್ಮ ರಾಜ್ಯದಲ್ಲಿ ನೀಡಲಾಗುತ್ತಿದೆ ಎಂದು ಸಚಿವ ಮುನಿಯಪ್ಪ ತಿಳಿಸಿದರು.

ನ್ಯಾಯಬೆಲೆ ಅಂಗಡಿ ಮಾಲೀಕರಿಗೆ ಯಾವುದೇ ಸಮಸ್ಯೆಗಳಿದ್ದರೆ ಪರಿಹರಿಸಲಾಗುವುದು. ನ್ಯಾಯಬೆಲೆ ಅಂಗಡಿಗಳಲ್ಲಿ ಯಂತ್ರಗಳ ಅಳವಡಿಕೆ ಕಡ್ಡಾಯ. ಚಿಲ್ಲರೆ ಲಾಭಾಂಶವನ್ನು ಸರಿಯಾದ ಸಮಯಕ್ಕೆ ಸಮರ್ಪಕವಾಗಿ ನೀಡಲಾಗುತ್ತದೆ. ತಾವು ಗ್ರಾಹಕರಿಗೆ ಸರಿಯಾದ ಸಮಯದಲ್ಲಿ ಪಡಿತರ ವಿತರಿಸಬೇಕು ಎಂದೂ ತಾಕೀತು ಮಾಡಿದರು.

ಆರೋಗ್ಯದಲ್ಲಿ ಏರುಪೇರು

ಸಿಎಂ ಸಿದ್ದರಾಮಯ್ಯ ಆರೋಗ್ಯದಲ್ಲಿ ಏರುಪೇರಾದ ಸುದ್ದಿ ಹರಡುತ್ತಿದ್ದಂತೆ ವಿವಿಧ ಪಕ್ಷಗಳ ನಾಯಕರು ಸರ್ಕ್ಯೂಟ್ ಹೌಸ್‌ಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು. ಬಿಜೆಪಿ ನಾಯಕ ಹಾಗೂ ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅವರು ಏಕಾಂಗಿಯಾಗಿ ಬಂದು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದು ರಾಜಕೀಯ ವಲಯದಲ್ಲಿ ತೀವ್ರ ಕುತೂಹಲ ಮೂಡಿಸಿದೆ. ಭೇಟಿಯ ಬಳಿಕ ಮಾತನಾಡಿದ ಜಾರಕಿಹೊಳಿ, ಇದು ಕೇವಲ ಸೌಜನ್ಯದ ಭೇಟಿ. ಸಿಎಂ ಅವರಿಗೆ ಧೈರ್ಯ ಹೇಳುವ ಅವಶ್ಯಕತೆಯಿಲ್ಲ, ಅವರೇ ನಮಗೆ ಧೈರ್ಯ ಹೇಳುವಷ್ಟು ಗಟ್ಟಿಯಾಗಿದ್ದಾರೆ. ಯಾವುದೇ ರಾಜಕೀಯ ಚರ್ಚೆ ನಡೆದಿಲ್ಲ ಎಂದು ಸ್ಪಷ್ಟಪಡಿಸಿದರು.

ಮತ್ತೊಂದೆಡೆ ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ ಅವರು ಕೂಡ ಸಿಎಂ ಅವರನ್ನು ಭೇಟಿ ಮಾಡಿದರು. ಚಾಮುಂಡೇಶ್ವರಿ ಕ್ಷೇತ್ರದ ಏತ ನೀರಾವರಿ ಯೋಜನೆ ಹಾಗೂ ಗ್ರೇಟರ್ ಮೈಸೂರು ಅಭಿವೃದ್ಧಿ ಕುರಿತು ಮನವಿ ಸಲ್ಲಿಸಿದ್ದೇನೆ. ಸಿಎಂ ಆರೋಗ್ಯ ಚೇತರಿಸಿಕೊಳ್ಳುತ್ತಿದ್ದು, ನಾಳೆ ಅವರು ಸದನಕ್ಕೆ ಬರಲಿದ್ದಾರೆ ಎಂದು ಜಿಟಿಡಿ ತಿಳಿಸಿದರು.

ಸಚಿವ ಬೈರತಿ ಸುರೇಶ್ ಸ್ಪಷ್ಟನೆ: ಮುಖ್ಯಮಂತ್ರಿಗಳ ಆಪ್ತ ಸಚಿವ ಬೈರತಿ ಸುರೇಶ್ ಅವರು ಮಾಧ್ಯಮಗಳೊಂದಿಗೆ ಮಾತನಾಡಿ, ಸಿಎಂ ಆರೋಗ್ಯದ ಬಗ್ಗೆ ಆತಂಕ ಪಡುವ ಅಗತ್ಯವಿಲ್ಲ. ಅವರ ಜೊತೆಗೆ ನಾನು ಊಟ ಮಾಡಿದ್ದೇನೆ. ಅವರು ಚೆನ್ನಾಗಿದ್ದಾರೆ. ನಾಳೆ ಸದನದಲ್ಲಿ ಹಲವು ಪ್ರಮುಖ ವಿಷಯಗಳಿಗೆ ಸಿಎಂ ಉತ್ತರ ನೀಡಬೇಕಿದೆ. ಹೀಗಾಗಿ ಅದಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಅವರು ಪರಿಶೀಲಿಸುತ್ತಿದ್ದಾರೆ ಎಂದು ಗೊಂದಲಗಳಿಗೆ ತೆರೆ ಎಳೆದರು. ಸದ್ಯ ವೈದ್ಯರ ಮೇಲ್ವಿಚಾರಣೆಯಲ್ಲಿರುವ ಮುಖ್ಯಮಂತ್ರಿಗಳು ಗುರುವಾರ ಬೆಳಿಗ್ಗೆ ಮತ್ತೆ ಸದನಕ್ಕೆ ಹಾಜರಾಗಿ ವಿರೋಧ ಪಕ್ಷಗಳ ಪ್ರಶ್ನೆಗಳಿಗೆ ಉತ್ತರಿಸುವ ನಿರೀಕ್ಷೆಯಿದೆ.

ಅನುಮೋದನೆ ಕೋರಿದ ಸರ್ಕಾರ

ವೆಚ್ಚಗಳಿಗೆ ಶಾಸಕಾಂಗದ ಅನುಮತಿ ಕೋರಿದೆ. ಇದರ ಜೊತೆಗೆ ವಿವಿಧ ಇಲಾಖೆ ಅಧಿಕಾರಿಗಳು, ಮುಖ್ಯಮಂತ್ರಿ ಕಚೇರಿ ಸಿಬ್ಬಂದಿ ಮತ್ತು ಕರ್ನಾಟಕ ಲೋಕಾಯುಕ್ತ ಅಧಿಕಾರಿಗಳಿಗೆ 12 ಮಿನಿ ಬಸ್ ಸೇರಿದಂತೆ 71 ವಾಹನಗಳ ಖರೀದಿಗೆ 11.6 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ.

ಬೆಳಗಾವಿಯಲ್ಲಿ ನಡೆಯುತ್ತಿರುವ ವಿಧಾನಮಂಡಲದ ಚಳಿಗಾಲದ ಅಧಿವೇಶನಕ್ಕೆ 14.5 ಕೋಟಿ ರೂ.ಗಳನ್ನು ಮತ್ತು ಶಾಸಕಾಂಗದ ಕಲಾಪಗಳ ವರದಿಗಾಗಿ 2 ಕೋಟಿ ರೂಪಾಯಿ ಸರ್ಕಾರ ನಿಗದಿಪಡಿಸಿದೆ. 11 ನೇ ಸಿಪಿಎ ಸಮ್ಮೇಳನಕ್ಕೆ 3.6 ಕೋಟಿ ರೂ.ಗಳನ್ನು ಹೊರತುಪಡಿಸಿ ಪೂರಕ ಅಂದಾಜುಗಳಲ್ಲಿ 68 ನೇ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್ ಸಮ್ಮೇಳನದಲ್ಲಿ ವಿಧಾನಸಭಾ ಸ್ಪೀಕರ್ ಯು.ಟಿ.ಖಾದರ್ ಮತ್ತು ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರು ತಲಾ 1 ಕೋಟಿ ರೂಪಾಯಿಗಳ ಪ್ರಯಾಣ ವೆಚ್ಚಗಳು ಸೇರಿವೆ.

ಇತರ ಖರ್ಚುಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಂಗಳೂರು ಸ್ಮಾರ್ಟ್ ಇಂಧನ ದಕ್ಷ ವಿದ್ಯುತ್ ವಿತರಣೆಗಾಗಿ 14 ಕೋಟಿ ರೂ.ಗಳಿಗೆ ಅನುಮೋದನೆ ಕೋರಿದ್ದಾರೆ. ಇದನ್ನು ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಬಿಡುಗಡೆ ಮಾಡಿದ ಹಣದ ಭಾಗವಾಗಿ ಪರಿಗಣಿಸಲಾಗಿದೆ. ಮೈಸೂರು ದಸರಾದ ಅದ್ಧೂರಿ ಆಚರಣೆಗೆ 23.5 ಕೋಟಿ ರೂಪಾಯಿ ಮತ್ತು ತುಮಕೂರು ದಸರಾಕ್ಕೆ 50 ಲಕ್ಷ ರೂಪಾಯಿ ಅಂದಾಜು ವೆಚ್ಚ ಎಂದು ಸರ್ಕಾರ ಹೇಳಿದೆ. ಸ್ವಿಟ್ಜರ್‌ಲ್ಯಾಂಡ್‌ನ ದಾವೋಸ್‌ನಲ್ಲಿ ನಡೆಯಲಿರುವ ವಿಶ್ವ ಆರ್ಥಿಕ ವೇದಿಕೆಯಲ್ಲಿ ಭಾಗವಹಿಸಲು ಕರ್ನಾಟಕ ನಿಯೋಗದ ಮುಂಬರುವ ಪ್ರವಾಸಕ್ಕಾಗಿ ಸರ್ಕಾರ 10 ಕೋಟಿ ರೂಪಾಯಿ ನಿಗದಿಪಡಿಸಿದೆ.

ನೋಂದಣಿ ಕಾರ್ಯದಲ್ಲಿ ಸ್ವಲ್ಪ ವ್ಯತ್ಯಯ

ಅಧಿಕಾರಿಗಳಿಗೆ ಕಾರ್ಯಹಂಚಿಕೆ ಮಾಡಿ ಸರ್ಕಾರ ಆದೇಶಿಸಿದೆ. ಕಂದಾಯ ನ್ಯಾಯಾಲಯಗಳ ನಿರ್ವಹಣೆಯನ್ನು ಕಡ್ಡಾಯವಾಗಿ ಆರ್‌ಸಿಸಿಎಂಎಸ್ ತಂತ್ರಾಂಶದಲ್ಲಿಯೇ ನಿರ್ದೇಶಿಸಲಾಗುತ್ತಿದೆ ಎಂದರು.

ಕೂಡಲ ಸಂಗಮದಲ್ಲಿ ಅಭಿವೃದ್ಧಿ ಮಂಡಳಿಯ 499.26 ಎಕರೆ ಜಮೀನಿನಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳಿಗೆ ವೇಗ ನೀಡಲಾಗುವುದು ಎಂದು ಹನುಮಂತಪ್ಪ ನಿರಾಣಿ ಪ್ರಸ್ತಾವಕ್ಕೆ ತಿಳಿಸಿದರು. ಬಸವ ಅಂತರರಾಷ್ಟ್ರೀಯ ಮ್ಯೂಸಿಯಂ ಸ್ಥಾಪಿಸಲು, ಆಧುನಿಕ ಬದುಕಿಗೆ ಪೂರಕವಾಗುವ ಹಾಗೂ ಉಪಯುಕ್ತ ಬಸವತತ್ವಗಳು ಒಳಗೊಂಡಿರಬೇಕು ಎಂಬುದಾಗಿ ಸಿದ್ದೇಶ್ವರ ಸ್ವಾಮೀಜಿ ಅಧ್ಯಕ್ಷತೆಯ ವಿಶೇಷ ತಜ್ಞರ ಸಮಿತಿ ಸಭೆ ನಿರ್ಣಯ ಕೈಗೊಂಡಿದೆ.

ಸುಮಾರು 10 ಕೋಟಿ ರೂ. ವೆಚ್ಚದಲ್ಲಿ ರೂಪುಗೊಂಡ ಬಸವ ಅಂತರ ರಾಷ್ಟ್ರೀಯ ಕೇಂದ್ರ ಗೋಪುರಕ್ಕೆ ಬಣ್ಣ ಲೇಪನ ಹಾಗೂ ಮ್ಯೂಸಿಯಂ ರಚನೆ, ಶೈಲಿ, ಕಾರ್ಯಸ್ವರೂಪ ಬಗ್ಗೆ ಚರ್ಚಿಸಿ ಕೈಗೊಂಡ ನಿರ್ಣಯದಂತೆ ಪ್ರಸ್ತುತ ಕಾಮಗಾರಿಗಳು ಸ್ವಲ್ಪ ವಿಳಂಬವಾಗಿದ್ದು, ಮುಂದಿನ ದಿನಗಳಲ್ಲಿ ವೇಗಗೊಳಿಸಲಾಗುವುದು. 12ನೇ ಶತಮಾನದಲ್ಲಿ ಶರಣರ ಸಮಗ್ರ ಜೀವನ ಸಾಧನೆ ಒಳಗೊಂಡಂತೆ, ಬಸವಣ್ಣನವರ ಸಂಪೂರ್ಣ ಜೀವನ ಚಿತ್ರಾವನ್ನು, ವಚನಾಧಾರಿತ ಚಿಂತನೆಗಳನ್ನು, ಸಮಾಜಕ್ಕೆ ಅವರು ನೀಡಿದ ಕೊಡುಗೆಗಳನ್ನು ಅಳವಡಿಸಲು ತೀರ್ಮಾನಿಸಲಾಗಿದೆ ಎಂದರು.

ಕರ್ನಾಟಕದಲ್ಲಿ ಕುಸಿದ ನಿರುದ್ಯೋಗ ದರ

ಕರ್ನಾಟಕದಲ್ಲಿ ಮಹಿಳಾ ಮತ್ತು ಪುರುಷ ನಿರುದ್ಯೋಗ ದರದಲ್ಲಿ ಅಲ್ಪ ವ್ಯತ್ಯಾಸವಿದ್ದು, ಪುರುಷರ ನಿರುದ್ಯೋಗ ದರ ಶೇ.2.8 ಇದ್ದರೆ, ಮಹಿಳೆಯರಲ್ಲಿ ಇದು ಶೇ.3.0 ರಷ್ಟಿದೆ. ಆದರೆ, ಕೇರಳದಂತಹ ರಾಜ್ಯಗಳಲ್ಲಿ ಈ ಅಂತರ ಹೆಚ್ಚಿದ್ದು, ಮಹಿಳೆಯರಲ್ಲಿ ಶೇ.9.4 ರಷ್ಟು ನಿರುದ್ಯೋಗ ದರ ದಾಖಲಾಗಿದೆ.

ಉತ್ತರ ಭಾರತದ ರಾಜ್ಯಗಳಲ್ಲಿ ನಿರುದ್ಯೋಗ ಸಮಸ್ಯೆ ತೀವ್ರವಾಗಿದ್ದು, ಅದರಲ್ಲೂ ನಗರ ಪ್ರದೇಶಗಳಲ್ಲಿ ಒತ್ತಡ ಹೆಚ್ಚಿದೆ. ರಾಜಸ್ಥಾನದಲ್ಲಿ ನಿರುದ್ಯೋಗ ದರ ಶೇ.13.7ಕ್ಕೆ ಏರಿದ್ದರೆ, ಉತ್ತರಾಖಂಡದಲ್ಲಿ ಒಟ್ಟಾರೆ ಶೇ.8.9 ರಷ್ಟು ನಿರುದ್ಯೋಗವಿದೆ ಎಂದು ವರದಿ ತಿಳಿಸಿದೆ. ಹರಿಯಾಣ ಮತ್ತು ಪಂಜಾಬ್ ಕ್ರಮವಾಗಿ ಶೇ.6.2 ಮತ್ತು ಶೇ.6.5 ರಷ್ಟು ನಿರುದ್ಯೋಗ ದರ ಇರುವುದು ವರದಿಯಾಗಿದೆ. ಉತ್ತರ ಪ್ರದೇಶ ಶೇ.5.9 ರಷ್ಟಿದ್ದರೆ, ದೆಹಲಿದಲ್ಲಿ ಈ ದರವು ಶೇ.6.6 ರಷ್ಟಿದೆ. ಪಿಎಲ್‌ಎಫ್‌ಎಸ್ ಮೂಲಕ ಉದ್ಯೋಗ ಸೂಚಕಗಳನ್ನು ಅಂದಾಜಿಸಲಾಗಿದ್ದು, ದೇಶಾದ್ಯಂತ ಪ್ರಸ್ತುತ 6.02 ಕೋಟಿಗೂ ಹೆಚ್ಚು ಉದ್ಯೋಗಾಕಾಂಕ್ಷಿಗಳು 'ನ್ಯಾಷನಲ್ ಕೆರಿಯರ್ ಸರ್ವಿಸ್' ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡಿದ್ದಾರೆಂದು ಸರ್ಕಾರ ಮಾಹಿತಿ ನೀಡಿದೆ.

ಪತಿಯೇ ಸುಪಾರಿ; ಮೂವರ ಬಂಧನ

ಅಂಗಡಿ ನಡೆಸುತ್ತಿರುವ ನಾಗರತ್ನ ಪತಿ ಮಹೇಶ್ ಮನೆ ಬಳಿ ಧಾವಿಸಿದ್ದು, ತನ್ನ ಪತ್ನಿ ಮೇಲೆ ಅಪರಿಚಿತ ಮುಸುಕುಧಾರಿಗಳು ಹಲ್ಲೆ ನಡೆಸಿ, ಮನೆಗೆ ಬೆಂಕಿ ಹಾಕಿದ್ದಾರೆ ಎಂದು ಮಹೇಶ್ ಪೊಲೀಸರಿಗೆ ದೂರು ನೀಡಿದ್ದ.

ಚುರುಕುಗೊಂಡ ತನಿಖೆ: ಪತಿ ಮಹೇಶ್ ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡಿದ್ದ ಮೇಟಗಳ್ಳಿ ಠಾಣೆ ಇನ್ಸ್‌ಪೆಕ್ಟರ್ ಅರುಣ್, ದುಷ್ಕರ್ಮಿಗಳು ಕೇವಲ ನಾಗರತ್ನ ಅವರ ಮೇಲೆ ಹಲ್ಲೆ ನಡೆಸಿದ್ದಾರೆಯೇ ಹೊರತು ಮನೆಯಲ್ಲಿದ್ದ ಯಾವುದೇ ವಸ್ತುವನ್ನೂ ಕಳವು ಮಾಡಿಲ್ಲ. ಜೊತೆಗೆ ಗ್ಯಾಸ್ ಸೋರಿಕೆ ಮಾಡಿ ಬೆಂಕಿ ಹಚ್ಚಿ ಮನೆಯೊಳಗೆ ಪೆಟ್ರೋಲ್ ಸುರಿದಿದ್ದಾರೆ. ಇದನ್ನು ಗಮನಿಸಿದಾಗ ದುಷ್ಕರ್ಮಿಗಳು ನಾಗರತ್ನ ಹತ್ಯೆ ಉದ್ದೇಶ ವನ್ನಷ್ಟೇ ಹೊಂದಿದ್ದರು. ಅವರು ಪರಿಚಿತರೇ ಆಗಿರುವುದರಿಂದ 3ನೇ ಮಹಡಿಯ ಇವರ ಮನೆಗೆ ನೇರವಾಗಿ ನುಗ್ಗಿದ್ದಾರೆ. ಯಾವುದೋ ದ್ವೇಷದ ಹಿನ್ನಲೆಯಲ್ಲೇ ಈ ಕೃತ್ಯ ನಡೆದಿರಬಹುದು ಎಂದು ಶಂಕೆ ವ್ಯಕ್ತವಾಗಿದೆ.

ಹೀಗಾಗಿ ನಾಗರತ್ನ ಅವರನ್ನು ಕೊಲ್ಲುವಷ್ಟರಮಟ್ಟಿಗೆ ಯಾರಿಗೆ ದ್ವೇಷವಿತ್ತು ಎಂಬುದರ ಬಗ್ಗೆ ಆಕೆಯ ಪತಿ ಮಹೇಶ್‌ನಿಂದ ಮಾಹಿತಿ ಪಡೆಯಲೆತ್ನಿಸಿದ್ದಾರೆ. ಆತ ಹೇಳಿದ ಮಾಹಿತಿಯನ್ವಯ ಯಾರಿಗೂ ನಾಗರತ್ನ ಅವರ ಮೇಲೆ ಅಂತಹ ದ್ವೇಷವಿಲ್ಲ. ಆದರೆ, ಮಹೇಶ್ ಏನನ್ನೋ ಮುಚ್ಚಿಡುತ್ತಿದ್ದಾನೆ ಎಂಬುದು ಆತನ ವರ್ತನೆಯಿಂದ ಪೊಲೀಸರಿಗೆ ಅನುಮಾನ ಬಂದಿದೆ. ಮತ್ತೆ ಮಹೇಶ್‌ನನ್ನು ತೀವ್ರವಾಗಿ ವಿಚಾರಣೆಗೊಳಪಡಿಸಿದಾಗ ಆತನೇ ಪತ್ನಿ ಹತ್ಯೆಗೆ ಸುಪಾರಿ ನೀಡಿರುವುದನ್ನು ಬಾಯ್ಬಿಟ್ಟಿದ್ದಾನೆ. ನಂತರ ಆತ ನೀಡಿದ ಮಾಹಿತಿ ಮೇರೆಗೆ ಮಧ್ಯರಾತ್ರಿ 12.30ರ ಸುಮಾರಿನಲ್ಲಿ ಮೈಸೂರು ಹೊರ ವಲಯದ ರಿಂಗ್ ರಸ್ತೆಗೆ ಹೊಂದಿಕೊಂಡಂತಿರುವ ಮನೆಯೊಂದರಲ್ಲಿ ಉಳಿದು ಕೊಂಡಿದ್ದ ವಿರಾಜಪೇಟೆಯ ಭಾಸ್ಕರ್ ಮತ್ತು ಅಭಿಷೇಕ್‌ನನ್ನು ಬಂಧಿಸಿದ್ದಾರೆ.

ಕುದುರೆ ಮರಿ ಸಾವು

ಈ ಮಧ್ಯೆ ಮೈಸೂರು ರೇಸ್ ಕ್ಲಬ್‌ನಲ್ಲಿರುವ ಕುದುರೆಗಳ ಸ್ಯಾಂಪಲ್‌ಗಳನ್ನು ಪ್ರಯೋಗಾಲಯಕ್ಕೆ ಕಳುಹಿಸುವ ಅನಿವಾರ್ಯತೆ ಉಂಟಾಗಿದ್ದು, ಹೀಗೆ ಕಳುಹಿಸಿದ ಸ್ಯಾಂಪಲ್ಸ್‌ನ ಪರೀಕ್ಷೆ 3 ಹಂತದಲ್ಲಿ (21 ದಿನ–21 ದಿನ–21 ದಿನ) ನಡೆಯಬೇಕಿದೆ. ಅವುಗಳಲ್ಲಿ ಸೋಂಕಿಗೆ ಸಂಬಂಧಿಸಿಂದತೆ ನೆಗೆಟಿವ್ ಬಂದ ನಂತರವಷ್ಟೇ ರೇಸ್ ಚಟುವಟಿಕೆಗಳನ್ನು ಆರಂಭಿಸುವ ಧೈರ್ಯ ಮಾಡಬಹುದು ಎಂದು ರೇಸ್ ಕ್ಲಬ್ ಮೂಲಗಳು ತಿಳಿಸಿವೆ.


ಮೈಸೂರು ರೇಸ್‌ನಲ್ಲಿ ಸುಮಾರು ಐದು ಸಾವಿರ ಕುದುರೆಗಳಿವೆ. ಇತ್ತೀಚೆಗೆ ಮದ್ರಾಸ್ ರೇಸ್ ಮುಗಿಸಿ ಬೆಂಗಳೂರು ಹಾಗೂ ಮೈಸೂರಿಗೆ ಬಂದ ಕುದುರೆಗಳೆಲ್ಲವನ್ನೂ ಪರೀಕ್ಷೆಗೊಳಪಡಿಸುವ ಅವಶ್ಯಕತೆ ಇದೆ ಎನ್ನಲಾಗಿದೆ. ನಾಳೆ ಮೈಸೂರು ರೇಸ್ ಕ್ಲಬ್‌ನ ಸಾಮಾನ್ಯ ಸಭೆ ನಡೆಯುವ ಸಾಧ್ಯತೆ ಇದ್ದು, ಅಲ್ಲಿ ಮುಂದಿನ ಕ್ರಮಗಳ ಬಗ್ಗೆ ಮಹತ್ವದ ನಿರ್ಧಾರ ಹೊರ ಬೀಳಬಹುದು ಎಂದು ಹೇಳಲಾಗಿದೆ.

ಡಿ.20ಕ್ಕೆ 'ಸ್ತುತಿ ಶಂಕರ'

ಮೈಸೂರು, ಡಿ.17(ಎಂಕೆ)– ಮೈಸೂರು ಅರಮನೆ ಆವರಣದಲ್ಲಿ ಡಿ.20ರಂದು ಸಂಜೆ 4 ಗಂಟೆಗೆ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಮ್ ಹಾಗೂ ವೇದಾಂತ ಭಾರತೀ ವತಿಯಿಂದ ಶ್ರೀ ಭಾರತೀತೀರ್ಥ ಸ್ವಾಮೀಜಿ ಅವರ ಸನ್ಯಾಸ ಸ್ವೀಕಾರದ ಸುವರ್ಣ ಮಹೋತ್ಸವ ನಿಮಿತ್ತ 'ಸ್ತುತಿಶಂಕರ' (ಸ್ತೋತ್ರ ಮಹಾಸಮರ್ಪಣೆ) ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದು, ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಮಾಜಿ ಕುಲಪತಿ ಪ್ರೊ. ಎಸ್.ಎನ್. ಹೆಗ್ಡೆ ಇನ್ನಿಲ್ಲ

ಮೈಸೂರು, ಡಿ. 17– ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ ಪ್ರೊ. ಎಸ್.ಎನ್. ಹೆಗ್ಡೆ(83) ಇಂದು ಮಧ್ಯಾಹ್ನ ಮೈಸೂರಿನಲ್ಲಿ ನಿಧನರಾದರು.



ಇವರು 1997 ಮತ್ತು 2003ರ ನಡುವೆ ಎರಡು ಅವಧಿಗೆ ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದರು. ಹೆಸರಾಂತ ಶಿಕ್ಷಣ ತಜ್ಞರೂ ಆಗಿದ್ದ ಇವರು, ಪ್ರಾಣಿಶಾಸ್ತ್ರ ಪ್ರಾಧ್ಯಾಪಕರು. ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ಮತ್ತು ಉನ್ನತ ಶಿಕ್ಷಣಕ್ಕೆ ಅವರು ನೀಡಿದ ಕೊಡುಗೆಗಾಗಿ ಸದಾ ಗೌರವಕ್ಕೆ ಪಾತ್ರರಾಗಿದ್ದರು. ಆರು ತಿಂಗಳ ಹಿಂದಷ್ಟೇ ಪ್ರೊ. ಹೆಗ್ಡೆಯವರು ಪತ್ನಿಯನ್ನು ಕಳೆದು ಕೊಂಡಿ ದ್ದರು. ಇವರು ಕುಟುಂಬದೊಂದಿಗೆ ವಿಜಯನಗರ 2ನೇ ಹಂತದಲ್ಲಿ ನೆಲೆಸಿದ್ದರು. ಶ್ರೀಯುತರು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಇವರಲ್ಲಿ ಒಬ್ಬರು ಮೈಸೂರಲ್ಲೂ ಮತ್ತೊಬ್ಬರು ಅಮೆರಿಕಾದಲ್ಲಿ ನೆಲೆಸಿದ್ದಾರೆ.

ಕುಟುಂಬದ ಮೂಲಗಳ ಪ್ರಕಾರ ಪ್ರೊ. ಹೆಗ್ಡೆಯವರು ನಿನ್ನೆ ಬೆಳಗ್ಗೆ ಅಧಿಕ ರಕ್ತದೊತ್ತಡದಿಂದ ಮನೆಯಲ್ಲಿ ಕುಸಿದುಬಿದ್ದಿದ್ದಾರೆ. ಕೂಡಲೇ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ವೈದ್ಯರು, ಬಹು ಅಂಗಾಂಗ ವೈಫಲ್ಯದಿಂದ ನರಳುತ್ತಿರುವುದಾಗಿ ತಿಳಿಸಿ, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡುತ್ತಿದ್ದರು.

ಇವರ ಅಂತ್ಯಕ್ರಿಯೆ ಪುತ್ರಿ ಹಾಗೂ ಮೊಮ್ಮಗ ಅಮೆರಿಕಾದಿಂದ ಆಗಮಿಸಿದ ಬಳಿಕ ಗುರುವಾರ ಇಲ್ಲವೇ ಶುಕ್ರವಾರ ನಡೆಯಬಹುದು ಎಂದು ಪ್ರೊ. ಹೆಗ್ಡೆಯವರ ನಿಕಟವರ್ತಿಗಳೂ ಆದ ಮಾಜಿ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ ತಿಳಿಸಿದ್ದಾರೆ.

ಮೈಸೂರು ಮಿತ್ರ

ಪ್ರೊ. ಎಸ್.ಎನ್. ಹೆಗ್ಡೆ ನಿಧನಕ್ಕೆ ಸುತ್ತೂರು ಶ್ರೀಗಳ ಸಂತಾಪ

ಮೈಸೂರು, ಡಿ.17(ಎಸ್‌ಪಿಎನ್)– ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾಗಿದ್ದ ಪ್ರೊ. ಎಸ್.ಎನ್. ಹೆಗ್ಡೆ ಅವರ ನಿಧನಕ್ಕೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಸಂತಾಪ ಸೂಚಿಸಿದ್ದಾರೆ.



ಸುತ್ತೂರು ಶ್ರೀಗಳು

ಪ್ರೊ. ಹೆಗ್ಡೆಯವರು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸುಮಾರು ಮೂರು ದಶಕಗಳ ಕಾಲ ಪ್ರಾಣಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು. ಬಳಿಕ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ 1997ರಿಂದ 2003ರವರೆಗೆ ಎರಡು ಅವಧಿಗಳಿಗೆ ಸೇವೆ ಸಲ್ಲಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ವಾಯತ್ತ ಕಾಲೇಜುಗಳನ್ನು ರೂಪಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ.

ಪ್ರೊ. ಎಸ್.ಎನ್.ಹೆಗ್ಡೆಯವರು ಸದಾ ಜನಪರ ಆಡಳಿತವನ್ನು ನಡೆಸುತ್ತಿದ್ದರು. ಪ್ರಜಾಸತ್ತಾತ್ಮಕ ಮೌಲ್ಯಗಳಲ್ಲಿ ನಂಬಿಕೆ ಇದ್ದವರು. ಗುಣಗ್ರಾಹಿಗಳು, ವಿನೋದಶೀಲರು ಆಗಿದ್ದರು. ಅವರ ಕಾಲದಲ್ಲಿ ವಿಶ್ವವಿದ್ಯಾನಿಲಯವು ತುಂಬ ಒಳ್ಳೆಯ ಸಾಧನೆಗಳನ್ನು ಮಾಡಿತು. ಪ್ರೊ. ಹೆಗ್ಡೆಯವರು ಶ್ರೀಮಠದ ಸಭೆ, ಸಮಾರಂಭಗಳಲ್ಲಿ ಕ್ರಿಯಾಶೀಲರಾಗಿ ಭಾಗವಹಿಸುತ್ತಿದ್ದರು. ಅವರ ಅಕಾಲಿಕ ಅಗಲುವಿಕೆಯಿಂದ ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಕೊರತೆಯುಂಟಾಗಿದೆ. ದಿವಂಗತರ ಆತ್ಮಕ್ಕೆ ಶಾಂತಿಯನ್ನು, ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಹಾರೈಸುತ್ತೇನೆ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಂತಾಪ ಸೂಚಿಸಿದ್ದಾರೆ.

ಮೈಸೂರು ಜೈಲ್‌ಗೆ ಬಂಧೀಖಾನೆ ಮಹಾ ನಿರ್ದೇಶಕ ಅಶೋಕ್ ಕುಮಾರ್ ದಿಢೀರ್ ಭೇಟಿ; ಪರಿಶೀಲನೆ

● ಜೈಲ್‌ನ ನಿಯಮಾವಳಿಗೆ ಬದ್ಧರಾಗಿರುವಂತೆ ಕೈದಿಗಳಿಗೆ ಎಚ್ಚರಿಕೆ ● ಜೈಲು ಶಿಕ್ಷಾ ಕೇಂದ್ರವಲ್ಲ, ಮನಪರಿವರ್ತನೆ ಸ್ಥಳ: ಸನ್ನಡತೆಯುಳ್ಳವರಾಗಿ ಬಿಡುಗಡೆ ಹೊಂದಿ

ಮೈಸೂರು, ಡಿ.17(ಎಂಟಿವೈ)– ಕಾರಾಗೃಹದ ಒಳಗೆ ಹಾಗೂ ಹೊರಗೆ ಅಪರಾಧ ಕೃತ್ಯಗಳನ್ನು ಮುಂದುವರೆಸಿದರೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದಾಗಿ ಕೈದಿಗಳಿಗೆ ಕಾರಾಗೃಹ ಇಲಾಖೆಯ ಮಹಾನಿರ್ದೇಶಕ(ಡಿಜಿಪಿ) ಅಲೋಕ್ ಕುಮಾರ್ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಬಂಧೀಖಾನೆ ಮಹಾನಿರ್ದೇಶಕರಾದ ಬಳಿಕ ಕಾರಾಗೃಹದಲ್ಲಿ ಕೈದಿಗಳ ಆಟಾಟೋಪಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ವಿವಿಧ ಸುಧಾರಣೆಗೆ ಮುಂದಾಗಿರುವ ಡಿಜಿಪಿ ಅಲೋಕ್ ಕುಮಾರ್, ಬುಧವಾರ ಬೆಳಗ್ಗೆ 11 ಗಂಟೆಗೆ ಮೈಸೂರಿನ ಕೇಂದ್ರ ಕಾರಾಗೃಹಕ್ಕೆ ಡಿಸಿಪಿಗಳಾದ ಆರ್.ಎನ್. ಬಿಂಧುಮಣಿ, ಕೆ.ಎಸ್.ಸುಂದರ್‌ರಾಜ್ ಹಾಗೂ ಇನ್ನಿತರ ಅಧಿಕಾರಿಗಳೊಂದಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಕಾರಾಗೃಹದ ಎಲ್ಲಾ ಸೆಲ್‌ಗಳಿಗೂ ತೆರಳಿ, ಮಹಿಳಾ ಮತ್ತು ಪುರುಷ ಖೈದಿಗಳು ತಮ್ಮೊಂದಿಗೆ ಹೊಂದಿರುವ ವಸ್ತುಗಳನ್ನು ಸಿಬ್ಬಂದಿಗಳ ಮೂಲಕ ಪರಿಶೀಲಿಸಿದರು. ಈ ವೇಳೆ ಕಾರಾಗೃಹದ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿದರು.

ಗಂಭೀರ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ಕಾರಾಗೃಹ ಸೇರಿರುವವರು ಸೇರಿದಂತೆ ಗಾಂಜಾ ವ್ಯಸನಿಗಳಿಗೆ ಕೆಲವು ಖಡಕ್ ಎಚ್ಚರಿಕೆ ನೀಡಿದ ಡಿಜಿಪಿ ಅಲೋಕ್ ಕುಮಾರ್, ಕಾರಾಗೃಹದ ಒಳಗೆ ಹಾಗೂ ಹೊರಗೆ ಅಪರಾಧ ಕೃತ್ಯಗಳನ್ನು ಮುಂದುವರೆಸಿದರೆ ತಕ್ಕ ಶಾಸ್ತಿ ಎದುರಿಸಬೇಕಾಗುತ್ತದೆ. ಕಾರಾಗೃಹದಲ್ಲಿದ್ದಷ್ಟು ದಿನ ಮಾಡಿದ ಅಪರಾಧಕ್ಕೆ ಪಶ್ಚಾತಾಪದಿಂದ ಪರಿವರ್ತನೆಯಾಗಬೇಕು. ಬಿಡುಗಡೆಯಾದ ಬಳಿಕ ಉತ್ತಮ ನಡತೆಯೊಂದಿಗೆ ಜೀವನ ನಡೆಸಬೇಕು. ಮತ್ತೆ ಅಪರಾಧ ಕೃತ್ಯಗಳನ್ನು ಮುಂದುವರೆಸಿದರೆ ಕಠಿಣ ಕ್ರಮ ಎದುರಿಸಬೇಕಾಗುತ್ತದೆ ಎಂದರು.



ಮೈಸೂರಿನ ಕೇಂದ್ರ ಕಾರಾಗೃಹಕ್ಕೆ ಬಂಧೀಖಾನೆ ಡಿಜಿಪಿ ಅಲೋಕ್‌ಕುಮಾರ್, ಮೈಸೂರು ನಗರ ಡಿಸಿಪಿಗಳಾದ ಆರ್.ಎನ್.ಬಿಂಧುಮಣಿ, ಕೆ.ಎಸ್.ಸುಂದರ್‌ರಾಜ್ ಹಾಗೂ ಇತರ ಅಧಿಕಾರಿಗಳೊಂದಿಗೆ ದಿಢೀರ್ ಭೇಟಿ ನೀಡಿ, ಪರಿಶೀಲಿಸಿದರು.

ಕಾರಾಗೃಹ ಮನಪರಿವರ್ತನಾ ಕೇಂದ್ರವಾಗಿದ್ದು, ಇಲ್ಲಿ ಶಿಕ್ಷೆ ಅನುಭವಿಸುವುದಕ್ಕಿಂತ ಮಾಡಿರುವ ತಪ್ಪಿನ ಅರಿವಾಗಬೇಕು. ಕಾರಾಗೃಹದಲ್ಲಿರುವಾಗ ಇಲ್ಲಿನ ನಿಯಮಗಳಿಗೆ ಬದ್ಧರಾಗಿರಬೇಕು. ಗಾಂಜಾ ಸೇರಿದಂತೆ ನಿಷೇಧಿತ ವಸ್ತುಗಳನ್ನು ಅಕ್ರಮವಾಗಿ ತರಿಸಿಕೊಳ್ಳುವುದು, ಅವುಗಳನ್ನು ಸೇವಿಸುವುದು, ಮೊಬೈಲ್ ಬಳಕೆ ಮಾಡುವುದು ಕಂಡು ಬಂದರೆ ಸುಮ್ಮನೆ ಬಿಡುವುದಿಲ್ಲ ಎಂದು ಎಚ್ಚರಿಸಿದರು.

ಅಹವಾಲು ಆಲಿಕೆ: ಕಾರಾಗೃಹದ ಎಲ್ಲಾ ವಿಭಾಗಗಳ ಪರಿಶೀಲನೆ ಬಳಿಕ ಕೈದಿಗಳಿಂದ ಅಹವಾಲು ಆಲಿಸಿದರು. ಈ ವೇಳೆ ಕೆಲವು ಕೈದಿಗಳು ವಿವಿಧ ಸಮಸ್ಯೆಗಳ ಹೇಳಿಕೊಂಡು ಬಗೆಹರಿಸುವಂತೆ ಮನವಿ ಮಾಡಿದ್ದಾರೆ.

ಸಿಬ್ಬಂದಿಗೂ ಪಾಠ: ಕಾರಾಗೃಹದಲ್ಲಿ ಕಟ್ಟುನಿಟ್ಟಾಗಿ ನಿಯಮ ಪಾಲಿಸಬೇಕು. ಕಾರಾಗೃಹ ಸಿಬ್ಬಂದಿ, ಕೈದಿಗಳು ಸ್ವೇಚ್ಛಾಚಾರದಿಂದ ವರ್ತಿಸಲು ಬಿಡಬಾರದು. ನಿಯಮಾನುಸಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಕಾರಾಗೃಹದಲ್ಲಿ ಅಕ್ರಮ ಚಟುವಟಿಕೆ ತಡೆಗಾಗಿ ಹಲವು ಸುಧಾರಣಾ ಕ್ರಮ ಕೈಗೊಳ್ಳಲಾಗಿದೆ. ಕಾರಾಗೃಹದ ಮುಖ್ಯ ದ್ವಾರದಲ್ಲಿ ತಪಾಸಣೆಗೆ ಕೆಎಸ್‌ಐಎಸ್‌ಎಫ್ ಸಿಬ್ಬಂದಿ ನಿಯೋಜಿಸಲಾಗಿದೆ. ಅವರು ತಪಾಸಣೆ ಮಾಡಿ ಕಾರಾಗೃಹದ ಒಳಗೆ ಕಳುಹಿಸುವ ವಸ್ತು ಸೇರಿದಂತೆ ಹೊರಗಿನಿಂದ ಬರುವ ಕೈದಿಗಳನ್ನು ಕಾರಾಗೃಹದ ಒಳಗೆ ಇಲಾಖೆಯ ಸಿಬ್ಬಂದಿಯಿಂದಲೂ ತಪಾಸಣೆಗೊಳಪಡಿಸಬೇಕು. ಕೈದಿಗಳು ಗಾಂಜಾ, ಮಾದಕ ವಸ್ತು ಸೇವನೆ, ಮೊಬೈಲ್ ಬಳಕೆ ಕಂಡು ಬಂದರೆ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು. ಇದೇ ವೇಳೆ ಕಾರಾಗೃಹ ಇಲಾಖೆಯ ಸಿಬ್ಬಂದಿ ವಿವಿಧ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಿದರು.

ಸುಮಾರು 2 ಗಂಟೆ ಕಾಲ ಪರಿಶೀಲನೆ ಬಳಿಕ ಡಿಜಿಪಿ ಅಲೋಕ್ ಕುಮಾರ್ ಕಾರಾಗೃಹದಿಂದ ಹೊರಗೆ ಬಂದರು. ಈ ವೇಳೆ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ವಿ.ಶೇಷಮೂರ್ತಿ ಅವರು ಹೂಗುಚ್ಛ ನೀಡಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಸಿಸಿಬಿ ಎಸಿಪಿ ಮಹಮದ್ ಶರೀಫ್ ರಾವುತರ್, ಎನ್.ಆರ್.ವಿಭಾಗದ ಎಸಿಪಿ ಥಾಮಸ್ ಮ್ಯಾಥ್ಯೂ ಸೇರಿದಂತೆ ಕೆಎಸ್‌ಐಎಸ್‌ಎಫ್ ಅಧಿಕಾರಿಗಳು, ಕಾರಾಗೃಹದ ಅಧಿಕಾರಿಗಳು ಸಹ ಉಪಸ್ಥಿತರಿದ್ದರು.


9 ಮೊಬೈಲ್ ಪತ್ತೆ ಮಾಡಿ, 30 ಸಾವಿರ ನಗದು ಬಹುಮಾನ ಪಡೆದ ಕಾರಾಗೃಹ ಸಿಬ್ಬಂದಿ!

ಬೆಂಗಳೂರಿನ ಪರಪ್ಪನ ಅಗ್ರಹಾರ ಕಾರಾಗೃಹಕ್ಕೆ ಡಿಜಿಪಿ ಅಲೋಕ್ ಕುಮಾರ್ ಅವರು ಎರಡು ದಿನದ ಹಿಂದೆ ಭೇಟಿ ನೀಡಿ ಪರಿಶೀಲಿಸಿದ್ದರು. ಇದರಿಂದ ಎಚ್ಚೆತ್ತುಕೊಂಡಿದ್ದ ಮೈಸೂರು ಕಾರಾಗೃಹದ ಸಿಬ್ಬಂದಿ, ಕಳೆದ ರಾತ್ರಿ 10 ಗಂಟೆಯಿಂದ ಮಧ್ಯರಾತ್ರಿ 1.30 ರವರೆಗೆ ಕಾರಾಗೃಹದಲ್ಲಿ ಶೋಧ ಕಾರ್ಯ ನಡೆಸಿ, ಖೈದಿಗಳಿಂದ 9 ಮೊಬೈಲ್, 11 ಸಿಮ್, 2 ಚಾರ್ಜರ್, ಒಂದು ಚಾರ್ಜಿಂಗ್ ಕೇಬಲ್ ವಶಪಡಿಸಿಕೊಂಡಿದ್ದರು. ಇಂದು ಡಿಜಿಪಿ ಅಲೋಕ್ ಕುಮಾರ್ ಪರಿಶೀಲನೆಗೆ ಬಂದಾಗ ರಾತ್ರಿ ನಡೆಸಿದ ತಪಾಸಣೆಯ ಮಾಹಿತಿ ನೀಡಲಾಯಿತು. ಅಲೋಕ್ ಕುಮಾರ್ ಅವರು ಖುದ್ದು ತಪಾಸಣೆ ನಂತರ ಮೊಬೈಲ್ ವಶಕ್ಕೆ ಪಡೆದ ಕಾರಾಗೃಹ ಸಿಬ್ಬಂದಿಗೆ 30 ಸಾವಿರ ರೂ. ನಗದು ಬಹುಮಾನ ಘೋಷಿಸಿ, ಮುಂದಿನ ದಿನಗಳಲ್ಲಿ ಅಕ್ರಮ ಚಟುವಟಿಕೆ ತಡೆಗೆ ಬದ್ಧರಾಗಿರುವಂತೆ ಸಲಹೆ ನೀಡಿದರು.

ರೇಣುಕಾಸ್ವಾಮಿ ಕೊಲೆ ಪ್ರಕರಣದ ವಿಚಾರಣೆ ಆರಂಭ

ತಂದೆ-ತಾಯಿಯ ಹೇಳಿಕೆ ದಾಖಲು

ಬೆಂಗಳೂರು, ಡಿ.17– ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣದ ವಿಚಾರಣೆ ಇಂದಿನಿಂದ ಆರಂಭವಾಗಿದೆ. ಮೊದಲ ಹಂತವಾಗಿ ರೇಣುಕಾಸ್ವಾಮಿ ತಂದೆ ಕಾಶಿನಾಥಯ್ಯ, ತಾಯಿ ರತ್ನಪ್ರಭಾ ಬೆಂಗಳೂರಿನ 57ನೇ ಸಿಸಿಹೆಚ್ ನ್ಯಾಯಾಲಯದಲ್ಲಿ ಹೇಳಿಕೆ ದಾಖಲಿಸಿದ್ದಾರೆ.



ವಿಚಾರಣೆಯ ವೇಳೆ ರೇಣುಕಾಸ್ವಾಮಿ ತಾಯಿ ರತ್ನಪ್ರಭಾ ಹೇಳಿಕೆಗೆ ಆರೋಪಿ ಪವಿತ್ರಗೌಡ ಪರ ವಕೀಲ ಬಾಲನ್ ಅವರು ಪಾಟೀ ಸವಾಲು ಮಾಡಿದರು. ಕೆಲವೊಂದಕ್ಕೆ ಉತ್ತರ ಕೊಟ್ಟ ರೇಣುಕಾಸ್ವಾಮಿ ತಾಯಿ, ಬಹುತೇಕ ಪ್ರಶ್ನೆಗೆ ಗೊತ್ತಿಲ್ಲ, ಇಲ್ಲ ಎಂಬ ಉತ್ತರವನ್ನು ನೀಡಿದರು.

ಜೂನ್ 11ರಂದು ಪೊಲೀಸರು ವಿಚಾರಣೆ ಮಾಡಿದ್ದರೆ ಎಂದು ಪವಿತ್ರಾ ಪರ ವಕೀಲ ಬಾಲನ್ ಕೇಳಿದರು. ಅದಕ್ಕೆ ಇಲ್ಲ ಜೂನ್ 14ರಂದು ಉತ್ತರಿಸಿದ್ದೇನೆ ಎಂದು ರತ್ನಪ್ರಭಾ ತಿಳಿಸಿದರು. 2024 ಜೂನ್ 8ರಂದು ಕೆಲಸಕ್ಕೆ ಹೋಗುತ್ತೇನೆ ಎಂದು ಹೇಳಿ, ರೇಣುಕಾಸ್ವಾಮಿ ಅಪೋಲೋ ಫಾರ್ಮಸಿಗೆ ಹೋಗಿದ್ದ ಹೌದಾ ಅಂತ ವಕೀಲ ಬಾಲನ್ ಕೇಳಿದಾಗ, ರೇಣುಕಾ ಸ್ವಾಮಿ ತಾಯಿ ರತ್ನಪ್ರಭಾ ಇಲ್ಲ ಎಂದು ಉತ್ತರಿಸಿದರು.

ಶವಾಗಾರದಲ್ಲಿ ರೇಣುಕಾಸ್ವಾಮಿ ಧರಿಸಿದ್ದ ಟಿ–ಶರ್ಟ್ ನೋಡಿದ್ದೀರಾ, ಆತ ಮನೆಯಿಂದ ಹೋಗುವಾಗ ಬೇರೆ ಶರ್ಟ್ ಹಾಕಿದ್ದ. 2024ರ ಜೂನ್ 11ರಂದು ಶರ್ಟ್ ಬಗ್ಗೆ ಪೊಲೀಸರು ವಿಚಾರಣೆ ಮಾಡಿದ್ರಾ, ನೀಲಿ ಜೀನ್ಸ್ ಮತ್ತು ಕೈಗಡಿಯಾರ ಧರಿಸಿದ್ದನ್ನು ಪೊಲೀಸರಿಗೆ ಹೇಳಿದ್ರಾ, ನಿಮ್ಮ ಮಗನ ಜತೆ ಮಧ್ಯಾಹ್ನ ಊಟ ಮಾಡಿದ್ದೇನೆ ಎಂದು ರೇಣುಕಾಸ್ವಾಮಿಯ ಕೆಲವು ಸ್ನೇಹಿತರು ಹೇಳಿದ್ದಾರೆ ಎಂದಾಗ, ಇಲ್ಲ ಎಂದು ರೇಣುಕಾಸ್ವಾಮಿ ತಾಯಿ ಉತ್ತರ ನೀಡಿದರು.

ಜೂನ್ 8ರಂದು ನಿಮ್ಮ ಮಗ ಕೆಲಸಕ್ಕೆ ಹೋಗುತ್ತೇನೆಂದು ಹೇಳಿ, ಸ್ನೇಹಿತರೊಂದಿಗೆ ಬಾಲಾಜಿ ಬಾರ್‌ಗೆ ಊಟಕ್ಕೆ ಹೋಗಿದ್ದು ನಿಮಗೆ ಗೊತ್ತೆ. ನಿಮ್ಮ ಮಗ ಎಲ್ಲಿ ಹೋದ ಎಂದು ಸ್ನೇಹಿತರನ್ನು ವಿಚಾರಿಸಿದ್ರಾ ಆತ ಎಲ್ಲಿಗೆ ಹೋಗಿದ್ದು ಎಂದು ನಿಮಗೆ ಗೊತ್ತಿತ್ತಾ. ಕೆಎಸ್‌ಆರ್‌ಟಿಸಿ ಬಸ್ ಹತ್ತಿದ್ದು ಗೊತ್ತಿತ್ತಾ ಎಂದಾಗ ಗೊತ್ತಿರಲಿಲ್ಲ ಎಂದು ರತ್ನಪ್ರಭಾ ಉತ್ತರಿಸಿದರು.

ಮಗ ಕೆಲಸಕ್ಕೆ ಹೋಗುವಾಗ ಯೂನಿಫಾರ್ಮ್ ಹಾಕುತ್ತಿರಲಿಲ್ವಾ ಎಂದಾಗ ಶನಿವಾರ ಮಾತ್ರ ಯುನಿಫಾರ್ಮ್ ಹಾಕುತ್ತಿರಲಿಲ್ಲ ಎಂದು ರತ್ನ ಪ್ರಭ ಉತ್ತರಿಸಿದರು. ರೇಣುಕಾಸ್ವಾಮಿ ಕೊರಳಲ್ಲಿ ಗೋಲ್ಡ್ ಚೈನ್ ಇತ್ತಾ. ಸಾವಿನ ನಂತರ ಪೊಲೀಸರು ನಿಮಗೆ ಚೈನ್ ನೀಡಿದ್ರಾ ಅಂತ ಕೇಳಿದಾಗ ರತ್ನಪ್ರಭಾ ಇಲ್ಲ ಎಂದು ಉತ್ತರಿಸಿದರು.

ನಿಮ್ಮ ಮಗ ಕೋರ್ಟ್ ಕೇಸ್‌ಗೆ ಹೋಗುತ್ತಿದ್ದದ್ದು ಗೊತ್ತಾ, ಬಜರಂಗದಳ ಹುಡುಗರ ಜೊತೆಗೆ ಓಡಾಡಿದ್ದ ಮಾಹಿತಿ ಗೊತ್ತಾ, ನಿಮ್ಮ ಮಗನನ್ನು ಪೊಲೀಸರು ಬಂಧಿಸಿದ್ದರು ಎನ್ನುವುದು ತಿಳಿದಿದೆಯೇ ಎಂದು ಪ್ರಶ್ನಿಸಿದರು. ನನಗೆ ಯಾವುದೂ ಗೊತ್ತಿಲ್ಲ ಎಂದು ರೇಣುಕಾಸ್ವಾಮಿ ತಾಯಿ ರತ್ನಪ್ರಭಾ ಉತ್ತರ ಕೊಟ್ಟರು.

ಇಷ್ಟು ವಿಚಾರಣೆ ನಡೆಸುವಷ್ಟರಲ್ಲಿ ನ್ಯಾಯಾಲಯದ ಕಲಾಪದ ಅವಧಿ ಮುಗಿಯುತ್ತಾ ಬಂತು. ಆಗ ನ್ಯಾಯಾಧೀಶರು ವಿಚಾರಣೆಯನ್ನು ನಾಳೆಗೆ (ಡಿ.18ಕ್ಕೆ) ಮುಂದೂಡಲು ನಿರ್ಧರಿಸಿದರು. ಆದರೆ ಪಾಟಿ ಸವಾಲು ನಡೆಸುತ್ತಿದ್ದ ಬಾಲನ್ ಅವರು ಇನ್ನೂ ಎರಡು ಗಂಟೆಗಳ ವಿಚಾರಣೆ ನಡೆಸಬೇಕಾಗಿದೆ ಎಂದು ಹೇಳಿದರು. ಅದಕ್ಕೆ ನ್ಯಾಯಾಧೀಶರು, ಡಿ. 18ರ ಮಧ್ಯಾಹ್ನ 12.30ಕ್ಕೆ ವಿಚಾರಣೆ ಮುಂದೂಡಿದರು.

ಕನ್ನಡ ಭಾಷೆ ಕಲಿಸದ ಶಿಕ್ಷಣ ಸಂಸ್ಥೆಗಳ ವಿರುದ್ಧ ಕ್ರಮ

ಶಿಕ್ಷಣ ಸಚಿವ ಮಧು ಬಂಗಾರಪ್ಪ


ಬೆಳಗಾವಿ, ಡಿ.17– ಕನ್ನಡ ಭಾಷಾ ಕಲಿಕೆ ಅಧಿನಿಯಮದಡಿ ಕನ್ನಡ ಕಲಿಸುತ್ತಿಲ್ಲ ಎಂಬ ದೂರು ಬಂದರೆ ಅಂತಹ ಖಾಸಗಿ ಶಿಕ್ಷಣ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ.



ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಎನ್.ರವಿಕುಮಾರ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ ಖಾಸಗಿ ಶಾಲೆಗಳನ್ನು ನೋಂದಣಿ ಮಾಡುವಾಗ ಕನ್ನಡ ಭಾಷಾ ಕಲಿಕೆ ಅಧಿನಿಯಮದಂತೆ ಕನ್ನಡ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಬೋಧಿಸಲು ಜಾರಿಗೆ ತಂದಿರುವ ನಿಯಮ ಪಾಲನೆ ಮಾಡದ ಬಗ್ಗೆ ದೂರುಗಳು ಬಂದರೆ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದರು.

ಆರ್‌ಟಿಇ ಶುಲ್ಕ ಒಂದೂವರೆ ತಿಂಗಳಲ್ಲಿ ಪಾವತಿ: ಕಳೆದ ಎರಡೂವರೆ ವರ್ಷಗಳಲ್ಲಿ ಕಡ್ಡಾಯ ಶಿಕ್ಷಣ ಹಕ್ಕು (ಆರ್‌ಟಿಇ) ಅಡಿ 2024–25ನೇ ಸಾಲಿನಲ್ಲಿ 3,413 ಹಾಗೂ 2025–26ನೇ ಸಾಲಿನಲ್ಲಿ 2,509 ಮಕ್ಕಳು ಪ್ರವೇಶಾತಿ ಪಡೆದಿದ್ದಾರೆ. ಪೋಷಕರು ವಾಸಿಸುವ ಪ್ರದೇಶಗಳಲ್ಲಿ ಸರ್ಕಾರಿ ಶಾಲೆಗಳು ಇಲ್ಲದೇ ಇದ್ದಾಗ ಅಥವಾ ಸೀಟು ಸಿಗದೇ ಇದ್ದಾಗ ಆರ್‌ಟಿಇ ಅಡಿ ಖಾಸಗಿ ಶಾಲೆಗಳಲ್ಲಿ ತಮ್ಮ ಮಕ್ಕಳನ್ನು ಸೇರಿಸಲು ಅವಕಾಶ ನೀಡಲಾಗಿದೆ. ಹೀಗಾಗಿ ಮಕ್ಕಳ ಸೇರ್ಪಡೆ ಸಂಖ್ಯೆ ಕಡಿಮೆಯಾಗಿದೆ ಎಂದರು. ಶಾಲೆಗಳು ಮಕ್ಕಳ ಪ್ರವೇಶಾತಿ ವಿವರಗಳನ್ನು ಸಲ್ಲಿಸಿದ ನಂತರ ಆರ್‌ಟಿಇ ಅಡಿ ಶುಲ್ಕ ಪಾವತಿ ಇರುವ 327 ಶಾಲೆಗಳಿಗೆ ಒಂದೂವರೆ ತಿಂಗಳಲ್ಲಿ ಶುಲ್ಕ ಪಾವತಿ ಮಾಡಲಾಗುವುದು ಎಂದು ಸಚಿವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಉಚಿತ ಕಣ್ಣಿನ ತಪಾಸಣೆ



ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯ ಎಎಸ್‌ಜಿ ಕಣ್ಣಿನ ಆಸ್ಪತ್ರೆ ಹಾಗೂ ನಯನಜ ಕ್ಷತ್ರಿಯ ತೆಲುಗು ರೆಡ್ಡಿ ಶ್ರೀರಾಮಮಂದಿರ, ತಿಲಕ್ ನಗರ ಇವರ ಸಹಯೋಗದೊಂದಿಗೆ ಮಂಗಳವಾರ ಹಮ್ಮಿಕೊಂಡಿದ್ದ ಉಚಿತ ಕಣ್ಣಿನ ತಪಾಸಣೆ ಕಾರ್ಯ ಕ್ರಮವನ್ನು ಮೈಸೂರು ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಎನ್.ಆರ್.ನಾಗೇಶ್ ಉದ್ಘಾಟಿಸಿದರು. ಈ ವೇಳೆ ಗುರುಪ್ರಸಾದ್, ಹರೀಶ್ ರೆಡ್ಡಿ, ಗುರುರಾಜ್, ವಿಶ್ವನಾಥ್ (ಶಿವಣ್ಣ), ಕೆ.ವಿಶ್ವನಾಥ್, ಸುರೇಶ್, ರಾಜು ರೆಡ್ಡಿ, ರಮೇಶ್, ಚಂದ್ರಶೇಖರ್, ರುಕ್ಮಂಗದ, ಪ್ರದೀಪ್, ಜ್ಯೋತಿ, ಮಂಜುಳಾ, ಡಾ. ಪಾಷಾ ಅಲ್ವಿ, ಡಾ. ಬಸವರಾಜ್, ಡಾ.ಮಹಮದ್, ಸಂಜಯ್, ಬೃಹನ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಉನ್ನತ ಶಿಕ್ಷಣ ಇಲಾಖೆಯಲ್ಲಿ 2997 ಬೋಧಕ, 6295 ಬೋಧಕೇತರ ಹುದ್ದೆ ಖಾಲಿ

ಬೆಳಗಾವಿ, ಸುವರ್ಣ ವಿಧಾನಸೌಧ, ಡಿ.17(ಕೆಎಂಶಿ)–ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯ 32 ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿನ 2,997 ಬೋಧಕ ಹಾಗೂ 6,295 ಬೋಧಕೇತರ ಹುದ್ದೆಗಳು ಖಾಲಿ ಇವೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ವಿಧಾನ ಪರಿಷತ್‌ಗೆ ತಿಳಿಸಿದ್ದಾರೆ. ಪ್ರಶ್ನೋತ್ತರ ವೇಳೆಯಲ್ಲಿ ಸಿ.ಟಿ.ರವಿ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಖಾಲಿ ಹುದ್ದೆಗಳ ಭರ್ತಿ ಒಳಗೊಂಡಂತೆ ವಿಶ್ವವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿಗಳನ್ನು ಪರಾಮರ್ಶಿಸಿ ಸೂಕ್ತ ಶಿಫಾರಸ್ಸು ಮಾಡುವಂತೆ ಉಪಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪಸಮಿತಿ ರಚಿಸಲಾಗಿದೆ ಎಂದರು.

ಹುಟ್ಟುಹಬ್ಬದ ಶುಭ ಹಾರೈಕೆ



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಕೇಕ್ ತಿನ್ನಿಸುವ ಮೂಲಕ ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಹುಟ್ಟುಹಬ್ಬದ ಶುಭಾಶಯ ಕೋರಿದರು.

ಕಾಂಗ್ರೆಸ್ ನಾಯಕರ ವಿರುದ್ಧ ಸುಳ್ಳು ಕೇಸ್ ದಾಖಲಿಸಿ ಅಪಪ್ರಚಾರ


● ನ್ಯಾಷನಲ್ ಹೆರಾಲ್ಡ್ ಪ್ರಕರಣ ಉಲ್ಲೇಖಿಸಿ ಸಿಎಂ ಸಿದ್ದರಾಮಯ್ಯ, ಬಿಜೆಪಿ ವಿರುದ್ಧ ವಾಗ್ದಾಳಿ
● ಹೆರಾಲ್ಡ್ ವಿಷಯದಲ್ಲಿ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಬಿಜೆಪಿ ವಿರುದ್ಧ ಕಾಂಗ್ರೆಸ್ ಧರಣಿ

ಬೆಳಗಾವಿ, ಡಿ.17(ಕೆಎಂಶಿ)–ಬಿಜೆಪಿ ದ್ವೇಷ ರಾಜಕಾರಣದಲ್ಲಿ ತೊಡಗಿದ್ದು, ಕಾಂಗ್ರೆಸ್ ನಾಯಕರ ಮೇಲೆ ಸುಳ್ಳು ಕೇಸುಗಳನ್ನು ದಾಖಲಿಸಿ ಅಪಪ್ರಚಾರ ಮಾಡಲಾಗುತ್ತಿದೆ. ಈ ಕುತಂತ್ರಕ್ಕೆ ನ್ಯಾಯಾಲಯದಲ್ಲಿ ನ್ಯಾಯ ದೊರೆತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ.) ಸಲ್ಲಿಸಿದ ಆರೋಪಪಟ್ಟಿಯನ್ನು ಸಾರಾಸಗಟಾಗಿ ತಿರಸ್ಕರಿಸಿದ ವಿಚಾರಣಾ ನ್ಯಾಯಾಲಯದ ತೀರ್ಮಾನ ಬೆಂಬಲಿಸಿ ಬೆಳಗಾವಿಯ ಸುವರ್ಣ ವಿಧಾನಸೌಧದ ಆವರಣದಲ್ಲಿ ನಡೆದ ಧರಣಿಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಬಿಜೆಪಿ ಅಧಿಕಾರದಲ್ಲಿರುವ ಕಡೆಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಗುರಿಯಾಗಿಸಿ, ಅಪರಾಧಿಗಳಾಗಿ ಬಿಂಬಿಸಿ, ನ್ಯಾಯಾಲಯಕ್ಕೆ ಎಡತಾಕುವಂತೆ ಮಾಡುತ್ತಿದ್ದಾರೆ ಎಂದರು.

ಬಿಜೆಪಿ ನಾಯಕ ಸುಬ್ರಮಣ್ಯಂಸ್ವಾಮಿ 2012ರಲ್ಲಿ ಕಾಂಗ್ರೆಸ್ ನಾಯಕರ ವಿರುದ್ಧ ಖಾಸಗಿ ಕ್ರಿಮಿನಲ್ ದಾವೆ ಹೂಡಿದ್ದರು. ಇದನ್ನು ಆಧರಿಸಿ ಇ.ಡಿ. ಸಲ್ಲಿಸಿದ್ದ ಆರೋಪಪಟ್ಟಿ ಎಫ್‌ಐಆರ್ ಆಧರಿಸದ ಕಾರಣ ಮೊಕದ್ದಮೆಯನ್ನು ಹೈಕೋರ್ಟ್ ತಿರಸ್ಕರಿಸಿದೆ.

ದೇಶದ ಜನರಲ್ಲಿ ಸ್ವಾತಂತ್ರ್ಯ ಹೋರಾಟದ ಜಾಗೃತಿ ಮೂಡಿಸಲು ನ್ಯಾಷನಲ್ ಹೆರಾಲ್ಡ್ ಪತ್ರಿಕೆಯನ್ನು 1937ರಲ್ಲಿ ಜವಾಹರ್ ಲಾಲ್ ನೆಹರೂ ಪ್ರಾರಂಭಿಸಿದರು. ಇದು ಕಾಂಗ್ರೆಸ್ ಪಕ್ಷದ ಆಸ್ತಿ, ನಂತರ ಪತ್ರಿಕೆಯನ್ನು ಯಂಗ್ ಇಂಡಿಯಾ ಸಂಸ್ಥೆ ವಹಿಸಿಕೊಂಡಿತು. ಸಂಸ್ಥೆಗೆ ಸೇರಿದ್ದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮೋತಿಲಾಲ್ ವೋರಾ, ಆಸ್ಕರ್ ಫರ್ನಾಂಡಿಸ್ ವಿರುದ್ಧ ಪ್ರಕರಣ ದಾಖಲಿಸಿ, ಇ.ಡಿ. ತನಿಖೆ ಮಾಡಿಸಲಾಯಿತು.



ದೇಶದಲ್ಲಿ ಭ್ರಷ್ಟಾಚಾರ ತಾಂಡವಾಡುತ್ತಿದೆ. ಹಣದುಬ್ಬರ ಹೆಚ್ಚಿದೆ. ನಿರುದ್ಯೋಗ ಪ್ರಮಾಣ ಏರಿಕೆಯಾಗಿದೆ. ಜನರ ಮೇಲೆ ತೆರಿಗೆಗಳನ್ನು ಮನಬಂದಂತೆ ಹೇರಿ, ಭಾರತವನ್ನು ಸಾಲಗಾರ ದೇಶವನ್ನಾಗಿ ಮಾಡಲಾಗುತ್ತಿದೆ.

ಡಾ.ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ವೇಳೆ ದೇಶದ ಸಾಲ ಸುಮಾರು 53.11 ಲಕ್ಷ ಕೋಟಿ ರೂ. ಇತ್ತು. ಪ್ರಧಾನಿ ನರೇಂದ್ರ ಮೋದಿ ಅಧಿಕಾರಕ್ಕೆ ಬಂದ 11 ವರ್ಷಗಳಲ್ಲಿ ಸಾಲದ ಮೊತ್ತ 148 ಲಕ್ಷ ಕೋಟಿ ರೂ.ಗಳಾಗಿದೆ. ಬಿಜೆಪಿ ತನ್ನ ತಪ್ಪು ಮರೆಮಾಚಲು ಸುಳ್ಳು ಪ್ರಕರಣಗಳ ಮೊರೆಹೋಗುತ್ತಿದೆ ಎಂದರು.

ಪ್ರತಿವರ್ಷ 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಘೋಷಿಸಿದ್ದರು. ವಿದೇಶದಲ್ಲಿನ ಕಪ್ಪುಹಣ ತಂದು ದೇಶದ ಪ್ರತಿಯೊಬ್ಬರ ಖಾತೆಗೂ 15 ಲಕ್ಷ ರೂ. ನೀಡುವುದಾಗಿ ಹೇಳಿದ್ದರು. ಈ ಯಾವುದೇ ಭರವಸೆಗಳನ್ನು ಈಡೇರಿಸಲಿಲ್ಲ.

ದೈನಂದಿನ ಬಳಕೆಯಾದ ಪೆಟ್ರೋಲ್, ಡೀಸೆಲ್, ಗ್ಯಾಸ್ ಬೆಲೆಗಳು ಗಗನಕ್ಕೇರಿವೆ. ಇಂತಹ ತಪ್ಪುಗಳನ್ನು ಮರೆಮಾಚಲು ಸುಳ್ಳು ಪ್ರಕರಣಗಳಿಗೆ ಹೆಚ್ಚು ಒತ್ತು ನೀಡುವ ಮೂಲಕ ದೇಶದ ಜನರ ದಿಕ್ಕು ತಪ್ಪಿಸುತ್ತಿದ್ದಾರೆ.

ಮಹಾತ್ಮಾಗಾಂಧಿ ಉದ್ಯೋಗ ಖಾತ್ರಿ ಯೋಜನೆ ಹೆಸರನ್ನು ವಿಕಸಿತ್ ಭಾರತ್ ರೋಜ್ಗಾರ್ ಮತ್ತು ಅಜೀವಿಕಾ ಮಿಷನ್ (ಗ್ರಾಮೀಣ) (ವಿಬಿ–ಜಿ ಆರ್‌ಎಎಂಜಿ) ಯೋಜನೆಯೆಂದು ಬದಲಿಸಿದ್ದಾರೆ.

ರಾಜಭವನ ಹೆಸರನ್ನು ಲೋಕಭವನ ಎಂದು ಬದಲಾಯಿಸಿದ್ದಾರೆ. ಇದು ಸರ್ಕಾರದ ಆಸ್ತಿಯಾಗಿದ್ದು, ಹೆಸರು ಬದಲಾವಣೆ ಸರಿಯಲ್ಲ. ಹೊಸ ನಾಮಕರಣ ಕಾರ್ಯದಲ್ಲಿ ಕೇಂದ್ರ ಸರ್ಕಾರ ನಿರತವಾಗಿದೆಯೇ ಹೊರತು ಬಡವರಿಗೆ ಅನುಕೂಲ ಕಲ್ಪಿಸುವ ಕೆಲಸ ಮಾಡುತ್ತಿಲ್ಲ ಎಂದರು.

ಮಹಾತ್ಮಾಗಾಂಧಿ ಹಾಗೂ ಅಂಬೇಡ್ಕರ್ ಚಿಂತನೆಗಳನ್ನು ಇಷ್ಟಪಡದ ಬಿಜೆಪಿಗೆ ಬಡವರನ್ನು ಕಂಡರೆ ಆಗುವುದಿಲ್ಲ, ಬಡವರ ಯಾವುದೇ ಯೋಜನೆಗಳಿಗೆ ಬಿಜೆಪಿ ಸಹಮತ ಇಲ್ಲ. ಬಡವರು, ದೀನದಲಿತರು, ಹಿಂದುಳಿದವರು, ಅಲ್ಪ ಸಂಖ್ಯಾತರನ್ನು ಕಡೆಗಣಿಸುವುದಲ್ಲದೆ, ಕರ್ನಾಟಕದಲ್ಲಿ ಬಡವರಿಗಾಗಿ ತಂದ ಗ್ಯಾರಂಟಿ ಯೋಜನೆಗಳನ್ನೂ ವಿರೋಧಿಸಿದರು. ಆದರೆ, ಜನಪರ ಯೋಜನೆಗಳನ್ನು ದೇಶದೆಲ್ಲೆಡೆ ಬಿಜೆಪಿ ಅನುಸರಿಸುತ್ತಿದೆ.

ತೀರ್ಪಿನ ಪರ ಪ್ರತಿಭಟನೆ ಕೈಗೊಂಡಿದ್ದು, ಸದನದ ಒಳಗೆ ಮತ್ತು ಹೊರಗೆ ಮುಂದುವರೆಸುತ್ತೇವೆ. ರಾಜ್ಯ ಹಾಗೂ ದೇಶದುದ್ದಕ್ಕೂ ಬಿಜೆಪಿಯ ಕುತಂತ್ರ ನೀತಿ ವಿರೋಧಿಸಿ ಹೋರಾಟ ಮಾಡುತ್ತೇವೆ. ಕಾಂಗ್ರೆಸ್ ಕೈಕಟ್ಟಿ ಕೂರುವ ಪಕ್ಷವಲ್ಲ.

ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿದ್ದು ಕಾಂಗ್ರೆಸ್ ಪಕ್ಷ, ಬಿಜೆಪಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿರಲಿಲ್ಲ. ಆದರೆ, ದ್ವೇಷ ರಾಜಕಾರಣ ಮಾಡುತ್ತಿದೆ ಎಂದರು.

ದೇಶ - ವಿದೇಶ

ಉಕ್ರೇನ್ ಬೇಡಿಕೆ ನಿರಾಕರಿಸಿದರೆ ಯುದ್ಧ ಮುಂದುವರಿಕೆ: ಪುಟಿನ್

ಮಾಸ್ಕೊ: ಉಕ್ರೇನ್ ಮತ್ತು ಅದರ ಪಾಶ್ಚಿಮಾತ್ಯ ಮಿತ್ರ ರಾಷ್ಟ್ರಗಳು ಶಾಂತಿ ಒಪ್ಪಂದದ ಸಂದರ್ಭದಲ್ಲಿ ರಷ್ಯಾದ ಬೇಡಿಕೆಗಳನ್ನು ನಿರಾಕರಿಸಿದರೆ ಉಕ್ರೇನ್ ಮೇಲಿನ ಯುದ್ಧವನ್ನು ಮುಂದುವರಿಸುತ್ತೇವೆ ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಬುಧವಾರ ಎಚ್ಚರಿಸಿದರು.



ನಾಲ್ಕು ವರ್ಷಗಳ ರಷ್ಯಾ–ಉಕ್ರೇನ್ ಯುದ್ಧವನ್ನು ನಿಲ್ಲಿಸುವ ನಿಟ್ಟಿನಲ್ಲಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರಾಜತಾಂತ್ರಿಕ ಪ್ರಯತ್ನ ನಡೆಸುತ್ತಿದ್ದಾರೆ. ಆದರೆ ಉಭಯ ದೇಶಗಳ ನಡುವಣ ಬೇಡಿಕೆಗಳ ತಿಕ್ಕಾಟ ಜೋರಾಗಿದೆ.

ಸೇನೆಯ ಉನ್ನತ ಅಧಿಕಾರಿಗಳೊಂದಿಗೆ ವಾರ್ಷಿಕ ಸಭೆ ನಡೆಸಿದ ಪುಟಿನ್, ಗುರಿ ತಲುಪುವುದೇ ರಷ್ಯಾದ ಆದ್ಯತೆ. ಸಂಘರ್ಷದ ಬೇರುಗಳನ್ನು ರಾಜತಾಂತ್ರಿಕ ವಿಧಾನದ ಮೂಲಕ ಕಿತ್ತುಹಾಕುತ್ತೇವೆ. ಆದರೆ ಎದುರಾಳಿ ತಂಡ ಮತ್ತು ಅದರ ಮಿತ್ರ ರಾಷ್ಟ್ರಗಳು ಬೇಡಿಕೆಯನ್ನು ನಿರಾಕರಿಸಿದರೆ ಸೇನಾ ಕಾರ್ಯಾಚರಣೆ ಮೂಲಕ ತನ್ನ ಐತಿಹಾಸಿಕ ಪ್ರದೇಶವನ್ನು ರಷ್ಯಾ ವಶಕ್ಕೆ ಪಡೆಯಲಿದೆ ಎಂದು ಹೇಳಿದರು.

20 ದೇಶಗಳ ಮೇಲೆ ನಿರ್ಬಂಧ ಹೇರಿದ ಅಮೆರಿಕ

ನ್ಯೂಯಾರ್ಕ್: ಪ್ಯಾಲೆಸ್ಟೀನ್ ಸರ್ಕಾರ ನೀಡುವ ಪಾಸ್‌ಪೋರ್ಟ್ ಹೊಂದಿರುವ ವ್ಯಕ್ತಿಗಳಿಗೆ ಮತ್ತು ಇತರೆ 20 ದೇಶಗಳ ಪ್ರಜೆಗಳಿಗೆ ಅಮೆರಿಕ ಪ್ರವೇಶವನ್ನು ಸಂಪೂರ್ಣವಾಗಿ ನಿರ್ಬಂಧಿಸಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಆದೇಶಕ್ಕೆ ಮಂಗಳವಾರ ಸಹಿ ಹಾಕಿದ್ದಾರೆ. ಅಮೆರಿಕ ನಿರ್ಬಂಧ ಹೇರಿರುವ ದೇಶಗಳ ಪಟ್ಟಿಗೆ ಈ 20 ದೇಶಗಳು ಹೊಸ ಸೇರ್ಪಡೆಯಾಗಿವೆ.



ನಿರ್ಬಂಧ ಹೇರಲಾಗಿರುವ ದೇಶಗಳು ತಮ್ಮ ಮಾಹಿತಿಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಲು ನಿರಾಕರಿಸಿವೆ. ಈ ದೇಶಗಳ ಪ್ರಜೆಗಳು ಯಾವ ರೀತಿಯ ಬೆದರಿಕೆ ಒಡ್ಡುತ್ತಾರೆ ಎಂದು ನಮಗೆ ತಿಳಿದಿಲ್ಲ. ಇದು ಅಮೆರಿಕದ ಭದ್ರತೆ ಮತ್ತು ಸಾರ್ವಜನಿಕರ ಸುರಕ್ಷತೆಗೆ ಮಾರಕವಾಗಲಿದೆ. ಆದ್ದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಆದೇಶದಲ್ಲಿ ಹೇಳಲಾಗಿದೆ.

ಅಂಗೋಲಾ, ಆಂಟಿಗುವಾ ಮತ್ತು ಬಾರ್ಬುಡಾ, ಬೆನಿನ್, ಕೋಟ್‌ಡಿ ಉವಾ, ಡೊಮಿನಿಕಾ, ಗಬಾನ್, ಗಾಂಬಿಯಾ, ಮಾವಿ, ಮೌರಿಟೇನಿಯಾ, ನೈಜೀರಿಯಾ, ಸೆನೆಗಲ್, ತಾಂಜಾನಿಯಾ, ಟೊಂಗಾ, ಜಾಂಬಿಯಾ, ಜಿಂಬಾಬ್ವೆ ದೇಶಗಳ ಪ್ರಜೆಗಳ ಮೇಲೆ ಭಾಗಶಃ ನಿರ್ಬಂಧ ವಿಧಿಸಲಾಗಿದೆ. ಬುರ್ಕಿನಾ ಫಾಸೊ, ಮಾಲಿ, ನೈಜರ್, ದಕ್ಷಿಣ ಸುಡಾನ್ ಮತ್ತು ಸಿರಿಯಾ ದೇಶಗಳ ಮೇಲೆ ಸಂಪೂರ್ಣ ನಿರ್ಬಂಧ ಹೇರಲಾಗಿದೆ.

ಬ್ರೌನ್ ವಿಶ್ವವಿದ್ಯಾಲಯದಲ್ಲಿ ಗುಂಡಿನ ದಾಳಿ:ಶಂಕಿತನ ವಿಡಿಯೊ ಬಿಡುಗಡೆ

ವಾಷಿಂಗ್ಟನ್: ಅಮೆರಿಕದ ಬ್ರೌನ್ ವಿಶ್ವ ವಿದ್ಯಾಲಯದಲ್ಲಿ ಗುಂಡಿನ ದಾಳಿ ನಡೆಸಿದ ಶಂಕಿತನ ವಿಡಿಯೊವನ್ನು ಪೊಲೀಸರು ಬಿಡುಗಡೆ ಮಾಡಿದ್ದು, ಶಂಕಿತನಿಗಾಗಿ ಬಲೆ ಬೀಸಿದ್ದಾರೆ.



ಅಮೆರಿಕದ ಬ್ರೌನ್ ವಿಶ್ವವಿದ್ಯಾಲಯದಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಇಬ್ಬರು ವಿದ್ಯಾರ್ಥಿಗಳು ಮೃತಪಟ್ಟಿದ್ದು, ಒಂಬತ್ತು ಮಂದಿ ಗಾಯಗೊಂಡಿದ್ದರು ಎಂದು ರೋಡ್ ಐಲೆಂಡ್‌ನ ಪ್ರಾವಿಡೆನ್ಸ್‌ನ ಮೇಯರ್ ಬ್ರೆಟ್ ಸ್ಮೈಲಿ ತಿಳಿಸಿದ್ದರು. ಶಂಕಿತನು ಬ್ರೌನ್ ವಿಶ್ವವಿದ್ಯಾಲಯದಲ್ಲಿ ಓಡಾಟ ನಡೆಸಿದ ವಿಡಿಯೊವನ್ನು ಪೊಲೀಸರು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ.

ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ (ಎಫ್‌ಬಿಐ) ಶಂಕಿತನ ಬಗ್ಗೆ ಮಾಹಿತಿ ನೀಡಿದವರಿಗೆ ರೂ.45 ಲಕ್ಷ ಬಹುಮಾನ ನೀಡುವುದಾಗಿ ಘೋಷಿಸಿದೆ. ಆದಾಗ್ಯೂ, ಅಧಿಕಾರಿಗಳು ಆರೋಪಿಗಳ ಪತ್ತೆಗಾಗಿ ಹಾಗೂ ಈ ಗುಂಡಿನ ದಾಳಿಯ ಹಿಂದೆ ಯಾರಿದ್ದಾರೆ ಎಂದು ತಿಳಿಯಲು ತನಿಖೆಯನ್ನು ಚುರುಕುಗೊಳಿಸಿದ್ದಾರೆ. ಶಂಕಿತನ ಬಗ್ಗೆ ತಿಳಿದವರು ಮಾಹಿತಿ ನೀಡಿ ಎಂದು ದೂರವಾಣಿ ಸಂಖ್ಯೆ ಉಲ್ಲೇಖಿಸಿ ಎಫ್‌ಬಿಐ ಅಧಿಕಾರಿಗಳು ತಿಳಿಸಿದ್ದಾರೆ.

ಕಬಡ್ಡಿ ಪಟು ಹತ್ಯೆ ಪ್ರಕರಣ: ಪೊಲೀಸ್ ಎನ್‌ಕೌಂಟರ್‌ನಲ್ಲಿ ಪ್ರಮುಖ ಆರೋಪಿ ಹತ್ಯೆ

ಮೊಹಾಲಿ: ಕಬಡ್ಡಿ ಪಂದ್ಯದ ವೇಳೆ ನಡೆದಿದ್ದ ಆಟಗಾರನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಕರಣದ ಪ್ರಮುಖ ಆರೋಪಿ ಪಂಜಾಬ್ ಪೊಲೀಸರು ಎನ್‌ಕೌಂಟರ್‌ನಲ್ಲಿ ಹತನಾಗಿದ್ದಾನೆ.



ಗುಂಡಿನ ದಾಳಿ ನಡೆಸಿ ಪರಾರಿಯಾಗಿದ್ದ ಆರೋಪಿಗಳನ್ನು ಮೊಹಾಲಿ ಪೊಲೀಸರು ಎರಡೇ ದಿನದಲ್ಲಿ ಪತ್ತೆ ಹಚ್ಚಿದ್ದಾರೆ. ವಶಕ್ಕೆ ಪಡೆಯಲು ಹೋದಾಗ ನಡೆಸಿದ ಗುಂಡಿನ ಚಕಮಕಿಯಲ್ಲಿ ಆರೋಪಿ ಮಿದ್ದುನ ಹತ್ಯೆ ಮಾಡಲಾಗಿದೆ.

ಹರ್ಪಿಂದರ್ ಅಲಿಯಾಸ್ ಮಿದ್ದು ಕಬಡ್ಡಿ ಪಟು ರಾಣಾ ಮೇಲೆ ಗುಂಡಿನ ದಾಳಿ ನಡೆಸಿದ್ದ. ವಾಹನ ಮೂಲಕ ಕಬಡ್ಡಿ ಟೂರ್ನಿ ಆಯೋಜನೆ ಬಳಿ ಬಂದ ಹರ್ಪಿಂದರ್ ಅಲಿಯಾಸ್ ಮಿದ್ದು ಹಾಗೂ ಸಹಚರರು ಏಕಾಏಕಿ ತೀರಾ ಹತ್ತಿರದಿಂದಲೇ ಕಬ್ಬಡ್ಡಿ ಆಟಗಾರ ರಾಣಾ ಮೇಲೆ ಹಲವು ಸುತ್ತು ಗುಂಡಿನ ದಾಳಿ ನಡೆಸಿದ್ದರು. ಹೀಗಾಗಿ ರಾಣಾ ಸ್ಥಳದಲ್ಲೇ ಮೃತಪಟ್ಟಿದ್ದರು. ಮಾಹಿತಿ ತಿಳಿದು ಸ್ಥಳಕ್ಕೆ ಆಗಮಿಸಿದ ಪೊಲೀಸರು ಸಿಸಿಟಿವಿ ದೃಶ್ಯ, ಮೊಬೈಲ್ ಮೂಲಕ ದಾಖಲಾಗಿರುವ ದೃಶ್ಯ, ಕಬಡ್ಡಿ ನೇರ ಪ್ರಸಾರದ ದೃಶ್ಯಗಳನ್ನು ಕಲೆ ಹಾಕಿದ್ದರು. ಬಳಿಕ ತನಿಖೆ ತೀವ್ರಗೊಂಡಿತ್ತು.

ಶಬರಿಮಲೆ ಚಿನ್ನದ ಹಗರಣ: ಟಿಡಿಬಿ ಮಾಜಿ ಅಧಿಕಾರಿ ಬಂಧನ

ನವದೆಹಲಿ: ಶಬರಿಮಲೆ ಚಿನ್ನ ನಷ್ಟ ಪ್ರಕರಣಗಳ ತನಿಖೆ ನಡೆಸುತ್ತಿರುವ ಎಸ್‌ಐಟಿ ಬುಧವಾರ ಟಿಡಿಬಿಯ ಮಾಜಿ ಆಡಳಿತ ಅಧಿಕಾರಿ ಎಸ್. ಶ್ರೀಕುಮಾರ್ ಅವರನ್ನು ಬಂಧಿಸಲಾಗಿದೆ.



ಅವರ ವಿರುದ್ಧದ ಆರೋಪಗಳು ಸಾಬೀತಾಗಿವೆ ಎಂದು ಹೇಳಿದ್ದ ಕೇರಳ ಹೈಕೋರ್ಟ್, ಶ್ರೀಕುಮಾರ್ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಿದ ಕೇವಲ ಎರಡು ವಾರಗಳ ನಂತರ ಅವರ ಬಂಧನವಾಗಿದೆ. ಶ್ರೀಕುಮಾರ್ ಜೊತೆಗೆ, ತಿರುವಾಂಕೂರು ದೇವಸ್ವಂ ಮಂಡಳಿಯ (ಟಿಡಿಬಿ) ಮಾಜಿ ಕಾರ್ಯದರ್ಶಿ ಎಸ್. ಜಯಶ್ರೀ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಸಹ ತಿರಸ್ಕರಿಸಲಾಗಿದೆ.

ಶ್ರೀಕುಮಾರ್ ಮತ್ತು ಜಯಶ್ರೀ ಇಬ್ಬರೂ ಚಿನ್ನದ ಹೊದಿಕೆಯ ಬಗ್ಗೆ ಮಾಹಿತಿಯುಳ್ಳವರಾಗಿದ್ದರು. ಆ ಫಲಕಗಳನ್ನು ತಾಮ್ರದಿಂದ ಮಾಡಲ್ಪಟ್ಟಿದೆ ಎಂದು ಉಲ್ಲೇಖಿಸುವ ದಾಖಲೆಗಳಿಗೆ ಸಹಿ ಹಾಕಿದ್ದರು ಎಂದು ನ್ಯಾಯಾಲಯ ಹೇಳಿತ್ತು. ನ್ಯಾಯಾಲಯ ನೇಮಿಸಿದ ವಿಶೇಷ ತನಿಖಾ ತಂಡ ದ್ವಾರಪಾಲಕ (ರಕ್ಷಕ ದೇವರು) ವಿಗ್ರಹಗಳ ಚಿನ್ನದ ಹೊದಿಕೆಯ ಫಲಕಗಳು ಮತ್ತು ಶ್ರೀಕೋವಿಲ್ (ಗರ್ಭಗುಡಿ) ಬಾಗಿಲು ಚೌಕಟ್ಟುಗಳಿಂದ ಚಿನ್ನ ಕಳೆದುಹೋದ ಪ್ರಕರಣಗಳ ತನಿಖೆ ನಡೆಸುತ್ತಿದೆ.

ಮೈಸೂರು ಮಿತ್ರ ಗುರುವಾರ 18 ಡಿಸೆಂಬರ್ 2025

ದೇಶದ ಅಭ್ಯುದಯಕ್ಕೆ ಎಬಿವಿಪಿ ಶ್ರಮಿಸುತ್ತಿದೆ

ಮಡಿಕೇರಿ, ಡಿ.17–ಪಾಶ್ಚಿಮಾತ್ಯ ಶಕ್ತಿಗಳ ಒತ್ತಡಗಳನ್ನು ಮೀರಿ ಭಾರತದ ಅಭ್ಯುದಯಕ್ಕೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಶ್ರಮಿಸುತ್ತಿದೆ ಎಂದು ಪರಿಷತ್‌ನ ರಾಷ್ಟ್ರೀಯ ಸಹ ಸಂಘಟನಾ ಕಾರ್ಯದರ್ಶಿ ಎಸ್.ಬಾಲಕೃಷ್ಣ ತಿಳಿಸಿದ್ದಾರೆ.

ನಗರದ ಕೊಡಗು ಗೌಡ ಸಮಾಜದಲ್ಲಿ ಆರಂಭಗೊಂಡ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ದಕ್ಷಿಣ ಪ್ರಾಂತದ 45ನೇ ಸಮ್ಮೇಳನದಲ್ಲಿ ಮಾತನಾಡಿದ ಅವರು, 1997ರ ಬಳಿಕ ಇಂದಿನ ಯುವ ಸಮೂಹದಲ್ಲಿ ರಾಷ್ಟ್ರ ವಿರೋಧಿ ಚಿಂತನೆ ಗಳನ್ನು ಮೂಡಿಸಿ ಸಮಾಜವನ್ನು ಒಡೆದು ರಾಷ್ಟ್ರದಲ್ಲಿ ಅರಾಜಕತೆ ಸೃಷ್ಟಿಸುವ ನಿಟ್ಟಿನಲ್ಲಿ ಪಾಶ್ಚಿಮಾತ್ಯ ಶಕ್ತಿಗಳು ಪ್ರಯತ್ನ ನಡೆಸುತ್ತಿವೆ. ಇದನ್ನು ಮೀರಿ ಇಂದಿನ ಯುವ ಸಮೂಹ ಸನಾತನ ಸಂಸ್ಕೃತಿಯ ಮಹತ್ವವನ್ನು ಅರಿತು, ಅದರ ತಳಹದಿಯ ಮೇಲೆ ರಾಷ್ಟ್ರದ ಪುನರುತ್ಥಾನಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡುತ್ತಿದೆ. ಇದಕ್ಕೆ ಬೆನ್ನೆಲುಬಾಗಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕಾರ್ಯನಿರ್ವಹಿಸುತ್ತಿರುವುದಾಗಿ ಹೆಮ್ಮೆಯಿಂದ ನುಡಿದರು. ಕೊಡಗಿನಲ್ಲಿ ಇದೇ ಮೊದಲ ಬಾರಿಗೆ ಎಬಿವಿಪಿ ದಕ್ಷಿಣ ಪ್ರಾಂತದ ಸಮ್ಮೇಳನ ಆಯೋಜಿಸುತ್ತಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.



ಎಬಿವಿಪಿ ದಕ್ಷಿಣ ಪ್ರಾಂತದ 45ನೇ ಸಮ್ಮೇಳನದಲ್ಲಿ ಭಾಗವಹಿಸಿರುವ ವಿದ್ಯಾರ್ಥಿ ಪ್ರತಿನಿಧಿಗಳು

1835ರಲ್ಲಿ ಬ್ರಿಟಿಷ್ ಪ್ರಜೆ ಮೆಕಾಲೆ, ಈ ರಾಷ್ಟ್ರದಲ್ಲಿ ತಂದ ಶಿಕ್ಷಣ ಪದ್ಧತಿಯ ಮೂಲಕ ಇಲ್ಲಿನ ಸಂಸ್ಕೃತಿ, ಸಂಪ್ರದಾಯಗಳನ್ನು ನಾಶ ಮಾಡುವ ಚಿಂತನೆಯನ್ನು ಹೊಂದಿದ್ದ. ಆತನ ಚಿಂತನೆಗೆ 2035ಕ್ಕೆ 200 ವರ್ಷಗಳಾಗುತ್ತದೆ. ಇದೇ ಹಂತದಲ್ಲಿ ರಾಷ್ಟ್ರದ ಶಿಕ್ಷಣ ವ್ಯವಸ್ಥೆಯನ್ನು ಭಾರತೀಕರಣಗೊಳಿಸುವ ಪ್ರಯತ್ನವಾಗಿ 'ರಾಷ್ಟ್ರೀಯ ಶಿಕ್ಷಣ ನೀತಿ' ಜಾರಿಗೆ ಬಂದಿದ್ದು, ಇದಕ್ಕೆ ಪೂರಕವಾದ ನಿಲುವನ್ನು ಎಬಿವಿಪಿ ಹೊಂದಿರುವುದಾಗಿ ಸ್ಪಷ್ಟಪಡಿಸಿದರು.

ಸಮಾವೇಶವನ್ನು ಉದ್ಘಾಟಿಸಿದ ರಾಷ್ಟ್ರೀಯ ಅಥ್ಲೀಟ್ ತೀತಮಾಡ ಅರ್ಜುನ್ ದೇವಯ್ಯ ಮಾತನಾಡಿ, ಯಾವುದೇ ವಿಚಾರಗಳು ಮತ್ತು ತತ್ವಗಳಿಂದ ಜನರ ಬದಲಾವಣೆ ಸಾಧ್ಯವಾಗಲಾರದು. ಬದಲಾಗಿ ಮಹಾನ್ ವ್ಯಕ್ತಿಗಳ ತತ್ವಾದರ್ಶಗಳ ಅಧ್ಯಯನ, ಪಾಲನೆ, ಅಭ್ಯಾಸಗಳಿಂದ ಮಾತ್ರ ಜೀವನ ಶೈಲಿ ಬದಲಾವಣೆ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ತಮ್ಮ ಚಿಂತನೆಯನ್ನು ಹರಿಸಬೇಕು. ವಿದ್ಯಾರ್ಥಿಗಳು ದೇಶ ಭಕ್ತಿಯನ್ನು ಮೈಗೂಡಿಸಿಕೊಂಡು ಸಮಾಜದ ಅಭಿವೃದ್ಧಿಗೆ ಕೈ ಜೋಡಿಸಬೇಕು ಎಂದು ಹೇಳಿದರು. ಎಬಿವಿಪಿ ದಕ್ಷಿಣ ಪ್ರಾಂತ ಅಧ್ಯಕ್ಷ ಡಾ.ರವಿ ಮಂಡ್ಯ ಮಾತನಾಡಿದರು.

ಫೀ.ಮಾ.ಕೆ.ಎಂ.ಕಾರ್ಯಪ್ಪ, ಜನರಲ್ ಕೆ.ಎಸ್. ತಿಮ್ಮಯ್ಯ ಅವರ ಕುರಿತು ಹಾಗೂ ಎಬಿವಿಪಿ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡುವ ಪ್ರದರ್ಶನವನ್ನು ಪದ್ಮಶ್ರೀ ರಾಣಿ ಮಾಚಯ್ಯ ಉದ್ಘಾಟಿಸಿದರು. ಪ್ರಾಂತ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಎಂ.ಈಶ್ವರ ಭಟ್ ಪ್ರಾಸ್ತಾವಿಕವಾಗಿ ಮಾತನಾಡಿ ಸಮ್ಮೇಳನಕ್ಕೆ ಶುಭ ಕೋರಿದರು. ವೇದಿಕೆಯಲ್ಲಿ ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿ ರಮೇಶ್ ಹೊಳ್ಳ, ಎಬಿವಿಪಿ ರಾಷ್ಟ್ರೀಯ ಕಾರ್ಯಕಾರಿಣಿ ಸಮಿತಿ ಸದಸ್ಯ ಮಂಬಾರ ಬಾಳು ಗೋಡು, ರಾಜ್ಯ ಕಾರ್ಯದರ್ಶಿ ಗೋಪಿ ರಂಗಸ್ವಾಮಿ ಉಪಸ್ಥಿತರಿದ್ದರು. ವಿವಿಧ ಜಿಲ್ಲೆಗಳಿಂದ ವಿದ್ಯಾರ್ಥಿ ಪ್ರತಿನಿಧಿಗಳು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದಾರೆ.

ಕುಂಬೇರ ಮುದ್ದಪ್ಪ ನಿಧನ



ನಾಪೋಕ್ಲು, ಡಿ.17–ಇಲ್ಲಿಗೆ ಸಮೀಪದ ಅಯ್ಯಂಗೇರಿ ಗ್ರಾಮದ ಕುಂಬೇರ ಮುದ್ದಪ್ಪ (96) ಬುಧವಾರ ನಿಧನರಾದರು.

ಮೃತರು ಪುತ್ರ, ಮೂವರು ಪುತ್ರಿಯರು ಸೇರಿದಂತೆ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಯಶೋಧ



ನಾಪೋಕ್ಲು: ಚೆಯ್ಯಂಡಾಣೆ ಗ್ರಾಮ ಪಂಚಾಯತಿಯ ನರಿಯಂದಡ ಗ್ರಾಮದ ನಿವಾಸಿ ಬೆಳಿಯಂಡ್ರ ದಿವಂಗತ ತಮ್ಮಯ್ಯನವರ ಧರ್ಮಪತ್ನಿ ಯಶೋಧ (ಬೇಬಿ 79) ಗುರುವಾರ ನಿಧನರಾದರು. ಮೃತರು ಪುತ್ರ ಹಾಗೂ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶುಕ್ರವಾರ ಮೃತರ ಸ್ವಗ್ರಾಮದಲ್ಲಿ ನಡೆಯಲಿದೆ.

ಕಮಲಮ್ಮ



ನಾಪೋಕ್ಲು: ಇಲ್ಲಿಗೆ ಸಮೀಪದ ಪಾರಾಣೆ ಗ್ರಾಪಂನ ಕಿರುಂದಾಡು ಗ್ರಾಮದ ನಿವಾಸಿ ನಾಟೋಳನ ದಿ.ಗಣಪತಿ ಅವರ ಧರ್ಮಪತ್ನಿ ಕಮಲಮ್ಮ(89) ಬುಧವಾರ ನಿಧನರಾದರು.

ಮೃತರು ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಬಂಧುಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ನಾಟೋಳನ ಕುಟುಂಬಸ್ಥರ ರುದ್ರಭೂಮಿಯಲ್ಲಿ ನೆರವೇರಿತು.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ

ಹಕ್ಕೆ–ಹುಲುಸೆ ಗ್ರಾಮಸ್ಥರ ಪ್ರತಿಭಟನೆ

ಕುಶಾಲನಗರ, ಡಿ.17–ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಬುಧವಾರ ಹಕ್ಕೆ ಮತ್ತು ಹುಲುಸೆ ಗ್ರಾಮಸ್ಥರು ಹಕ್ಕೆ ಸರ್ಕಲ್‌ನಲ್ಲಿ ಪ್ರತಿಭಟನೆ ನಡೆಸಿದರು.

ಹಕ್ಕೆ ಗ್ರಾಮದ ನಿವಾಸಿ ಸಾಮಾಜಿಕ ಹೋರಾಟಗಾರ ಮೋಹನ್ ನೇತೃತ್ವದಲ್ಲಿ ನೂರಾರು ಗ್ರಾಮಸ್ಥರು ಸೇರಿ ತಾಲೂಕು ಆಡಳಿತ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಬಸ್ ತಂಗುದಾಣ, ಕೆರೆ ಅತಿಕ್ರಮಣ ತೆರವು, ಎಡದಂಡೆ ನಾಲೆಯ ರಸ್ತೆ ಸಮಸ್ಯೆ ಬೀದಿನಾಯಿಗಳ ಆರೈಕೆ ಕೇಂದ್ರದ ಪ್ರಸ್ತಾವನೆ ಕೈಬಿಡುವುದು ಸೇರಿದಂತೆ ಇನ್ನಿತರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು.

ರಸ್ತೆ ಅಭಿವೃದ್ಧಿ ನೆಪದಲ್ಲಿ ಹಳೆಯ ಬಸ್ ನಿಲ್ದಾಣವನ್ನು ತೆರವು ಮಾಡಲಾಗಿತ್ತು. ರಸ್ತೆ ನಿರ್ಮಾಣ ಮಾಡಿ ಅನೇಕ ವರ್ಷಗಳೇ ಕಳೆದರೂ ಇದುವರೆಗೂ ಬಸ್ ತಂಗುದಾಣ ನಿರ್ಮಿಸಿಲ್ಲ. ಹಕ್ಕೆ ಮತ್ತು ಹುಲುಸೆ ಗ್ರಾಮಗಳು ಕಾಡಂಚಿನ ಗ್ರಾಮಗಳಾಗಿದ್ದು, ಕಾಡು ಪ್ರಾಣಿಗಳ ಹಾವಳಿಯಿಂದ ಈ ಭಾಗದ ರೈತರು ಹಾಗೂ ಗ್ರಾಮಸ್ಥರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲೂ ಹಕ್ಕೆ ಗ್ರಾಮದಲ್ಲಿ ಬೀದಿನಾಯಿಗಳ ಆರೈಕೆ ಕೇಂದ್ರ ಸ್ಥಾಪನೆಗೆ ಪ್ರಸ್ತಾವನೆ ಸಲ್ಲಿಸಿರುವ ಕ್ರಮ ಸರಿಯಲ್ಲ, ಈ ಕೂಡಲೇ ಉದ್ದೇಶಿತ ಆರೈಕೆ ಕೇಂದ್ರ ಪ್ರಸ್ತಾಪವನ್ನು ಹಿಂಪಡೆಯಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.



ತಹಸೀಲ್ದಾರ್ ಕಿರಣ್ ಜಿಗೌರಯ್ಯ ಪ್ರತಿಭಟನಾನಿರತ ಹಕ್ಕೆ–ಹುಲುಸೆ ಗ್ರಾಮಸ್ಥರೊಂದಿಗೆ ಮಾತುಕತೆ ನಡೆಸಿದರು

ಸ್ಥಳಕ್ಕೆ ಆಗಮಿಸಿದ ತಹಸೀಲ್ದಾರ್ ಕಿರಣ್ ಜಿ. ಗೌರಯ್ಯ ಗ್ರಾಮದ ಸಾಮಾಜಿಕ ಹೋರಾಟಗಾರ ಮೋಹನ್, ಜಿ.ಪಂ ಮಾಜಿ ಅಧ್ಯಕ್ಷ ಎಚ್.ಎಸ್. ಅಶೋಕ್, ಕಾಂಗ್ರೆಸ್ ಮುಖಂಡ ಎಚ್.ಕೆ.ನಟೇಶ್ ಗೌಡ, ಗ್ರಾಪಂ ಉಪಾಧ್ಯಕ್ಷೆ ಲತಾ, ಸದಸ್ಯರಾದ ಮಂಜುನಾಥ್ ಹಾಗೂ ಶಿವನಂಜಪ್ಪ ಅವರೊಂದಿಗೆ ಮಾತುಕತೆ ನಡೆಸಿದರು. ಗ್ರಾಮಸ್ಥರ ವಿರೋಧದ ಹಿನ್ನೆಲೆ ಬೀದಿನಾಯಿಗಳ ಆರೈಕೆ ಕೇಂದ್ರ ಸ್ಥಾಪನೆ ನಿರ್ಧಾರವನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ಘೋಷಣೆ ಮಾಡಿದರು.

ಸ್ಥಳದಲ್ಲಿದ್ದ ನೀರಾವರಿ ಇಲಾಖೆಯ ಸಹಾಯಕ ಎಂಜಿನಿಯರ್ ಕಿರಣ್ ಕುಮಾರ್ ಹಾಗೂ ಸೌಮ್ಯ ಅವರು ಮುಚ್ಚಿರುವ ಗುಂಡಿ ತೆಗೆದು ಪೈಪ್ ಲೈನ್ ಅಳವಡಿಸುವ ಮೂಲಕ ಕೊಳಚೆ ನೀರು ಹರಿದು ಹೋಗುವಂತೆ ಮಾಡಿಕೊಡುವುದಾಗಿ ಭರವಸೆ ನೀಡಿದರು. ಲೋಕೋಪಯೋಗಿ ಇಂಜಿನಿಯರ್ ಕೂಡ ಹಕ್ಕೆ ಗ್ರಾಮದಲ್ಲಿ ಬಸ್ ತಂಗುದಾಣ ನಿರ್ಮಿಸಿಕೊಡುವುದಾಗಿ ಹೇಳಿ ಜೆಸಿಬಿ ಮೂಲಕ ಕಾಮಗಾರಿಗೆ ಚಾಲನೆ ನೀಡಿದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಪ್ರತಿಭಟನೆಯನ್ನು ಹಿಂಪಡೆದರು.

ತಾ.ಪಂ. ಸಹಾಯಕ ನಿರ್ದೇಶಕ ಶ್ರೀನಿವಾಸ್ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವಿಕುಮಾರ್, ಕಂದಾಯ ಅಧಿಕಾರಿ ಸಂತೋಷ್, ಎಚ್.ಶಿವರಾಮೇಗೌಡ, ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಬಿಎ ದಿನೇಶ್ ಶೆಟ್ಟಿ ನೇತೃತ್ವದಲ್ಲಿ ಜಿಲ್ಲಾ ಉಪಾಧ್ಯಕ್ಷ ರಾಜಶೇಖರ್ ಗೌಡ. ತಾಲೂಕು ಅಧ್ಯಕ್ಷ ಶಿವ, ಉಪಾಧ್ಯಕ್ಷ ಜಯರಾಜ್. ಸಂಘಟನಾ ಕಾರ್ಯದರ್ಶಿ ರಂಗಸ್ವಾಮಿ. ಹಾಗೂ ಎಚ್ ಶಿವರಾಮೇಗೌಡ, ವೇದಿಕೆ ಪದಾಧಿಕಾರಿಗಳು ಹಾಗೂ ದಲಿತ ಮುಖಂಡ ನಿರ್ವಾಣಪ್ಪ, ಮಾಜಿ ಗ್ರಾಪಂ ಸದಸ್ಯ ವೆಂಕಟೇಶ್, ಗ್ರಾಮಸ್ಥರಾದ ಸಂಪತ್ತು, ಲೋಕೇಶ್, ಕುಮಾರ, ತಮ್ಮಯ್ಯ, ದೇವು, ಚಂದ್ರ, ಪರಶಿವ, ಕೃಷ್ಣಪ್ಪ, ಮಂಜುನಾಥ ಸ್ವಾಮಿ, ರಾಜಪ್ಪ, ವಾರಿಜಾ, ಹೃತಿಕ್, ಈಶ, ಪಾಪಣ್ಣ ನೂರಾರು ಗ್ರಾಮಸ್ಥರು ಪಾಲ್ಗೊಂಡಿದ್ದರು.

ಬದಲಾದ ಆಹಾರ ಕ್ರಮದಿಂದ ಕಾಯಿಲೆ ಉಲ್ಬಣ

ವಿರಾಜಪೇಟೆ: ಮಾದಕ ವಸ್ತುಗಳ ಉಪಯೋಗದಿಂದ ಮಾರಕ ಕಾಯಿಲೆಗಳಿಗೆ ತುತ್ತಾಗುತ್ತಿದ್ದು, ಇತ್ತೀಚಿನ ದಿನಗಳಲ್ಲಿ ಬದಲಾದ ಆಹಾರ ಪದ್ಧತಿಯಿಂದಲೂ ಸಹ ಕಾಯಿಲೆಗಳಿಗೆ ತುತ್ತಾಗಬಹುದು ಎಂದು ಆರ್‌ಐಹೆಚ್‌ಪಿ ಆಸ್ಪತ್ರೆ ಅಮ್ಮತ್ತಿ ಮುಖ್ಯ ಶಸ್ತ್ರ ಚಿಕಿತ್ಸಕ ಡಾ.ಚಂದ್ರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಶಿಬಿರ ಉದ್ಘಾಟಿಸಿ ಮಾತನಾಡಿದ ಡಾ.ಚಂದ್ರು, ದಿನನಿತ್ಯ ಜೀವನ ಕ್ರಮದಿಂದ ವಿವಿಧ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ, ಪ್ರಸ್ತುತ ರಾಸಾಯಿನಿಕ ಗೊಬ್ಬರಗಳ ಬಳಕೆ ಮತ್ತು ಶ್ರೀಘ್ರವಾಗಿ ಲಭಿಸುವ ತಿಂಡಿ ತಿನಿಸುಗಳ ಸೇವನೆ ಹಾಗೂ ಆಹಾರ ಕ್ರಮದ ವ್ಯತ್ಯಾಸದಿಂದಾಗಿ ವಿವಿಧ ಕಾಯಿಲೆಗಳಿಗೆ ತುತ್ತಾಗಿ ಜೀವನ ಕೊನೆಗಾಣಿಸುವ ಹಂತಕ್ಕೆ ಬಂದು ನಿಂತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಸಂಚಾಲಕ ಟಿ.ಜೆ.ಕಿಶೋರ್ ಕುಮಾರ್ ಶೆಟ್ಟಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕೆದಮುಳ್ಳೂರು ಗ್ರಾಪಂ ಉಪಾಧ್ಯಕ್ಷ ಎಂ.ಎಂ.ಪರಮೇಶ್ವರ್ ಸೆಹೇಲಿ ಆರೋಗ್ಯ ಕಿಟ್ ವಿತರಿಸಿದರು.



ಶಿಬಿರದಲ್ಲಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುತ್ತಿರುವ ಗ್ರಾಮೀಣ ಮಹಿಳೆಯರು

ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ರೆಜಿತ್ ಕುಮಾರ್ ಗುಹ್ಯ ಮಾತನಾಡಿದರು.

ಕೆದಮುಳ್ಳೂರು ಗ್ರಾಪಂ ವ್ಯಾಪ್ತಿಯ ವಿವಿಧ ಭಾಗಗಳಿಂದ ಆಗಮಿಸಿದ ಗ್ರಾಮಸ್ಥರು ಶಿಬಿರದ ಸದುಪಯೋಗ ಪಡೆದರು. ಗ್ರಾಪಂ ವ್ಯಾಪ್ತಿಯ, ಬಾರಿಕಾಡ್ ಪೈಸಾರಿ, ಕೆ.ಬೋಯಿಕೇರಿ ಆಶ್ರಮ ಶಾಲೆಯ ವಿದ್ಯಾರ್ಥಿನಿಯರಿಗೆ ಉಚಿತವಾಗಿ ಸೆಹೇಲಿ ಆರೋಗ್ಯ ಕಿಟ್ ವಿತರಣೆ ಮಾಡಲಾಯಿತು.


ಆರ್‌ಐಹೆಚ್‌ಪಿ ಆಸ್ಪತ್ರೆಯ ನೇತ್ರ ಚಿಕಿತ್ಸಕ ಡಾ. ವಿಜಯ ಸಿಂಹ, ಕ್ಯಾಥರೀನ ಚಿತ್ತದನಿ ಆಶ್ರಮ ಶಾಲೆಯ ಸಿಸ್ಟರ್ ಟ್ರೀಜಾ, ಕೆದಮುಳ್ಳೂರು ಗ್ರಾಪಂ ಸದಸ್ಯ ಮಾಳೇಟಿರ ಸಾಬ ಮುತ್ತಪ್ಪ, ಪತ್ರಕರ್ತರ ಸಂಘದ ಸದಸ್ಯ ತೇಜಸ್ ಪಾಪಯ್ಯ, ಅಂಗನವಾಡಿ ಕಾರ್ಯಕರ್ತೆ ಕೆ.ಎಂ.ಉಷಾ ಕುಮಾರಿ, ಡಾ. ಶುಭ, ಡಯಲೀಸ್ ತಜ್ಞೆ ಸಂಯಮ ಗೌಡ, ಸಿಬ್ಬಂದಿ, ಆಶ್ರಮ ಶಾಲೆಯ ಸಿಸ್ಟರ್ ಮೇರಿ ಮಾರ್ಗರೇಟ್, ಫಾತಿಮ ಮಾತೆ ದೇವಾಲಯದ ವಿನ್ಸೆಂಟ್ ಹಾಗೂ ಗ್ರಾಮಸ್ಥರು ಶಿಬಿರದಲ್ಲಿ ಹಾಜರಿದ್ದರು.

ಅಪರಿಚಿತ ವಾಹನ ಡಿಕ್ಕಿ: ಬೈಕ್ ಸವಾರ ಸಾವು

ಕುಶಾಲನಗರ, ಡಿ.17–ಸಮೀಪದ ಆನೆಕಾಡು ರಾಷ್ಟ್ರೀಯ ಹೆದ್ದಾರಿಯಲ್ಲಿ ಅಪರಿಚಿತ ವಾಹನ ಡಿಕ್ಕಿಯಾಗಿ ಬೈಕ್ ಸವಾರ ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ಬುಧವಾರ ರಾತ್ರಿ ನಡೆದಿದೆ.

ಮಾದಾಪುರ ಬಳಿಯ ಜಂಬೂರು ಗ್ರಾಮದ ನಿವಾಸಿ ರವಿ ಹಾಗೂ ಗಂಗೆ ದಂಪತಿಗಳ ಪುತ್ರ ಮಹೇಶ್(31) ಎಂಬಾತನೆ ಮೃತ ವ್ಯಕ್ತಿಯಾಗಿದ್ದಾನೆ. ಕುಶಾಲನಗರ ಕಡೆಯಿಂದ ದ್ವಿಚಕ್ರ ವಾಹನದಲ್ಲಿ ರಾತ್ರಿ 8 ಸಮಯದಲ್ಲಿ ಆನೆಕಾಡು ಹೆದ್ದಾರಿಯಲ್ಲಿ ಸುಂಟಿಕೊಪ್ಪದ ಕಡೆ ತೆರಳುತ್ತಿದ್ದ ಸಂದರ್ಭದಲ್ಲಿ ಯಾವುದೋ ವಾಹನ ಡಿಕ್ಕಿ ಹೊಡೆದು ಹೋಗಿದೆ. ಸ್ಥಳಕ್ಕೆ ಸಂಚಾರಿ ಪೊಲೀಸರು ಮೊಕದ್ದಮೆ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸೋಮವಾರಪೇಟೆ ಸುತ್ತಮುತ್ತ ಇಂದು ವಿದ್ಯುತ್ ವ್ಯತ್ಯಯ



ಮಡಿಕೇರಿ, ಡಿ.17–ಸೋಮವಾರಪೇಟೆ ವಿದ್ಯುತ್ ವಿತರಣಾ ಉಪ ಕೇಂದ್ರದಲ್ಲಿ ಡಿ.18ರ ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಫೀಡರ್ ನಿರ್ವಹಣೆ ಕಾಮಗಾರಿ ನಡೆಸುವುದರಿಂದ ಬಿಳಿಗೆಕೊಪ್ಪ, ಮಟ್ನಳ್ಳಿ, ಕಿಬ್ಬೆಟ್ಟ, ಅಯ್ಯಪ್ಪ ಕಾಲೋನಿ, ದೊಡ್ಡಹನಕೋಡು, ಗೆಜ್ಜೆಹನಕೋಡು, ಕಾಡು ಮನೆ, ಚಿಕ್ಕತೋಳೂರು, ಕಾಗಡೀಕಟ್ಟೆ, ದೊಡ್ಡಮಳ್ತೆ, ಒಳಗುಂದ, ಸುಳಿಮಳ್ತೆ, ಹೊನ್ನಾವಳ್ಳಿ, ಕೂಗೆಕೋಡಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಚಾವಿಸನಿನಿ ಕಾರ್ಯ ಮತ್ತು ಪಾಲನೆ ವಿಭಾಗ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ನಗರದಲ್ಲಿ ಇಂದು ಜಿಲ್ಲಾ ಮಟ್ಟದ ಸಿರಿಧಾನ್ಯ, ಖಾದ್ಯಗಳ ಪಾಕ ಸ್ಪರ್ಧೆ

ಚಾಮರಾಜನಗರ, ಡಿ.17–ಅಂತಾರಾಷ್ಟ್ರೀಯ ವಾಣಿಜ್ಯ ಮೇಳ ಅಂಗವಾಗಿ ಜಿಲ್ಲಾ ಮಟ್ಟದಲ್ಲಿ ಸಿರಿಧಾನ್ಯ ಮತ್ತು ಮರೆತು ಹೋದ ಖಾದ್ಯಗಳ ಪಾಕ ಸ್ಪರ್ಧೆಯನ್ನು ಡಿ.18ರ ಮಧ್ಯಾಹ್ನ 12 ಗಂಟೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಹಳೇ ಕೆ.ಡಿ.ಪಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಪ್ರತಿ ಸ್ಪರ್ಧಿಗೆ ಒಂದೇ ತಿನಿಸು (ಅಡುಗೆ) ಸಿಹಿ, ಖಾರ ಅಥವಾ ಮರೆತು ಹೋದ ಖಾದ್ಯವನ್ನು ಮಾಡಲು ಅವಕಾಶವಿರುತ್ತದೆ. ಸಿರಿ ಧಾನ್ಯ ಸಸ್ಯಹಾರಿ ತಿನಿಸುಗಳಿಗೆ ಮಾತ್ರ ಅವಕಾಶವಿದ್ದು, ಮನೆಯಲ್ಲಿಯೇ ತಯಾರಿಸಿದ ಸಿರಿಧಾನ್ಯ ತಿನಿಸು ಪ್ರದರ್ಶಿಸಬಹುದು. ತಯಾರಿಸಿದ ತಿನಿಸುಗಳ ಪ್ರದರ್ಶನ(ಡಿಸ್‌ಪ್ಲೆ) ತಯಾರಿಕೆಗೆ ಬಳಸಿದ ಪದಾರ್ಥಗಳು (ಇನ್‌ಗ್ರೀಡಿಯಂಗ್ಸ್), ತೋರಿಕೆ (ಅಪಿರಿಯನ್ಸ್), ರುಚಿ, ಸುವಾಸನೆಗಳ ಆಧಾರದಲ್ಲಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು. ಪ್ರಥಮ ಬಹುಮಾನ 5 ಸಾವಿರ ರೂ., ದ್ವಿತೀಯ ಬಹುಮಾನ 3 ಸಾವಿರ ರೂ., ತೃತೀಯ ಬಹು ಮಾನ 2 ಸಾವಿರ ರೂ. ನೀಡಲಾಗುವುದು. ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಕಡ್ಡಾಯವಾಗಿ ನಿಗದಿತ ಸಮಯಕ್ಕೆ ಅರ್ಧಗಂಟೆ ಮುಂಚಿತವಾಗಿ ಸ್ಪರ್ಧೆ ಸ್ಥಳದಲ್ಲಿ ಹಾಜರಿರಬೇಕು.

ಹೆಚ್ಚಿನ ಮಾಹಿತಿಗಾಗಿ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಂಟಿ ಕೃಷಿ ನಿರ್ದೇಶಕರ ಕಚೇರಿಯ ಸಹಾಯಕ ಕೃಷಿ ನಿರ್ದೇಶಕರು (ಕೇಂದ್ರಸ್ಥಾನ) ಹಾಗೂ ಆತ್ಮ ಯೋಜನೆಯ ಉಪ ಯೋಜನಾ ನಿರ್ದೇಶಕರು (ಮೊ.ಸಂ 9535565174, 9739987459) ಸಂಪರ್ಕಿಸುವಂತೆ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಕ್ಕಣೆ ಕಣಕ್ಕೆ ಆಕಸ್ಮಿಕ ಬೆಂಕಿ: 30 ಕ್ವಿಂಟಾಲ್ ರಾಗಿ ಭಸ್ಮ




ಹನೂರು, ಡಿ.17–ತಾಲೂಕಿನ ಶೆಟ್ಟಳ್ಳಿ ಗ್ರಾಮದಲ್ಲಿ ಒಕ್ಕಣೆ ಕಣದಲ್ಲಿ ಹಾಕಲಾಗಿದ್ದ ರಾಗಿ ಫಸಲಿಗೆ ಬೆಂಕಿ ಬಿದ್ದು ಸುಮಾರು 30 ಕ್ವಿಂಟಾಲ್ ರಾಗಿ ಬೆಂಕಿಗೆ ಆಹುತಿಯಾಗಿರುವ ಘಟನೆ ನಡೆದಿದೆ.

ತಾಲೂಕಿನ ಶೆಟ್ಟಳ್ಳಿ ಗ್ರಾಮದ ಮಂಜುನಾಥ್ ಮತ್ತು ಗುರುಸಿದ್ದ ಎಂಬಾತರಿಗೆ ಸೇರಿದ್ದ ಸುಮಾರು 5 ಎಕರೆಯಲ್ಲಿ ರಾಗಿಯನ್ನು ಬೆಳೆಯಲಾಗಿತ್ತು. ಹಲವು ದಿನಗಳಿಂದ ಕಟಾವು ಮಾಡಿ ಒಕ್ಕಣೆ ಮಾಡಿ ರಾಗಿಯನ್ನು ಸಂಗ್ರಹಣೆ ಮಾಡಲಾಗಿತ್ತು ಆದರೆ ಬುಧವಾರ ಸಂಜೆ ದಿಢೀರ್ ಬೆಂಕಿ ತಗುಲಿ ಸಂಪೂರ್ಣ ನಾಶವಾಗಿದೆ.

ಸುಮಾರು ಐದು ಎಕರೆಯಲ್ಲಿ ಸುಮಾರು 30 ಕ್ವಿಂಟಾಲ್ ರಾಗಿ ಬೆಳೆಯನ್ನು ಸಾಲ ಮಾಡಿ ಕಷ್ಟಪಟ್ಟು ಬೆಳೆದಿದ್ದೆವು. ಆದರೆ ಯಾರೋ ಕಿಡಿಗೇಡಿಗಳು ಉದ್ದೇಶಪೂರ್ವಕವಾಗಿ ಬೆಂಕಿಯನ್ನು ಹಾಕಿದ್ದಾರೆ ಎಂದು ಆರೋಪಿಸಿ ಮಂಜುನಾಥ್ ಮತ್ತು ಗುರುಸಿದ್ದ ಪೊಲೀಸರಿಗೆ ದೂರು ನೀಡಿದ್ದಾರೆ. ಪೊಲೀಸರು ದೂರನ್ನು ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಚಿಕ್ಕಹೊನ್ನಯ್ಯ ನಿಧನ



ಯಳಂದೂರು, ಡಿ.17– ತಾಲೂಕಿನ ಕಿನಕಹಳ್ಳಿ ನಿವಾಸಿ ಚಿಕ್ಕಹೊನ್ನಯ್ಯ (78) ಸೋಮವಾರ ರಾತ್ರಿ 11.30 ರಲ್ಲಿ ನಿಧನರಾದರು.

ಮೃತರಿಗೆ ಪತ್ನಿ, ಇಬ್ಬರು ಪುತ್ರರು, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಆಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಸ್ವಗ್ರಾಮದ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಸ ವಿಲೇವಾರಿಗೆ ಆಗ್ರಹ

ಬೇಗೂರು: ಗ್ರಾಮದ ವಿನಾಯಕ ಬಡಾವಣೆಯಲ್ಲಿ ಕಸದ ರಾಶಿ ಹಾಗೂ ಕುಡುಕರ ಹಾವಳಿ ಮಿತಿ ಮೀರಿದೆ ಎಂದು ಯುವ ಕಾಂಗ್ರೆಸ್ ಸಮಿತಿ ಮಾಜಿ ಅಧ್ಯಕ್ಷ ಕಮರಹಳ್ಳಿ ಕುಮಾರ್ ಹೇಳಿದ್ದಾರೆ.

ಬೇಗೂರು ಗ್ರಾಪಂ ಕಸದ ರಾಶಿ ವಿನಾಯಕ ಬಡಾವಣೆಯಲ್ಲಿ ಬಿದ್ದು ಒದ್ದಾಡುತ್ತಿದೆ ಆದರೂ ಬೇಗೂರು ಗ್ರಾಪಂ ಸ್ವಚ್ಛತೆಗೆ ಗಮನಹರಿಸುತ್ತಿಲ್ಲ ಎಂದು ಆರೋಪಿಸಿದ್ದಾರೆ. ಕೂಡಲೇ ಕಸದ ವಿಲೇವಾರಿ ಮಾಡಬೇಕು ಹಾಗೂ ಬಡಾವಣೆಯಲ್ಲಿ ಕುಡುಕರ ಹಾವಳಿ ತಪ್ಪಿಸಬೇಕು ಎಂದು ಗ್ರಾಪಂ ಆಡಳಿತವನ್ನು ಆಗ್ರಹಿಸಿದ್ದಾರೆ.

ಉತ್ತಮ ಬದುಕಿಗೆ ವಚನಗಳ ಅಧ್ಯಯನ ಅಗತ್ಯ

ಚಾಮರಾಜನಗರ, ಡಿ.17–ಉತ್ತಮ ಬದುಕು ರೂಪಿಸಿಕೊಳ್ಳಲು ವಚನಗಳ ಅಧ್ಯಯನ ಅಗತ್ಯವಿದ್ದು, ಬಸವತತ್ವ ಇಂದು ಎಲ್ಲರಿಗೂ ಅಗತ್ಯವಾಗಿದೆ ಎಂದು ತುಮಕೂರು ಸಿದ್ದಗಂಗಾ ಮಠದ ಮಠಾಧೀಶ ಸಿದ್ದಲಿಂಗ ಸ್ವಾಮೀಜಿ ಹೇಳಿದ್ದಾರೆ.

ತಾಲೂಕಿನ ಮರಿಯಾಲ ಗ್ರಾಮದ ಮುರುಘರಾಜೇಂದ್ರ ಶ್ರೀ ಮಠದ ಸಂಸ್ಥಾಪಕ ಮುರುಘ ರಾಜೇಂದ್ರ ಸ್ವಾಮೀಜಿ 109ನೇ ಸಂಸ್ಮರಣೋತ್ಸವ, ಬಸವೋತ್ಸವ, ಪುತ್ಥಳಿಗಳ ಅನಾವರಣ, ಇಮ್ಮಡಿ ಮುರುಘ ರಾಜೇಂದ್ರ ಶ್ರೀಗಳ ಗುರು ಪಟ್ಟಾಧಿಕಾರ ರಜತ ಮಹೋತ್ಸವದ ಅಂಗವಾಗಿ ನಡೆದ ಧಾರ್ಮಿಕ ಸಮಾರಂಭದಲ್ಲಿ ಮಾತನಾಡಿದರು.

ದೇವನೂರು ಮಠದ ಗುರುಮಲ್ಲೇಶ್ವರರು, ಮುರುಘ ರಾಜೇಂದ್ರಶ್ರೀಗಳು ಜನ ಸಾಮಾನ್ಯರಲ್ಲಿ ಭಕ್ತಿಯ ಬೀಜವನ್ನು ಬಿತ್ತುವ ಕೆಲಸ ಮಾಡಿದರೆ, ಅದನ್ನು ಪಸರಿಸುವ ಕಾಯಕವನ್ನು ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ ಮಾಡಿಕೊಂಡು ಬಂದಿದ್ದಾರೆ. ಮಠದ ಪಟ್ಟಾಧಿಕಾರ ವಹಿಸಿಕೊಂಡ ಮಠವನ್ನು ಅಭಿವೃದ್ದಿಯತ್ತ ಕೊಂಡೊಯ್ದು ಭಕ್ತರ ಸೇವೆಗೆ ಸಮರ್ಪಿಸಿದರು ಎಂದರು.



ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿಗಳ ಪಟ್ಟಾಧಿಕಾರ ರಜತ ಮಹೋತ್ಸವದ ಅಂಗವಾಗಿ ಭಕ್ತಾದಿಗಳು ಬೆಳ್ಳಿ ಕಿರೀಟ ಅರ್ಪಿಸಿದರು.

'ಮಹಾಂತರು ಬೆಳಗಿದ ಮುರುಘ ಪ್ರಭೆ' ಅಭಿನಂದನಾ ಗ್ರಂಥವನ್ನು ಬಿಡುಗಡೆ ಮಾಡಿದ ಇಳಕಲ್ ಚಿತ್ತರಗಿ ವಿಜಯ ಮಹಂತೇಶ್ವರ ಮಠದ ಗುರು ಮಹಂತ ಸ್ವಾಮೀಜಿ ಮಾತನಾಡಿ, ಸುತ್ತೂರು ಮಠದ ಶ್ರೀ ಶಿವರಾತ್ರಿ ಚಿಕ್ಕವೀರ ದೇಶಿಕೇಂದ್ರ ಸ್ವಾಮೀಜಿ, ಸಿದ್ದಲಿಂಗೇಶ್ವರರು, ಮುರುಘ ರಾಜೇಂದ್ರಸ್ವಾಮಿ, ಮಹಾತ್ಮ ಗುರು ಮಲ್ಲೇಶ್ವರರು, ಮರಿಯಾಲ ಮುರುಘ ರಾಜೇಂದ್ರ ಮಠದ ಲಿಂಗೈಕ್ಯ ಮಹಾಂತ ಸ್ವಾಮೀಜಿ ಅವರು ಬಸವತತ್ವ ವನ್ನೇ ಕಾಯಕವಾಗಿಸಿಕೊಂಡಿದ್ದರು ಎಂದರು.

ಬೆಳ್ಳಿ ಕಿರೀಟ ಧಾರಣೆ: ಇದೇ ವೇಳೆ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ ಅವರ 25ನೇ ವರ್ಷದ ಗುರು ಪಟ್ಟಾಧಿಕಾರ ರಜತ ಮಹೋತ್ಸವದ ಅಂಗವಾಗಿ ಭಕ್ತಾದಿಗಳು ಅವರಿಗೆ ಬೆಳ್ಳಿ ಕಿರೀಟ ಅರ್ಪಿಸಿ, ಪುಷ್ಪಾರ್ಚನೆಗೈದರು. ಹಾಸನ ಜಿಲ್ಲೆ ಮುಕುಂದೂರು ವಿರಕ್ತ ಮಠದ ಮಹಾಂತ ಬಸವಲಿಂಗ ಸ್ವಾಮೀಜಿ 'ವಚನ ಸಿಂಚನ' ಕುರಿತು ಉಪನ್ಯಾಸ ನೀಡಿದರು.

ಸಮಾರಂಭದಲ್ಲಿ ಚಾಮರಾಜನಗರ ಸಿದ್ದಮಲ್ಲೇಶ್ವರ ವಿರಕ್ತ ಮಠಾಧೀಶ ಚನ್ನಬಸವ ಸ್ವಾಮೀಜಿ, ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ, ಬೆಟ್ಟದಪುರ ಸಲೀಲಾಖ್ಯ ಮಠದ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ, ಗಾವಡಗೆರೆ ನಟರಾಜ ಸ್ವಾಮೀಜಿ, ಕಬ್ಬಹಳ್ಳಿ ಗುರುಮಲ್ಲೇಶ್ವರ ಶಾಖಾ ಮಠದ ಗುರುಸಿದ್ದ ಸ್ವಾಮೀಜಿ, ಮೂಡುಗೂರು ಮಠದ ಇಮ್ಮಡಿ ಉದ್ದಾನ ಸ್ವಾಮೀಜಿ ಸೇರಿದಂತೆ ಮರಿಯಾಲ ಹಾಗೂ ಸುತ್ತಮುತ್ತಲ ಗ್ರಾಮದ ಮಠದ ಭಕ್ತಾದಿಗಳು ಹಾಜರಿದ್ದರು.

ರೋಟರಿ ಸಿಲ್ಕ್ ಸಿಟಿಯಿಂದ ಇಂದಿನಿಂದ ಆಹಾರಮೇಳ

ಚಾಮರಾಜನಗರ, ಡಿ. 17– ನಗರದ ರೋಟರಿಸಿಲ್ಕ್‌ಸಿಟಿ ವತಿಯಿಂದ ನಗರದಲ್ಲಿ ಡಿ.19,20 ಮತ್ತು 21ರಂದು ಆಹಾರಮೇಳ ಆಯೋಜಿಸಲಾಗಿದೆ ಎಂದು ರೋಟರಿ ಸಿಲ್ಕ್‌ಸಿಟಿ ವಲಯ–9 ಸಹಾಯಕ ಗೌರ್ನರ್ ಡಿ.ಎಸ್.ಗಿರೀಶ್ ಹೇಳಿದರು.

ನಗರದ ಬಿ. ರಾಚಯ್ಯ ಜೋಡಿರಸ್ತೆಯ ಸಿದ್ದಮಲ್ಲೇಶ್ವರ ವಿರಕ್ತಮಠದ ಬಸವರಾಜ ಸ್ವಾಮಿ ಅನುಭವಮಂಟಪದ ಒಳಾಂಗಣದಲ್ಲಿ 30 ಮಳಿಗೆಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ಹಾಕಲಾಗುತ್ತದೆ. ಹೊರಾಂಗಣದಲ್ಲಿ ಉತ್ತರ ಮತ್ತು ದಕ್ಷಿಣ ಕರ್ನಾಟಕದ 50ಕ್ಕೂ ಹೆಚ್ಚು ವಿವಿಧ ಬಗೆಯ ಆಹಾರ ಮೇಳದ 24 ಅಂಗಡಿ ಮಳಿಗೆ ಹಾಕಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಡಿ.19ರಂದು ಬೆಳಗ್ಗೆ 10ಕ್ಕೆ ವಸ್ತುಪ್ರದರ್ಶನವನ್ನು ಸಿದ್ದಮಲ್ಲೇಶ್ವರ ವಿರಕ್ತ ಮಠದ ಚನ್ನಬಸವಸ್ವಾಮೀಜಿ ಉದ್ಘಾಟಿಸುವರು. ಸಂಜೆ 6ಕ್ಕೆ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್, ರೋಟರಿಸಿಲ್ಕ್ ಸಿಟಿ ಜಿಲ್ಲಾ ಗೌರ್ನರ್ ಪಿ.ಕೆ.ರಾಮಕೃಷ್ಣ, ಮಾಜಿ ಗೌರ್ನರ್ ನಾಗಾರ್ಜುನ್, ನಿಯೋಜಿತ ಗೌರ್ನರ್ ಯಶಸ್ವಿನಿ ಸೋಮಶೇಖರ್ ಆಹಾರಮೇಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸುವರು

ಆಹಾರಮೇಳ ಸಮಿತಿ ಅಧ್ಯಕ್ಷ ಡಿ.ಪಿ. ವಿಶ್ವಾಸ್ ಮಾತನಾಡಿ, ಕಳೆದ ಬಾರಿ 2 ದಿನ ಆಹಾರ ಮೇಳ ಹಮ್ಮಿಕೊಂಡಿದ್ದು, 13 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ಟಿವಿಎಸ್ ಸಂಸ್ಥೆ ಜೊತೆಗೂಡಿ ಗ್ರಾಮಸ್ಥರ ವಂತಿಕೆಯ ಹಣ, ಮೇಳದಿಂದ ಉಳಿದ ಹಣದಲ್ಲಿ ಮೂಕಹಳ್ಳಿ ಶಾಲೆಯನ್ನು ನವೀಕರಿಸಲಾಯಿತು. ಈ ಬಾರಿ ನಾವು ಜಿಲ್ಲಾಧಿಕಾರಿಗಳ ಸಲಹೆ ಮೇರೆಗೆ ಸರ್ಕಾರಿ ಹಾಸ್ಟೆಲ್‌ಗಳಿಗೆ ಪೀಠೋಪಕರಣ ಖರೀದಿಸಲು ಮೇಳದಿಂದ ಸಂಗ್ರಹವಾದ ಹಣದಲ್ಲಿ ಖರ್ಚು ಕಳೆದು ಉಳಿಕೆ ಹಣ ನೀಡಲು ತೀರ್ಮಾನಿಸಿದ್ದೇವೆ ಎಂದರು.

ಸಾಂಸ್ಕೃತಿಕ ಕಾರ್ಯಕ್ರಮ: ಮೂರು ದಿನಗಳ ಆಹಾರಮೇಳದಲ್ಲಿ ಪ್ರತಿದಿನ ಸಂಜೆ 5ರಿಂದ 9–30ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ.

ಡಿ.19ರಂದು ಝೀ ಹಿಂದಿ ಸರಿಗಮಪ ಖ್ಯಾತಿಯ ಹಿನ್ನೆಲೆ ಗಾಯಕಿ ಸಿಂಚನ್ ದೀಕ್ಷಿತ್, ಕೊಳಲುವಾದಕ ನೀತು ನಿನಾದ್ ಸಂಗೀತ ಸಂಜೆ, ಡಿ.20 ಸ್ಯಾಕ್ಸ್‌ಪೋನ್ ಕಲಾವಿದೆ ಅಂಜಲಿ ಶಾನ್ ಭಾಗ್‌ರಿಂದ ಸಂಗಿತ, ಮೈಸೂರು ಕಥೆ ಗಳು ಖ್ಯಾತಿಯ ಧರ್ಮೇಂದ್ರ ಕುಮಾರ್ ಕಾರ್ಯಕ್ರಮ ನಡೆಸಿಕೊಡುವರು. ಡಿ.21 ರಂದು ಜಾದೂ ಕಲಾವಿದ ಮಿಸ್ಟರ್ ಮ್ಯಾಜಿಕ್ ಅವರಿಂದ ಜಾದೂ ಪ್ರದರ್ಶನ, ಪೃಥ್ವಿಪಿ. ಗೌಡರಿಂದ ಸಮೂಹ ನೃತ್ಯ ಪ್ರದರ್ಶನ ನಡೆಯಲಿದೆ ಎಂದು ತಿಳಿಸಿದರು. ಗೋಷ್ಠಿಯಲ್ಲಿ ರೋಟರಿ ಸಿಲ್ಕ್‌ಸಿಟಿ ಅಧ್ಯಕ್ಷ ಶಮಿತ್ ಕುಮಾರ್, ಮಾಜಿ ಅಧ್ಯಕ್ಷ ಮುರುಗೇಂದ್ರ ಸ್ವಾಮಿ, ಶರತ್, ಅಜಯ್, ಸಂತೋಷ್ ಉಪಸ್ಥಿತರಿದ್ದರು.

ವಾತ್ಸಲ್ಯ ಮನೆ ನಿರ್ಮಾಣಕ್ಕೆ ಶಿಲಾನ್ಯಾಸ



ವಾತ್ಸಲ್ಯ ಮನೆ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಯಿತು.

ಗುಂಡ್ಲುಪೇಟೆ, ಡಿ. 17(ಸೋಮ್.ಜಿ)– ಇಲ್ಲಿನ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ಕುಂಬಾರಗೇರಿಯಲ್ಲಿನ ಸರಸ್ವತಿರವರಿಗೆ ಪ್ರತಿ ತಿಂಗಳು 1000 ರೂ ಮಾಸಾಶನ ನೀಡುತ್ತಿದ್ದು ಇವರಿಗೆ ವಾಸಮಾಡಲು ಮನೆ ಇಲ್ಲದ ಕಾರಣ ವಾತ್ಸಲ್ಯ ಮನೆಯನ್ನು ಕಟ್ಟಿಕೊಡುವುದಕ್ಕೆ ಬುಧವಾರ ಭೂಮಿ ಪೂಜೆ ಮಾಡಲಾಯಿತು.

ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯರಾದ ನಾಗೇಶ್ ರವರು ಮಾತೃಶ್ರೀ ಹೇಮಾವತಿ ಅಮ್ಮನವರ ಆಶಯಗಳಂತೆ ಧರ್ಮಸ್ಥಳವು ನಿರ್ಗತಕರಿಗೆ ತಿಂಗಳಿಗೆ ಒಂದು ಸಾವಿರದಂತೆ ಮಾಶಾಸನವನ್ನು ನೀಡುತ್ತಿದೆ ಹಾಗೂ ಮನೆ ಇಲ್ಲದವರಿಗೆ ಮನೆ ಕಟ್ಟಿಕೊಡುವ ಕೆಲಸವನ್ನು ಮತ್ತು ಅನಾರೋಗ್ಯದಿಂದ ಬಳಲುತ್ತಿದ್ದವರಿಗೆ ವಾಟರ್ ಬೆಡ್, ವೀಲ್‌ಚೇರ್, ಹ್ಯಾಂಡ್ ಸ್ಟಿಕ್ ಹೀಗೆ ಜಲಮಂಗಳ ಕಾರ್ಯಕ್ರಮವೆಂದು ನಡೆಸಿಕೊಂಡು ಬರುತ್ತಿದೆ. ಕಟ್ಟಕಡೆಯ ವ್ಯಕ್ತಿಗೂ ಬದುಕುವ ಸೌಲಭ್ಯಗಳನ್ನು ಮಾಡಿಸಿಕೊಡುತ್ತಿರುವುದು ಧರ್ಮಸ್ಥಳ ಸಂಸ್ಥೆ ಎಂದು ಹೇಳಲು ಹೆಮ್ಮೆಯ ವಿಚಾರ ಎಂದು ತಿಳಿಸಿದರು.

ತಾಲೂಕಿನ ಯೋಜನಾಧಿಕಾರಿಗಳಾದ ಚಂದ್ರಶೇಖರ್ ಹಾಗೂ ವಲಯದ ಮೇಲ್ವಿಚಾರಕರಾದ ಮಂಜುನಾಥ್ ಮತ್ತು ಜ್ಞಾನವಿಕ ಸಮನ್ವಯಾಧಿಕಾರಿ ಚೈತ್ರ ಹಾಗೂ ಸೇವಾ ಪ್ರತಿನಿಧಿ ಶೀಲಾ ಮತ್ತು ಸದಸ್ಯರು ಪಾಲ್ಗೊಂಡಿದ್ದರು.

ಶಾಮನೂರಿಗೆ ಭಾವಪೂರ್ಣ ಶ್ರದ್ಧಾಂಜಲಿ



ಕೊಳ್ಳೇಗಾಲ: ಅಖಿಲ ಭಾರತ ವೀರಶೈವ ಮಹಾಸಭೆ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ನಿಧನದ ಹಿನ್ನೆಲೆ ಇಲ್ಲಿನ ಮಹಾಸಭೆ ವತಿಯಿಂದ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಪಟ್ಟಣದ ವೀರಶೈವಮಹಾಸಭೆ ಕಚೇರಿಯಲ್ಲಿ ಶಿವಶಂಕರಪ್ಪರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪ ನಮನ ಅರ್ಪಿಸುವ ಮೂಲಕ ಮುಖಂಡರು ಶ್ರದ್ಧಾಂಜಲಿ ಸಲ್ಲಿಸಿದರು. ಮಹಾಸಭೆ ತಾಲೂಕು ಅಧ್ಯಕ್ಷ ಪುಟ್ಟಣ್ಣ, ಮಾಜಿ ಅಧ್ಯಕ್ಷ ಬಸವರಾಜು, ಕಾರ್ಯದರ್ಶಿ ಮಹೇಶ್ ಕೆಂಪನ ಪಾಳ್ಯ, ಬೂದಿತಿಟ್ಟು ಶಿವಕುಮಾರ್, ಪತ್ತಿನ ನೌಕರರ ಅಧ್ಯಕ್ಷ ಮಲ್ಲೇಶಪ್ಪ, ಮಹಾಸಭೆ ನಿರ್ದೇಶಕ ಯುಪಿಎಸ್ ಮಹದೇವ ಸ್ವಾಮಿ, ರವಿ, ತೇರಂಬಳ್ಳಿ ಮಂಜುನಾಥ್ ಕೆಂಪನ ಪಾಳ್ಯ, ಕಾಂತರಾಜು ಕುಣಗಳ್ಳಿ, ಪ್ರಭಾಕರ್ ಕಾರ್ಯದರ್ಶಿ, ರವಿ, ಜಿಲ್ಲಾ ನಿರ್ದೇಶಕ ಬಸಪ್ಪ ಗುಂಡೆಗಾಲ, ಜಿಲ್ಲಾ ಕಾರ್ಯದರ್ಶಿ ಗಾಯತ್ರಿ, ವೀರಶೈವ ಮಹಾಸಭೆ ಮಹಿಳಾ ಅಧ್ಯಕ್ಷೆ ಜಗದಾಂಬ, ಅಸ್ಗಾಲ್ ಮಹದೇವಸ್ವಾಮಿ, ಪಾಳ್ಯ ರಘು, ಜಿನಕನಹಳ್ಳಿ ಮಲ್ಲು ಇದ್ದರು.

ದಟ್ಟಮಂಜು ಕವಿದ ವಾತಾವರಣದ ಹಿನ್ನೆಲೆ ಭಾರತ-ದಕ್ಷಿಣ ಆಫ್ರಿಕಾ ಪಂದ್ಯ ರದ್ದು



ಲಖನೌ, ಡಿ.17(ವಿವಿಹೆಚ್)- ಇಲ್ಲಿನ ಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ನಾಲ್ಕನೇ ಪಂದ್ಯ ರದ್ದಾಗಿದೆ.

ಭಾರೀ ಮುಸುಕು ಹಾಗೂ ದಟ್ಟ ಮಂಜು ಕವಿದ ವಾತಾವರಣದಿಂದಾಗಿ ಏಕನಾ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಪಂದ್ಯವನ್ನು ಅಂಪೈರ್‌ಗಳು ಪಂದ್ಯವನ್ನು ರದ್ದುಗೊಳಿಸಲು ನಿರ್ಧರಿಸಿದ್ದಾರೆ.

ಪೂರ್ವನಿಗದಿಯಂತೆ ಈ ನಾಲ್ಕನೇ ಪಂದ್ಯದ ಟಾಸ್ ಭಾರತೀಯ ಕಾಲಮಾನ ಸಂಜೆ 6:30ಕ್ಕೆ ನಡೆಯಬೇಕಿತ್ತು. ಆ ಬಳಿಕ ಸಂಜೆ 7 ಗಂಟೆಗೆ ಆಟ ಆರಂಭವಾಗಬೇಕಿತ್ತು. ಆದರೆ ವಿಪರೀತ ಮಂಜು ಕವಿದಿದ್ದರಿಂದ ಟಾಸ್‌ನ್ನು ಮುಂದೂಡಲು ಸೂಚನೆ ನೀಡಲಾಯಿತು. ಈ ಪ್ರಕ್ರಿಯೆ ರಾತ್ರಿ 9:30 ರವರೆಗೂ ಮುಂದುವರಿಯಿತು. 6 ಬಾರಿ ಟಾಸ್ ಮುಂದೂಡಿಯೂ ಪ್ರಯೋಜನವಾಗದ ಕಾರಣ ಮ್ಯಾಚ್ ರೆಫ್ರಿ ರಿಚಿ ರಿಚರ್ಡ್ಸನ್ ಪಂದ್ಯವನ್ನು ರದ್ದುಗೊಳಿಸಿದರು.

ಇದರೊಂದಿಗೆ ಅತಿಥೇಯ ಭಾರತ ತಂಡವು 5 ಪಂದ್ಯಗಳ ಟಿ20 ಸರಣಿಯಲ್ಲಿ 2-1 ಅಂತರದಿಂದ ಮುನ್ನಡೆ ಕಾಯ್ದುಕೊಂಡಿದೆ. ಮುಂದಿನ ಪಂದ್ಯ ಡಿ.19 ರಂದು ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ನಡೆಯಲಿದೆ.

ಡಿಸೈಡರ್ ಪಂದ್ಯವಾಗಿ ಬದಲಾಗಿರುವ ಅಂತಿಮ ಪಂದ್ಯದಲ್ಲಿ ಒಂದು ವೇಳೆ ಟೀಂ ಇಂಡಿಯಾ ಗೆಲುವು ದಾಖಲಿಸಿದ್ದಲ್ಲಿ ಸರಣಿ ವಶಪಡಿಸಿಕೊಳ್ಳಲಿದೆ. ಹರಿಣ ಪಡೆಗೆ ಸರಣಿ ಸೋಲಿನಿಂದ ತಪ್ಪಿಸಿಕೊಳ್ಳಲು ಗೆಲ್ಲಲೇಬೇಕಾದ ಅನಿವಾರ್ಯತೆ ಎದುರಾಗಿದೆ. ಈ ರೋಚಕ ಹಣಾಹಣಿಯಲ್ಲಿ ಗೆಲುವು ಯಾರಿಗೆ ಧಕ್ಕಲಿದೆ ಎಂಬುದನ್ನು ಕಾದುನೋಡಬೇಕಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821-2496522/23

WANTED
Male Candidates
To Work in Medical Stores in Chamundipuram
Any Degree Pass
Send Your Resume to muruganpanacea@yahoo.com
(Part time Job also available in evening)

airtel WANTED
Sim sales Executive
salary 15,000
Incentive up to 10,000
9591501305

ಬಸ್ ಚಾಲಕರು ಬೇಕಾಗಿದ್ದಾರೆ
ಮೈಸೂರಿನ ವಿಜಯನಗರದಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಶಾಲೆಗೆ ಬಸ್ ಚಾಲಕರು ಬೇಕಾಗಿದ್ದಾರೆ. ಸಂಪರ್ಕ ಸಂಖ್ಯೆ:
9483670193

ರಾಜ್ ಫೌಂಡೇಶನ್(ರಿ) ಫ್ಯಾಶನ್ ಶೋ
ದಿನಾಂಕ 18-12-2025ನೇ ಗುರುವಾರದಂದು ಮೈಸೂರು ದಸರಾ ವಸ್ತು ಪ್ರದರ್ಶನ ಕಲಾ ಮಂಟಪದಲ್ಲಿ ಮಧ್ಯಾಹ್ನ 3 ರಿಂದ 8 ಗಂಟೆವರೆಗೆ ಫ್ಯಾಶನ್ ಶೋ ನಡೆಸಲಾಗುತ್ತಿದೆ. ಆಸಕ್ತಿ ಉಳ್ಳವರು ಬರುವಾಗ ತಮ್ಮ ಆಧಾರ್ ಕಾರ್ಡ್, ಒಂದು ಫೋಟೋ ತರತಕ್ಕದ್ದು. ಮತ್ತು 25 ವರ್ಷದಿಂದ 55 ವಯಸ್ಸಿನವರಿಗೆ ಅವಕಾಶವಿರುತ್ತದೆ. ಭಾಗವಹಿಸಲು ಇಚ್ಛಿಸುವವರು ಮಧ್ಯಾಹ್ನ 3 ಗಂಟೆಗೆ ಒಳಗೆ ಬರತಕ್ಕದ್ದು.
8197508158, 9743313178

ಮೈಸೂರ್ ಪ್ರಾಪರ್ಟಿ
ಇಲವಾಲ, ವಿಜಯನಗರ, ಬೋಗಾದಿ, ಪೋಲಿಸ್ ಲೇಔಟ್, ಸೈಟುಗಳು ಮಾರುವವರು ಕೊಳ್ಳುವರು.. & ಬಾಡಿಗೆ, ಭೋಗ್ಯಕ್ಕೆ, ಸಂಪರ್ಕಿಸಿ
7899272101/ 9986948594

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ.
ಒಂದು ಗ್ರಾಂ: 12000 (24 CT)
Mob: 9108146123

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

RERA APPROVED — RAI ESTATES — MUDA APPROVED
E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

ಹೊಸ ಲೇಔಟ್ಸ್ ಆರಂಭವಾಗಿದೆ
- T.N ಪುರ ರಸ್ತೆ - ಸಪ್ತಮಾತೃಕ, ಪ್ರಶಾಂತ ಛಾಯ ಹೌಸಿಂಗ್ ಪ್ರಾಜೆಕ್ಟ್ ಪಕ್ಕ 14-25 ಲಕ್ಷ
- ಬನ್ನೂರು ರಸ್ತೆ - ಮಾನಸಿ ನಗರ ಹಿಂಬಾಗ ವಿದ್ಯಾವಿಕಾಸ್ ಕಾಲೇಜ್ ಎದುರು 25-49 ಲಕ್ಷ
- ಬೋಗಾದಿ ರಸ್ತೆ - ಹೊಸ ಕ್ರಿಕೆಟ್ ಸ್ಟೇಡಿಯಂ ಜಿಬ್ಬಿ ಹುಂಡಿ ಹಿಂಬಾಗ 29 ಲಕ್ಷ
- 30X50 ಮರಟಿಕ್ಯಾತನಹಳ್ಳಿ 42 ಲಕ್ಷ

Brokers Excuse
81230 75038

FOR RENT
1800 Sq ft in Nrupathunga Road, M. Block, Beside SBI Bank Main Road, Kuvempunagar, Suitable for Call Centre, Governments, B.P.O- NGO, IT & BT
9448047419

ಮೈಸೂರಿನಲ್ಲಿ DTCP Approved ಬಡಾವಣೆಗಳಲ್ಲಿ ನಿವೇಶನಗಳು ದೊರೆಯುತ್ತವೆ
1) ಟಿ.ನರಸೀಪುರ ಮುಖ್ಯ ರಸ್ತೆ.
2) ಹೆಚ್.ಡಿ. ಕೋಟೆ ಮುಖ್ಯ ರಸ್ತೆ
3) ಕೆಲ್ಲಹಳ್ಳಿ ಪೆರಿಫೆರಲ್ ರಿಂಗ್ ರಸ್ತೆ.
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.
ಶ್ರೀ ರಮಣಶ್ರೀ ಡೆವಲಪರ್ಸ್
Mob: 7411914135

House for Rent
16, 2 BHK house for rent available for PG & private hostels. Including bunkers available.
9980685348, 8970326846

100% ಉದ್ಯೋಗವಕಾಶ
ವರ್ಕ್ ಫ್ರಂ ಹೋಂ ಮನೆಯಿಂದಲೇ ಕೆಲಸ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ ಹಾಗೂ ಪುರುಷರಿಗೆ. ವಯಸ್ಸು: 18 ರಿಂದ 65 ರವರೆಗೆ. ಆಫೀಸ್‌ಗಳಿಗೆ 4th, 7th, 10th, ITI, Any Degree ಪಾಸ್ / ಫೇಲ್ ಆದ ಯುವಕ, ಯುವತಿಯರಿಗೆ ಹಾಗೂ ಇಎಸ್‌ಐ, ಪಿಎಫ್‌ನೊಂದಿಗೆ ಮೊದಲ ಕರೆ ಮಾಡಿ 22,000 – 45,000.
6362024878, 9019593297

ತಕ್ಷಣ ಬೇಕಾಗಿದ್ದಾರೆ
ಮೈಸೂರಿನಾದ್ಯಂತ ಕಂಪನಿಗಳಿಗೆ, ಆಫೀಸ್‌ಗಳಿಗೆ & ಶೋರೂಂಗಳಿಗೆ ಯುವಕರು, ಯುವತಿಯರು ಬೇಕಾಗಿದ್ದಾರೆ. 7th, 10th, PUC, Any Degree ವಸತಿ, ಊಟ ಉಚಿತವಾಗಿದೆ. ಸಂಬಳ + ಓಟಿ. 20,000 ದಿಂದ 45,000. ಸಂಪರ್ಕಿಸಿ:
Mob: 9916788422

ನೇರ ಆಯ್ಕೆ ಉದ್ಯೋಗವಕಾಶ
ವರ್ಕ್ ಫ್ರಮ್ ಹೋಂ ಮನೆಯಿಂದಲೇ ಕೆಲಸ ಪಾರ್ಟ್ ಟೈಮ್ & ಫುಲ್ ಟೈಮ್ ವರ್ಕ್‌ಗಳಿಗೆ ವಿದ್ಯಾರ್ಥಿಗಳಿಗೆ + ಮಹಿಳೆಯರಿಗೆ ಹಾಗೂ ವಯಸ್ಕರಿಗೆ ಮೊದಲ ಆದ್ಯತೆ. ಕೊರಿಯರ್ ಸೌಲಭ್ಯವಿದೆ. 7th, 10th, PUC, Any Degree ಪಾಸ್, ಫೇಲ್ ಆದವರು. 20,000 ದಿಂದ 25,000. ಸಂಪರ್ಕಿಸಿ:
Mob: 8095133188

ಬೇಕಾಗಿದ್ದಾರೆ
ಉತ್ತನಹಳ್ಳಿ ದೇವಸ್ಥಾನದ ರಿಂಗ್ ರಸ್ತೆಯಲ್ಲಿರುವ (ಸ್ಪಟಿಕ ಸರ್ವಿಸ್ ಸ್ಟೇಷನ್ ಪಕ್ಕ) ಮಾಂಟೇಸರಿ ಶಾಲೆಗೆ ನುರಿತ ಅನುಭವವುಳ್ಳ ಶಿಕ್ಷಕಿ ಬೇಕಾಗಿದ್ದಾರೆ. ಅಕ್ಕಪಕ್ಕದ ಬಡಾವಣೆಯವರಿಗೆ ಮೊದಲ ಆದ್ಯತೆ.
9886249004

ಸೈಟು ಮಾರಾಟಕ್ಕಿದೆ
32 ½ x 40 North Facing
ಶ್ರೀ ಸಾಯಿ ಚಾಮುಂಡೇಶ್ವರಿ ಲೇಔಟ್, ರಾಘವೇಂದ್ರಸ್ವಾಮಿ ಮಠದ ರಸ್ತೆ, ಟಿ.ನರಸೀಪುರ ಮೇನ್ ರೋಡ್, ಚಿಕ್ಕಹಳ್ಳಿ, ಮೈಸೂರು
9845035818

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

ಬೇಕಾಗಿದ್ದಾರೆ
ಮೊಬೈಲ್ ಫೋನ್ ಶೋರೂಮ್‌ಗೆ ಕೆಲಸಕ್ಕೆ ಬೇಕಾಗಿದ್ದಾರೆ.
ಪಾರ್ಟ್ ಟೈಂ/ ಫುಲ್ ಟೈಂ
ಸಂಪರ್ಕಿಸಿ
9886409722

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

Manufacturers WARDROBES
JKV LIFE FURNITURES
- Steel Almirahs
- School Furnitures

Termite Proof
Fire Resistant & Borer Proof
50 / 40% LESSER THAN WOOD
J. Vijaykumar
Cell : 93433 74669
Off : 93792 24669

ಮಹಿಳೆಯರಿಗೆ
ಆಫೀಸ್ ಕೆಲಸ, ಟೆಲಿಕಾಲಿಂಗ್ ಮತ್ತು ಮ್ಯಾನೇಜ್ಮೆಂಟ್ ಕೆಲಸಕ್ಕೆ ಮಹಿಳೆಯರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ: 6364548607

ಬೇಕಾಗಿದ್ದಾರೆ
ಹೋಟೆಲ್ ಕೆಲಸಕ್ಕೆ, ಹುಡುಗರು/ಹೆಂಗಸರು ಬೇಕಾಗಿದ್ದಾರೆ. ದೋಸೆ, ವಾಶಿಂಗ್ ಹೆಂಗಸರು, ಚೈನೀಸ್ ಮಾಸ್ಟರ್ ಮತ್ತು ಟೀ, ಪಾರ್ಸಲ್ ಕೌಂಟರ್‌ಗೆ ಬೇಕಾಗಿದ್ದಾರೆ.
Contact : 9008253179
8495988764, 9606238790

ಸಾರ್ವಜನಿಕರ ಗಮನಕ್ಕೆ
ದಿನಾಂಕ: 15-12-2025 ರಂದು ಸಂಜೆ 8.30 ರಿಂದ 9.20ರ ಸಮಯದಲ್ಲಿ ಮೈಸೂರು ಬಸ್ ನಿಲ್ದಾಣದಿಂದ ಶ್ರೀರಾಂಪುರ 2ನೇ ಸ್ಟೇಜ್‌ಗೆ ಆಟೋರಿಕ್ಷಾದಲ್ಲಿ ಬರುತ್ತಿರುವಾಗ ಒಂದು ಲೆದರ್ ಬ್ಯಾಗಿನಲ್ಲಿ ಇಟ್ಟಿದ್ದ ಸೈಟ್ ನಂ. 36, 1ನೇ ಮೇನ್ ರೋಡ್, ರಿಲಯಬಲ್ ರೆಸಿಡೆನ್ಸಿ ಲೇಔಟ್, ಬೆಂಗಳೂರು ಈ ಸ್ವತ್ತಿನ ಅಸಲು ಕ್ರಯ ಪತ್ರ ಮತ್ತು ಸಂಬಂಧಪಟ್ಟ ದಾಖಲೆಗಳು ಕಳೆದು ಹೋಗಿರುತ್ತದೆ. ಸಿಕ್ಕಿದ್ದಲ್ಲಿ ಈ ವಿಳಾಸದಾರರಿಗೆ ತಲುಪಿಸುವುದು. ಸೂಕ್ತ ಬಹುಮಾನ ನೀಡಲಾಗುವುದು.
ಕೆ.ಎಸ್.ಪ್ರಕಾಶ್, #04 ಬ್ಲಾಕ್ ನಂ.22, ಎಸ್.ಬಿ.ಎಂ. ಕಾಲೋನಿ, ಶ್ರೀರಾಂಪುರ 2ನೇ ಹಂತ, ಮೈಸೂರು-570023, ಮೊ.ನಂ. 9448458228

ಬೇಕಾಗಿದ್ದಾರೆ
ವಾಹನಗಳ ವಾಟರ್ ಸರ್ವೀಸ್ ಸ್ಟೇಷನ್‌ಗೆ ನುರಿತ ಕೆಲಸಗಾರರು ಬೇಕಾಗಿದ್ದಾರೆ
ವಸತಿ ಸೌಲಭ್ಯ ಲಭ್ಯವಿದೆ
ಕೂಡಲೇ ಸಂಪರ್ಕಿಸಿ:
94495 14889
83108 14289

ವಿವಿಧ ಉದ್ಯಮಗಳಿಗೆ ಸಬ್ಸಿಡಿಗಳ ಮಾಹಿತಿಗಾಗಿ ಸಂಪರ್ಕಿಸಿ:
7483153461

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ, ಮತ್ತು ವಿದೇಶದಲ್ಲಿರುವ ವಧುವರರಿಗೆ ಸಂಪರ್ಕಿಸಿ
9448229184, 7899625268

SITE FOR SALE
20x33 E/F
Semi-commercial site, J.C. College backside. 40 ft. road, 3rd Stage, ‘B’ Block, Vijayanagar.
9844511289, 9448836607

ಉಚಿತ ಕಣ್ಣು ತಪಾಸಣೆ ಉಚಿತ ಕನ್ನಡಕ ವಿತರಣೆ
21.12.2025 ಭಾನುವಾರ ರೋಟರಿ ಸಭಾಂಗಣ ಮುಡಾ ಎದುರು, ಮೈಸೂರು ಕಸ್ತೂರಿ ಚಂದ್ರು
8867688676

ಮನೆಯಿಂದಲೇ ಕೆಲಸ
ಗೃಹಿಣಿಯರು ವಿದ್ಯಾರ್ಥಿಗಳು, ವಯಸ್ಕರು ವಯಸ್ಸಿನ ಮಿತಿ ಇಲ್ಲಾ, ನಿಮ್ಮ ಬಿಡುವಿನ ವೇಳೆಯಲ್ಲಿ ಕುಳಿತು ಬುಕ್ ರೈಟಿಂಗ್, ಫಾರಂ ಫಿಲ್ಲಿಂಗ್, ಡಾಟಾ ಎಂಟ್ರಿ, ವಾಟ್ಸಾಪ್ ಟೈಪಿಂಗ್, ಜ್ಯುವೆಲರಿ ಪ್ಯಾಕಿಂಗ್ ಹಾಗೂ ಇನ್ನಿತರ ಪ್ಯಾಕಿಂಗ್ ಕೆಲಸಗಳು ಲಭ್ಯ, ನಿಮ್ಮ ಬಿಡುವಿನ ವೇಳೆಯಲ್ಲಿ ಕುಳಿತುಗಳಿಸಿ ತಿಂಗಳಿಗೆ – 20,000/– ದಿಂದ 30,000/–ದವರೆಗೆ
9591768727

ಪ್ರಮಾಣ ಪತ್ರ
ಚಿಕ್ಕತಾಯಮ್ಮ, ಗೊರವನಹಳ್ಳಿ ಗ್ರಾಮ, ಬನ್ನೂರು ಹೋಬಳಿ, ಟಿ.ನರಸೀಪುರ ತಾಲೂಕು, ಮೈಸೂರು ಜಿಲ್ಲೆ ಇಲ್ಲಿ ವಾಸವಿದ್ದು, ನನ್ನ ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡ್ ನಲ್ಲಿ ನನ್ನ ಹೆಸರು ಚಿಕ್ಕತಾಯಮ್ಮ (Chikkathayamma) ಎಂದು ನಮೂದಾಗಿದೆ. ಆದರೆ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ವಿಜಯನಗರ 2ನೇ ಹಂತ ಶಾಖೆ, ಖಾತಾ ಸಂಖ್ಯೆ 581502120011600 ರಲ್ಲಿ ನನ್ನ ಹೆಸರು ಚಿಕ್ಕಹೊನ್ನಮ್ಮ(Chikkahonnamma) ಎಂದು ನಮೂದಾಗಿದ್ದು, ಈ ಎರಡೂ ಹೆಸರುಗಳು, ನನಗೇ ಸೇರಿದ್ದು ಎಂದು ಪ್ರಮಾಣೀಕರಿಸುತ್ತೇನೆ.
ಸಹಿ/– ಚಿಕ್ಕತಾಯಮ್ಮ

WANTED
ರೂಮ್ ಬಾಯ್ಸ್ ಬೇಕಾಗಿದ್ದಾರೆ.
ಕೆ.ಟಿ. ಸ್ಟ್ರೀಟ್‌ನಲ್ಲಿರುವ ಹೋಟೆಲ್‌ಗೆ
9916623340

MYSURU RETINA CARE STAFF REQUIRED
[FRESHER OR EXPERIENCE]
1. OPTOMETRIST
CONTACT NUMBER
7338369364 / 0821-2543244
22A, SRI GURU KRUPAM, 1ST FLOOR, NIVEDITHA NAGAR, MYSORE-570022
ABOVE ANANTHAM CAFÉ

SITE FOR SALE
Kuberananda Sagara 50x80
Rate: 1250 / sq.ft.
40x40 - 2400 sq.ft.
20x30 Vijayanagar 4th Stage 2nd Phase. Rate: 45 Lakhs.
Mob: 8050204172

ತಕ್ಷಣ ಬೇಕಾಗಿದ್ದಾರೆ
ಮೇಟಗಳ್ಳಿ ಮತ್ತು ಹೆಬ್ಬಾಳ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು,
ಸಂಬಳ : 20,200 + W/o (8 hrs)
ಊಟ ತಿಂಡಿ ಸೌಲಭ್ಯವಿರುತ್ತದೆ.
9880727819, 9620667819

ತಕ್ಷಣ ಬೇಕಾಗಿದ್ದಾರೆ
ಸರಸ್ವತಿಪುರಂ ಮತ್ತು ಕುವೆಂಪು ನಗರ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ತಕ್ಷಣ ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು,
ಸಂಬಳ : 22,000 + W/o
ಊಟ ತಿಂಡಿ ಸೌಲಭ್ಯವಿರುತ್ತದೆ.
9620777819, 9620667819

WANTED
1) Staff Nurses (Female) GNM. 2) Ward Boys (Night) 1nos. 3) Receptionist / Front Office (Female), Computer Knowledge Must, 4) Pharmacist / Pharmacy Asst, min 2 yrs Experience.
Contact: RMS Hospitals, K.M.Puram, Mysore
8884157373, 9945898398

CHANGE OF NAME
I, Rubina Banu S W/o Imran M A, residing at No. 26, KBL Gardeniya, 2nd Phase, 4th Stage, Vijayanagara, Mysuru-570032, have changed my minor daughter name from THANVI M I to ALEEZA M I vide affidavit sworn before Notary Syed Ameer, Mysore dated 16-12-2025
Sd/- Rubina Banu S

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

FOR SALE
30x40 Sites Near RT Nagar BSNL Layout @ Just 22 Lakhs
20x30, 30x40 MUDA Approved Sites Near Rainbow School Bogadi
30x40|30x50 MUDA Sites KHB Attach, HD Kote Road.
2 & 3 BHK Apartments @ Ramakrishna Ngr
Commercial Properties Also Available
PRAKRUTHI PROPERTIES
95386 90359, 90359 90359

WANTED
1) Marketing Executive - 3 year experience in medical field (Qualification any Degree)
0821-4282551 / 9972543351

FOR SALE
20x30 New Duplex House Nr T.Narsipura Ring Road.
30x40 Duplex House @ Dattagalli
40x120 Site@ 80 Feet Road Dattagalli
33X40 SOUTH WEST CORNER SITE @ KABINI LAYOUT, SRIRAMPURA.
40x60@ JP Ngr, Shardha Lyt
35x60 Commercial, 20x30/40x60 /50x80 Sites @ Srirampura
20x30 Properties @ VijayaNagar
PRAKRUTHI PROPERTIES
95386 90359, 90359 90359

WANTED
Security guard (Working in Hutagalli Industry, PF, ESI available, Food Free Salary 18000/-
Contact : 7090341474
99167397611 / 9535992178

WANTED
Room Boy
Receptionist
for Lodge
9743221781, 9743221782

CHANGE OF NAME
I SHAIK AZEEZ UR RAHAMANA, Residing at # 147, 1st Main 5th Cross, Shanthi Nagar, Mysore-570019 Have changed my Name from SHAIK AZURUR RAHMAN to SHAIK AZEEZ UR RAHAMANA on my own Free will Sworn in Before Notary AKBAR SHARIFF, Mysore vide Affidavit Dated : 15-12-2025
Sd/- Shaik Azeez UR Rahamana

SITE FOR SALE
40x60
80 feet Road Approach
West Facing Demolished House for Sale Vijayanagar 2nd Stage
Mysore Buy and Sale
8904812796

Site for Sale
MUDA APPROVED
Bogadi Main Road
Jatti Hundi
30x40-,20x40-,20x30
80% Bank Loan
9738884777

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್‌ಗಳು (8 hours duty) ಮತ್ತು ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ. ಉತ್ತಮ ವೇತನ, ಪಿಎಫ್ ಮತ್ತು ಇಎಸ್‌ಐ ಸೌಲಭ್ಯವಿರುತ್ತದೆ.
ಸ್ಥಳ: ಹೆಬ್ಬಾಳು ಕೈಗಾರಿಕ ನಗರ , ಮೈಸೂರು
7829393555
9886200104

ಬೇಕಾಗಿದ್ದಾರೆ
ಪುರುಷರು ಮಾತ್ರ ಬೇಕಾಗಿದ್ದಾರೆ ಹೆಲ್ಪರ್ ಕೆಲಸಕ್ಕೆ ಯಾವುದೇ ವಿದ್ಯಾಭ್ಯಾಸ ಬೇಕಿಲ್ಲ ಸಂಬಳ: 17,500+ESI, PF. ವಯಸ್ಸು 18 ರಿಂದ 45, 8ಗಂಟೆ ಕೆಲಸ, 3 SHIFT ಹೆಚ್ಚಿನ ಮಾಹಿತಿಗಾಗಿ ಸ್ಥಳಕ್ಕೆ ಭೇಟಿ ನೀಡಿ. ಸ್ಥಳ: CIPET COLLAGE ಹತ್ತಿರ,RING ROAD ಮೇಟಗಳ್ಳಿ, ಮೈಸೂರು
9986874574

ಮೈಸೂರು ಲ್ಯಾಂಡ್ ಮಾರ್ಟ್
ಸಾತಗಳ್ಳಿ ಲೇಔಟ್ 30x40 & 20x30 ಪೋಲೀಸ್ ಲೇಔಟ್ 30x40 ಮತ್ತು ನಿವೇಶನಗಳ ಮಾರಾಟ ಖರೀದಿಗಾಗಿ
9448447035

ಸುವರ್ಣವಕಾಶ
ಮೈಸೂರಿನಲ್ಲಿ ನೂತನವಾಗಿ ಆರಂಭವಾಗಿರುವ A.W. Group of ಕಂಪನಿಯಲ್ಲಿ ಖಾಲಿಯಿರುವ 212 ಪರ್ಮನೆಂಟ್ ಹುದ್ದೆಗಳಿಗೆ ಅಭ್ಯರ್ಥಿಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC, PUC, ITI, Dip & any Degree ವಯೋಮಿತಿ : 18-35 years
ತಿಂಗಳಿಗೆ : 22000 – 32000,
(ಉಚಿತ ಊಟ+ವಸತಿ ಇರುತ್ತದೆ. ಸರಸ್ವತಿ
7349699460, 7090212014

DOCUMENT LOST
K.M. Prakash, Residing at Mysore have lost, possession certificate of Site No. 42, Metagally, No. SR1339/71-72, Dated : 10-11-1971 of the Chairman, City improvement trust board, Mysore. Finders please Contact :
9900558972

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರಸ್ತೆಯಲ್ಲಿ ಇರುವ ಸುವ್ಯವಸ್ಥಿತ ಸಸ್ಯಾಹಾರಿ ಹೋಟೆಲ್‌ಗೆ ಸೌತ್ ಅಸಿಸ್ಟೆಂಟ್ (South Assistant), ಸಪ್ಲೆಯರ್/ವೇಟರ್ (Waiter), ಕ್ಲೀನಿಂಗ್/ವಾಷಿಂಗ್, ಕೌಂಟರ್ (counter)
Conti comi 3
7338392631

ಬೇಕಾಗಿದ್ದಾರೆ
ಮಹಿಳಾ ಪಿಜಿ ಯೊಂದರಲ್ಲಿ ಅಡುಗೆ ಮಾಡಲು ಮಹಿಳಾ ಭಟ್ಟರು, ಅಡುಗೆ ಸಹಾಯಕಿಯರು, ಹೌಸ್ ಕೀಪಿಂಗ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ ನಮ್ಮಲ್ಲೇ ಉಳಿದುಕೊಳ್ಳುವಂತಹ ಮಹಿಳೆಯರಿಗೆ ಮಾತ್ರ ಅವಕಾಶ (ವಿಧವೆ, ವಿಚ್ಛೇದಿತೆಯರಿಗೆ ಹೆಚ್ಚಿನ ಅವಕಾಶ ವಿರುತ್ತದೆ)
ಸಂಪರ್ಕಿಸಿ
9632671123

ಬೇಕಾಗಿದ್ದಾರೆ
ಮೈಸೂರು ನಗರದಾದ್ಯಂತ ಬ್ಯಾಂಕ್ ಫೀಲ್ಡ್ ವೆರಿಫಿಕೇಶನ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ
ಅನಿಲ್: 7026996123
ಶೇಖರ್: 9945911118

ಬೇಕಾಗಿದ್ದಾರೆ
ಕೆಲ್ಲಟ್ಟಿ ಕಿಚನ್ ವೆಜ್ ಕೆಫೆಗೆ 6 ಸಿಬ್ಬಂದಿ. ಕರ್ತವ್ಯಗಳು: ತರಕಾರಿ ಹೆಚ್ಚುವುದು, ರೊಟ್ಟಿ ಮಾಡುವುದು, ಸ್ವಚ್ಛಗೊಳಿಸುವುದು. ಪಾಳಿಗಳು: ಬೆಳಿಗ್ಗೆ 6 ರಿಂದ ಮಧ್ಯಾಹ್ನ 3 / ಮಧ್ಯಾಹ್ನ 12.30 ರಿಂದ ರಾತ್ರಿ 9.30. ಸಂಪರ್ಕಿಸಿ:
Mob: 9986758555
ನೇರವಾಗಿ ಭೇಟಿ ನೀಡಿ: #6, ಜೋಡಿ ಬಸವಣ್ಣ ರಸ್ತೆ, ಕುವೆಂಪುನಗರ, ಮೈಸೂರು

Properties for sale
Chamarajapuram, K.C. Layout, Vijayanagar.
Mob: 93421-25252

ಬೇಕಾಗಿದ್ದಾರೆ
1) Goods Auto (3 wheeler) Driver ಬೇಕಾಗಿದ್ದಾರೆ. 2) Distributor Agency Billingಗೆ Computer Knowledge ಇರುವವರು ಬೇಕಾಗಿದ್ದಾರೆ
9686891690

CHANGE OF NAME
I MUTTURAJ, aged about 29 years, S/o Sri, Mahesh, Residing at # 2582, Adi Pampa Road, V.V. Mohalla, Mysore-570002, Have changed my Name from MUTTURAJ to MUTTU M on my own Free will Sworn in Before Notary L.N. Rajendran, Mysore vide Affidavit Dated : 17-12-2025
Sd/- Muttu .M

ತಕ್ಷಣ ಬೇಕಾಗಿದ್ದಾರೆ
TVS, Toyota, Honda, ಬಿಸ್ಕೆಟ್ಸ್ ಕಂಪನಿಗಳಿಗೆ ಆಫೀಸ್, ಶೋರೂಂಗಳಿಗೆ 7th, 10th, PUC, Degree, ITI, Diploma, ಯುವಕ, ಯುವತಿಯರು. 18,000/– ರಿಂದ 60,000/–. ವಸತಿ, ಊಟವಿದೆ.
Mob: 7204995716

ಬಾಡಿಗೆಗೆ ದೊರೆಯುತ್ತದೆ
ಮೀನು, ಕುರಿ, ಕೋಳಿ, ಹಸು ಸಾಕಾಣಿಕೆಗೆ ನೀರು, ವಿದ್ಯುತ್, ಶೆಡ್ ಇರುವ ಎಲ್ಲಾ ರೀತಿಯ ಸೌಲಭ್ಯಗಳು Farm Land inside ಇದೆ.
Mob: 9845885470

ಬೇಕಾಗಿದ್ದಾರೆ
ಹೋಂನರ್ಸಿಂಗ್, ಅಡುಗೆ ಕೆಲಸ ಹಾಗೂ ಮನೆ ಕೆಲಸ ಮಾಡಲು ಮಹಿಳೆಯರು, ಪುರುಷರು ಬೇಕಾಗಿದ್ದಾರೆ 24 ಗಂಟೆ ಹಾಗೂ 8 ಗಂಟೆಗಳಿಗೆ ...ಆಸಕ್ತಿಯುಳ್ಳವರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
Mob: 7353918871

Old Age Home
ನಮ್ಮಲ್ಲಿ ಎಲ್ಲಾ ತರಹದ ಹಿರಿಯ ನಾಗರೀಕರನ್ನು ಅಥವಾ ವೃದ್ಧರನ್ನು ಮನೆಯ ವಾತಾವರಣದಲ್ಲಿ ಊಟ, ವಸತಿ, ನರ್ಸಿಂಗ್ ಕೇರ್ ಮತ್ತು ವೈದ್ಯರ ಆರೈಕೆ ಯೊಂದಿಗೆ ನೋಡಿಕೊಳ್ಳುತ್ತೇವೆ. ಹೆಚ್ಚಿನ ಮಾಹಿತಿಗಾಗಿ ಕರೆಮಾಡಿ.
Mob: 9607172737

WANTED
1) Compressor Operator: 1 Nos.
Minimum Exp. - 3 years.
2) Warehouse Incharge: 1 No.
Minimum experience: 3 years.
Whatsaap resume to:
Mob: 9019323999

ಬೇಕಾಗಿದ್ದಾರೆ
ಮೈಸೂರಿನ ಬನ್ನೂರು ರಸ್ತೆಯಲ್ಲಿರುವ ಸ್ಟೀಲ್ ಮತ್ತು ಸಿಮೆಂಟ್ ಶಾಪ್‌ಗೆ ಫೀಲ್ಡ್‌ನಲ್ಲಿ ಅನುಭವವಿರುವ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಆಕರ್ಷಕ ವೇತನ, ಸಂಪರ್ಕಿಸಿ
9686767064

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರ್ ಶೋರೂಮ್ ಹಾಗೂ ಬೈಕ್ ಶೋರೂಮ್‌ಗಳಿಗೆ, CASHIER, RECEPTIONIST, HR, ADMIN, ACCOUNT, ಕೆಲಸಕ್ಕೆ, ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ, (18k -38k), SSLC, PUC, DEGREE
6366718368, 9739121355

ಸೈಟ್‌ಗಳು ಮಾರಾಟಕ್ಕಿವೆ
30x40 & 30x50
Starts @ 22 ಲಕ್ಷ
ಬೋಗಾದಿ ರಸ್ತೆ
9880774395

WANTED
ROOM BOYS FOR A LODGE IN SARASWATHIPURAM
CONTACT
Contact : 9480558492

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ. 2921/A, ಸರಸ್ವತಿಪುರಂ, ಮೈಸೂರು.
ನಾವು ನ್ಯಾಷನಲೈಸ್ಡ್ ಮತ್ತು ಎನ್.ಬಿ.ಎಫ್.ಸಿ ಬ್ಯಾಂಕ್‌ಗಳಲ್ಲಿ, ಮನೆ ಸಾಲ ಸೌಲಭ್ಯ ಕೊಡಿಸಲಾಗುತ್ತದೆ. 11B, 9 & 11A, ಮುಡಾ, ಕಾರ್ಪೋರೇಷನ್ ಮತ್ತು ರೆವಿನ್ಯೂ ಖಾತೆಗಳಿಗೆ ಲೋನ್ ಮಾಡಿಸಿಕೊಡಲಾಗುವುದು. ಸಿಬಿಲ್ ತೊಂದರೆ ಇದ್ದರೂ. ಹಾಗೂ Telly Callerಗೆ ಹುಡುಗಿಯರು ಬೇಕಾಗಿದ್ದಾರೆ. ವಯೋಮಿತಿ 18-26, ವಿದ್ಯಾರ್ಹತೆ : PUC or Any Degree
8088647887

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಹೆಚ್.ಡಿ.ಕೋಟೆಯಲ್ಲಿ ಗಾಂಜಾ, ಡ್ರಗ್ಸ್, ಲಾಟರಿ ಹಾವಳಿ

ಗಾಂಜಾ ನಶೆಯಲ್ಲಿ ದೊಣ್ಣೆಯಿಂದ ಹೊಡೆದು ಯುವಕನ ಕೊಲೆ

ಹೆಚ್.ಡಿ.ಕೋಟೆ: ಕೇರಳ ರಾಜ್ಯದ ಗಡಿ ಪ್ರದೇಶವಾದ ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಗಾಂಜಾ, ಡ್ರಗ್ಸ್ ಮತ್ತು ಕೇರಳ ರಾಜ್ಯ ಲಾಟರಿ ಸೇರಿದಂತೆ ಮಾದಕ ವಸ್ತುಗಳ ಹಾವಳಿಯಿಂದ ಸಮಾಜ ಘಾತುಕ ಕೃತ್ಯಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಇದೀಗ ಗಾಂಜಾ ನಶೆಯಲ್ಲಿ ಯುವಕನೊಬ್ಬನನ್ನು ಕೊಲೆ ಮಾಡಲಾಗಿದೆ. ಈ ಘಟನೆ ಪಟ್ಟಣದ ಮುಸ್ಲಿಂ ಬ್ಲಾಕ್‌ನಲ್ಲಿ ಸಂಭವಿಸಿದೆ.

ಪಟ್ಟಣದ ಮುಸ್ಲಿಂ ಬ್ಲಾಕ್ ನಿವಾಸಿ ಕಲಾಂ (21) ಕೊಲೆಯಾದ ದುರ್ದೈವಿ. ಕೊಲೆಗೈದ ತವೀದ್ ತಲೆ ಮರೆಸಿಕೊಂಡಿದ್ದಾನೆ.



ಕಲಾಂ

ಪಟ್ಟಣದಲ್ಲಿ ಗಾಂಜಾ, ಡ್ರಗ್ಸ್ ಸೇರಿದಂತೆ ಅಪಾರ ಪ್ರಮಾಣದ ಮಾದಕ ವಸ್ತುಗಳ ಮಾರಾಟ ಮತ್ತು ಸೇವನೆ ಎಗ್ಗಿಲ್ಲದೆ ನಡೆಯುತ್ತಿದ್ದು, ಎಲ್ಲಾ ಗೊತ್ತಿದ್ದರೂ ಪೊಲೀಸರು ಕಣ್ಮುಚ್ಚಿ ಕುಳಿತಿರುವುದೇ ಇಂತಹ ಘಟನೆಗಳಿಗೆ ಕಾರಣ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಳೆದ ಒಂದು ತಿಂಗಳ ಹಿಂದೆ ಪಟ್ಟಣದಲ್ಲಿ ಯುವಕರು, ರಸ್ತೆ ಬದಿಯಲ್ಲಿ ಕುಳಿತು ಗಾಂಜಾ ಸೇವಿಸುತ್ತಿದ್ದರು. ಇದನ್ನು ಕಂಡ ದಾರಿ ಹೋಕರೊಬ್ಬರು ಗಾಂಜಾ ಸೇವನೆ ಮಾಡುವುದು ತಪ್ಪು ಎಂದು ತಿಳಿ ಹೇಳಿದ್ದಾರೆ. ಇದರಿಂದ ರೊಚ್ಚಿಗೆದ್ದ ಯುವಕರು ತಿಳಿ ಹೇಳಲು ಬಂದ ವ್ಯಕ್ತಿಯ ಮೇಲೆ ಹಲ್ಲೆ ಮಾಡಲು ಯತ್ನಿಸಿದ್ದಾರೆ. ಪಟ್ಟಣದಲ್ಲಿ ಆಗಾಗ ಈ ರೀತಿಯ ಗಲಾಟೆ, ಹೊಡೆದಾಟಗಳು ನಡೆಯುತ್ತಿದ್ದರೂ ಪೊಲೀಸರು ಮೌನ ವಹಿಸಿದ್ದಾರೆ.

ಮುಸ್ಲಿಂ ಬ್ಲಾಕ್ ಮಸೀದಿ ಹಿಂಭಾಗ ಮಂಗಳವಾರ ರಾತ್ರಿ ಗಾಂಜಾ ನಶೆಯ ಮತ್ತಿನಲ್ಲಿದ್ದ ಕಲಾಂ ಮತ್ತು ತವೀದ್ ನಡುವೆ ಗಲಾಟೆಯಾಗಿದೆ. ಈ ವೇಳೆ ತವೀದ್ ಕಲಾಂಗೆ ತಲೆ ಭಾಗಕ್ಕೆ ದೊಣ್ಣೆ ಯಿಂದ ಹೊಡೆದು ಪರಾರಿಯಾಗಿದ್ದಾನೆ ಎನ್ನಲಾಗಿದೆ. ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡುತ್ತಿದ್ದ ಕಲಾಂನನ್ನು ಸ್ಥಳೀಯರು ಹೆಚ್.ಡಿ.ಕೋಟೆ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ತುರ್ತು ಚಿಕಿತ್ಸೆ ಕೊಡಿಸಿ ನಂತರ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ದಾಖಲಿಸಿದ್ದಾರೆ. ಆದರೆ ಚಿಕಿತ್ಸೆ ಫಲಕಾರಿಯಾಗದೆ ಕಲಾಂ ಕೊನೆಯುಸಿರು ಎಳೆದಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.



ತವೀದ್

ಎಸ್‌ಪಿ ವಿಷ್ಣುವರ್ಧನ್, ಡಿವೈಎಸ್ಪಿ ರವಿ, ಇನ್ಸ್‌ಪೆಕ್ಟರ್ ಗಂಗಾಧರ್, ಸಬ್‌ಇನ್ಸ್‌ಪೆಕ್ಟರ್‌ಗಳಾದ ಚಿಕ್ಕನಾಯಕ, ಸುರೇಶ್ ನಾಯಕ್ ಹಾಗೂ ಸಿಬ್ಬಂದಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಜಗಳ ಆಡುವ ಸಂದರ್ಭದಲ್ಲಿ ಇದ್ದಂತಹ ವ್ಯಕ್ತಿಗಳನ್ನು ವಶಕ್ಕೆ ಪಡೆದು ತನಿಖೆ ನಡೆಸುತ್ತಿದ್ದಾರೆ. ತಲೆಮರೆಸಿಕೊಂಡಿರುವ ಕೊಲೆ ಆರೋಪಿಯನ್ನು ಹಿಡಿಯಲು ಪೊಲೀಸರು ಬಲೆ ಬೀಸಿದ್ದಾರೆ. ಈ ಸಂಬಂಧ ಹೆಚ್.ಡಿ.ಕೋಟೆ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ವೇಳೆ ಡಿವೈಎಸ್ಪಿ ರವಿ ಮಾತನಾಡಿ ಒಬ್ಬರಿಗೊಬ್ಬರು ಪರಸ್ಪರ ಜಗಳವಾಡಿಕೊಂಡಿದ್ದಾರೆ. ಕಲಾಂ ಎಂಬ ವ್ಯಕ್ತಿ ತಲೆಗೆ ತವೀದ್ ಎಂಬಾತ ಬಲವಾಗಿ ಹೊಡೆದಿದ್ದಾನೆ. ಇದರಿಂದ ಆ ವ್ಯಕ್ತಿ ಸಾವನ್ನಪ್ಪಿದ್ದಾರೆ ಎಂದರು.

ಕಂಡ ಕಂಡಲ್ಲಿ ಕಸ ಹಾಕಿದರೆ ದಂಡ ಖಚಿತ

ಕಸದ ಕೊಂಪೆಯಾಗಿದ್ದ ತಿ.ನರಸೀಪುರದ ಸಾರ್ವಜನಿಕ ಆಸ್ಪತ್ರೆ ರಸ್ತೆಯಲ್ಲಿ ಸ್ವಚ್ಛತಾ ಕಾರ್ಯ ಆರಂಭ

ತಿ.ನರಸೀಪುರ, ಡಿ.17– ತಿ.ನರಸೀಪುರ ಪಟ್ಟಣದಲ್ಲಿ ಕಂಡ ಕಂಡಲ್ಲಿ ಕಸ ಹಾಕಿದರೆ ದಂಡ ವಿಧಿಸಲಾಗುವುದು ಎಂದು ತಿ.ನರಸೀಪುರ ಪುರಸಭೆಯ ಮುಖ್ಯಾಧಿಕಾರಿ ಶ್ರೀನಿವಾಸ್ ಎಚ್ಚರಿಕೆ ನೀಡಿದ್ದಾರೆ.



ಶ್ರೀನಿವಾಸ್

ಸಾರ್ವಜನಿಕರು ಆಸ್ಪತ್ರೆಯ ರಸ್ತೆಯ ಆರ್ಯ ಮಹಲ್ ಕಲ್ಯಾಣ ಮಂಟಪದ ಬಳಿ ಕಸ ಹಾಕುತ್ತಿರುವುದರಿಂದ ಕಸದ ಕೊಂಪೆಯಾಗಿದ್ದ ಸ್ಥಳದಲ್ಲಿ ಸ್ವಚ್ಛತಾ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಈ ಎಚ್ಚರಿಕೆ ನೀಡಿದರು.

ಈ ರಸ್ತೆಯಲ್ಲಿ ಸಾರ್ವಜನಿಕ ಆಸ್ಪತ್ರೆ ಸೇರಿದಂತೆ ಇನ್ನಿತರ ಖಾಸಗಿ ಆಸ್ಪತ್ರೆಗಳಿದ್ದು, ಸಾರ್ವಜನಿಕರು ತಮ್ಮ ಮನೆಯ ಕಸ–ಕಡ್ಡಿಗಳು, ತ್ಯಾಜ್ಯಗಳನ್ನು ತಂದು ಸುರಿಯುತ್ತಿದ್ದು, ಆಸ್ಪತ್ರೆ ರಸ್ತೆ ರೋಗ–ರುಜಿನಗಳ ತಾಣವಾಗಿ ಮಾರ್ಪಟ್ಟಿತ್ತು ಜನರು ಆಸ್ಪತ್ರೆಗೆ ಹೋಗುವಾಗ ಮತ್ತು ಬರುವಾಗ ಮೂಗು ಮುಚ್ಚಿಕೊಂಡು ತಿರುಗಾಡಬೇಕಾದ ದುಸ್ಥಿತಿಯಿತ್ತು.

ಇದನ್ನು ಮನಗಂಡ ಪುರಸಭಾ ಮುಖ್ಯಾಧಿಕಾರಿ ಶ್ರೀನಿವಾಸ, ಆರೋಗ್ಯಾಧಿಕಾರಿ ಮತ್ತು ಸಿಬ್ಬಂದಿಗಳ ಜೊತೆ ಬುಧವಾರ ಬೆಳಗ್ಗೆ ಈ ರಸ್ತೆಗೆ ಆಗಮಿಸಿ ಕೊಳೆತು ನಾರುತ್ತಿದ್ದ ಕಸವನ್ನು ತೆರವುಗೊಳಿಸಿ, ಸಂಪೂರ್ಣ ಸ್ವಚ್ಛಗೊಳಿಸಿ ಈ ಎಚ್ಚರಿಕೆ ನೀಡಿದ್ದಾರೆ.

ಪ್ರತಿನಿತ್ಯ ಪಟ್ಟಣದ ಎಲ್ಲಾ ಬಡಾವಣೆಗಳಿಗೂ ಕಸ ಸಂಗ್ರಹಿಸುವ ವಾಹನಗಳು ಮನೆ–ಮನೆಗಳಿಗೆ ತೆರಳಿ ಕಸ ಸಂಗ್ರಹಿಸುತ್ತಿದ್ದು, ಸಾರ್ವಜನಿಕರು ಹಸಿ ಮತ್ತು ಒಣ ಕಸವನ್ನು ವಿಂಗಡಿಸಿ ಕಸ ಸಂಗ್ರಹಿಸುವವರಿಗೆ ಕೊಡುವ ಮೂಲಕ ಪಟ್ಟಣದಲ್ಲಿ ಸ್ವಚ್ಛತೆ ಕಾಪಾಡಲು ನೆರವಾಗಬೇಕು ಎಂದು ಮನವಿ ಮಾಡಿದ ಅವರು, ಇಷ್ಟಾದರೂ ಎಚ್ಚರಿಕೆ ಉಲ್ಲಂಘಿಸಿ ಕಸ ಹಾಕಿದರೆ ದಂಡ ಖಚಿತ ಎಂದರು.



ತಿ.ನರಸೀಪುರದ ಆಸ್ಪತ್ರೆ ರಸ್ತೆಯಲ್ಲಿ ಸ್ವಚ್ಛತಾ ಕಾರ್ಯ ಕೈಗೊಂಡಿರುವುದು.

ಅದರಲ್ಲೂ ಆಸ್ಪತ್ರೆ ರಸ್ತೆಯಲ್ಲಿ ಕಸ ಹಾಕುವುದನ್ನು ತಡೆಯಲು ನಮ್ಮ ಸಿಬ್ಬಂದಿ ನಿಗಾ ವಹಿಸಲಿದ್ದಾರೆ. ಅಂತಹವರು ಎಷ್ಟು ಪ್ರಭಾವಿಗಳಾದರೂ, ಮುಲಾಜಿಲ್ಲದೆ ದಂಡ ವಿಧಿಸಲಾಗುವುದು ಎಂದ ಅವರು ಈ ವಿಚಾರದಲ್ಲಿ ಸಾರ್ವಜನಿಕರ ಸಹಕಾರ ಅಗತ್ಯ ಎಂದು ಮನವಿ ಮಾಡಿದರು.

ಶಿವಕುಮಾರ್ ಎಂಬುವವರು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಡಿ.15ರಂದು ಸರ್ಕಾರಿ ಆಸ್ಪತ್ರೆ ರಸ್ತೆಯಲ್ಲಿ ಕಸದ ರಾಶಿ ಬಿದ್ದಿರುವ ಕುರಿತು ವಿಡಿಯೋ ಹರಿಬಿಟ್ಟಿದ್ದು ಇದನ್ನು ಅನುಸರಿಸಿ ಈ ದಿನ ಮುಖ್ಯಾಧಿಕಾರಿ, ಆರೋಗ್ಯ ನಿರೀಕ್ಷಕರಾದ ಚಂಪಶ್ರೀ ಹಾಗೂ ಮೇಸ್ತ್ರಿ ಸೋಮ ಅವರುಗಳು ಸ್ಥಳಕ್ಕೆ ಭೇಟಿ ನೀಡಿ ಜೆಸಿಬಿ ಹಾಗೂ ಪೌರಕಾರ್ಮಿಕರ ಸಹಾಯದಿಂದ ರಸ್ತೆ ಸ್ವಚ್ಛಗೊಳಿಸುತ್ತಿದ್ದರು. ಈ ವೇಳೆ ಅಶೋಕ ಎಂಬಾತ ತನ್ನ ಆಟೋ (ಕೆಎ 10–9708) ದಲ್ಲಿ ಕಸ ತಂದು ಅಲ್ಲಿಯೇ ಸುರಿಯಲು ಮುಂದಾದ ವೇಳೆ ಆರೋಗ್ಯ ನಿರೀಕ್ಷಕರು ಮತ್ತು ಪೌರಕಾರ್ಮಿಕರು ಆತನನ್ನು ಹಿಡಿದು 2000ರೂ. ದಂಡ ಹಾಕಿದ್ದು ತಿಳುವಳಿಕೆ ನೀಡಿ ಕಳುಹಿಸಿದರು.

ಶಾಮನೂರು ನಿಧನದಿಂದ ಸಮಾಜಕ್ಕೆ ಅಪಾರ ನಷ್ಟ

ನಂಜನಗೂಡು: ಕರ್ನಾಟಕ ರಾಜ್ಯ ಕಂಡ ಧೀಮಂತ ರಾಜಕಾರಣಿ, ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪ ಅವರ ಅಗಲಿಕೆ ಸಮಾಜಕ್ಕೆ ತುಂಬಲಾರದ ನಷ್ಟ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಎಸ್.ಎಂ. ಕೆಂಪಣ್ಣ ಸಂತಾಪ ಸೂಚಿಸಿದ್ದಾರೆ.

ನಗರದ ಊಟಿ ರಸ್ತೆಯಲ್ಲಿರುವ ಕಬ್ಬಹಳ್ಳಿ ವಿದ್ಯಾರ್ಥಿ ನಿಲಯದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ವತಿಯಿಂದ ಏರ್ಪಡಿಸಲಾಗಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಅವರು ಮಾತನಾಡಿದರು.

ಶಾಮನೂರು ಶಿವಶಂಕರಪ್ಪ ಅವರು ಕಾಂಗ್ರೆಸ್ ಪಕ್ಷದಲ್ಲಿದ್ದರೂ ಸಹ ಸಮಾಜದ ಪರವಾಗಿ ಗಟ್ಟಿ ಧ್ವನಿಯಾಗಿದ್ದರು, ಯಾವುದೇ ಪಕ್ಷಗಳು ಸಮಾಜದ ವಿರುದ್ಧವಾಗಿ ನಡೆದುಕೊಂಡಲ್ಲಿ ತೀಕ್ಷ್ಣವಾಗಿ ಖಂಡಿಸುತ್ತಿದ್ದರು, ಅಖಿಲ ಭಾರತ ವೀರಶೈವ ಮಹಾಸಭಾದ ಅತ್ಯಂತ ದೀರ್ಘಕಾಲದ ಅಧ್ಯಕ್ಷರಾಗಿ ಸಮಾಜಕ್ಕೆ ಸಲ್ಲಿಸಿದ ಸೇವೆ ಸ್ಮರಣೀಯವಾಗಿದೆ, ಜೊತೆಗೆ ಶ್ರೇಷ್ಠ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರಾಗಿ ಅನೇಕರಿಗೆ ಉದ್ಯೋಗ ದೊರಕಿಸಿಕೊಟ್ಟವರು, ಅಲ್ಲದೆ ರಾಜಕೀಯ ಶೈಕ್ಷಣಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಅವರು ಮಾಡಿದ ಸಾಧನೆ ಅನುಕರಣೀಯವಾದದ್ದು. ಅವರ ಅಗಲಿಕೆ ರಾಜ್ಯ ರಾಜಕಾರಣಕ್ಕೆ ಮತ್ತು ವೀರಶೈವ ಮಹಾಸಭಾಕ್ಕೆ ತುಂಬಲಾ ರದ ನಷ್ಟವಾಗಿದೆ ಎಂದು ಹೇಳಿದರು .



ಅಖಿಲ ಭಾರತ ವೀರಶೈವ ಮಹಾಸಭಾ ವತಿಯಿಂದ ಶ್ರದ್ಧಾಂಜಲಿ ಸಭೆ ನಡೆಸಲಾಯಿತು.

ಇದೇ ಸಂದರ್ಭದಲ್ಲಿ ಯುವ ಘಟಕದ ಅಧ್ಯಕ್ಷ ಮಹದೇವಸ್ವಾಮಿ, ಖಜಾಂಚಿಗಳಾದ ಎಂ.ಪಿ.ನಟರಾಜು, ಉಪಾಧ್ಯಕ್ಷರಾದ ಸುಧಾ ಚಿಕ್ಕ ಮಾದಪ್ಪ, ಕಾರ್ಯದರ್ಶಿಗಳಾದ ಹೆಗ್ಗಡಹಳ್ಳಿ ರೇವಣ್ಣ, ನಿರ್ದೇಶಕರುಗಳಾದ ನಂಜಮ್ಮಣಿ, ನಂದಿನಿ, ಕೋಮಲ, ಗೀತಾ, ಮಂಜುಳ ರಾಜೇಶ್, ದಳಪತಿ ಮಹದೇವಪ್ಪ, ಕಸುವಿನಹಳ್ಳಿ ವೃಷಭೇಂದ್ರ, ಮಹಿಳಾ ಘಟಕದ ಅಧ್ಯಕ್ಷರಾದ ಶಶಿಕಲಾ, ಸುಬ್ಬಮಣ್ಣಿ, ಮಂಗಳ, ಶಿಕ್ಷಕರ ಸಂಘದ ಮಹೇಶ್, ಕುಮಾರಸ್ವಾಮಿ ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನ

ನಂಜನಗೂಡು: ಭಗೀರಥ ಉಪ್ಪಾರ ನೌಕರರ ಸಂಘದ ವತಿಯಿಂದ ನಂಜನಗೂಡು ತಾಲೂಕಿನ ಉಪ್ಪಾರ ಜನಾಂಗದ ವಿದ್ಯಾರ್ಥಿಗಳಿಗೆ 2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ 85ಕ್ಕಿಂತ ಹೆಚ್ಚು ಅಂಕ ಪಡೆದಿರುವ ಪ್ರತಿಭಾನ್ವಿತರಿಗೆ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ನಗರದ ಬಸವನಗುಡಿ ಬ್ಲಾಕ್‌ನಲ್ಲಿರುವ ಆಸರೆ, ಮನೆ ನಂ 4447, ಕೆ.ಬಿ.ಚನ್ನಬಸವ ಶೆಟ್ಟಿ ನಂಜನಗೂಡು ಇಲ್ಲಿಗೆ ಅರ್ಜಿ ಸಲ್ಲಿಸುವಂತೆ ಕೋರಲಾಗಿದೆ.

ಮಾನವೀಯ ಸಂಬಂಧಗಳನ್ನು ಗಟ್ಟಿಗೊಳಿಸಬೇಕಿದೆ

ತಿ.ನರಸೀಪುರ, ಡಿ.17– ನಾನು ನಿವೃತ್ತನಾದೆ. ನನಗೆ ವಯಸ್ಸಾಯ್ತು ಎಂಬ ಭಾವನೆಯಿಂದ ಹೊರ ಬಂದು ಸದಾ ಲವಲವಿಕೆಯಿಂದ ಬದುಕು ನಡೆಸಬೇಕು. ನಾವೆಲ್ಲರೂ ಸೇರಿ ಮಾನವೀಯ ಸಂಬಂಧಗಳನ್ನು ಗಟ್ಟಿಗೊಳಿಸುವ ಕಾರ್ಯ ಮಾಡಬೇಕಿದೆ ಎಂದು ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ತಿ.ನರಸೀಪುರ ತಾಲೂಕು ಶಾಖೆಯ ಕಾರ್ಯದರ್ಶಿ ಎಸ್.ವೆಂಕಟರಮಣ ಸ್ವಾಮಿ ಕರೆ ನೀಡಿದರು.

ಪಟ್ಟಣದ ಕರ್ನಾಟಕ ರಾಜ್ಯ ನೌಕರರ ಸಂಘದ ಕಟ್ಟಡದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ ನಿವೃತ್ತ ನೌಕರರ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕೆಲಸದಿಂದ ನಿವೃತ್ತರಾದ ನಂತರವೂ ಸಮಾಜಕ್ಕೆ ಹೆಚ್ಚಿನದ್ದೇನ್ನಾದರೂ ಕೊಡಬೇಕು ಎಂಬ ತುಡಿತ ಇರಬೇಕು. ಸಮಯ ವ್ಯರ್ಥ ಮಾಡದೇ ಯಾವುದಾದರು ಸೇವಾ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಬೇಕು ಎಂದರು.



ನಿವೃತ್ತ ನೌಕರರ ದಿನಾಚರಣೆ ಕಾರ್ಯಕ್ರಮವನ್ನು ಸಂಘದ ಅಧ್ಯಕ್ಷ ಎಂ.ಮಹದೇವಯ್ಯ ಉದ್ಘಾಟಿಸಿದರು.

ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಿವಶಂಕರ ಮೂರ್ತಿಯವರು ಸಂಘದ ಸಭೆಯಲ್ಲಿ ನಿರ್ಣಯ ಮಾಡಿ ನಿವೃತ್ತ ನೌಕರರ ಸಂಘಕ್ಕೆ ಕಟ್ಟಡ ಕಟ್ಟಿಕೊಳ್ಳಲು ಜಾಗ ನೀಡಿದ್ದಾರೆ. ತಾಂತ್ರಿಕ ಸಮಸ್ಯೆಯಿಂದ ರಿಜಿಸ್ಟರ್ ಆಗುತ್ತಿಲ್ಲವಾದರೂ ಕಟ್ಟಡ ಕಟ್ಟಲು ಯಾವುದೇ ತೊಂದರೆ ಇಲ್ಲ. ಸಚಿವರಾದ ಮಹದೇವಪ್ಪ ಹಾಗು ಸಂಸದ ಸುನೀಲ್ ಬೋಸ್ ಅವರು ಕಟ್ಟಡ ಕಟ್ಟಲು ಅನುದಾನ ನೀಡುವ ಭರವಸೆ ನೀಡಿದ್ದಾರೆ. ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಕಟ್ಟಡ ನಿರ್ಮಿಸಿಕೊಡುವ ಭರವಸೆ ನೀಡಿದ್ದಾರೆ. ಅವರು ಅನುದಾನ ನೀಡುತ್ತಾರೆ ಎಂದು ನಾವು ನಿರ್ಲಕ್ಷ್ಯ ಮಾಡದೇ ಅವರ ಅನುದಾನ ಪಡೆಯಲು ಮುಂದಾಗಬೇಕು ಎಂದರು.

ಸಂಘದ ಅಧ್ಯಕ್ಷ ಡಾ.ಎಂ.ಮಹದೇವಯ್ಯ ಮಾತನಾಡಿದರು. ಇದೇ ವೇಳೆ ಹಿರಿಯ ನಿವೃತ್ತ ನೌಕರರನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ವೇಳೆ ಎಂ.ಆರ್.ಪ್ರಭಾಮಣಿ, ಎಸ್.ಶಿವಣ್ಣ ಕೆಬ್ಬೆ ಹುಂಡಿ ಜೆ. ಸಿದ್ದೇಗೌಡ, ಎಂ.ಗೋವಿಂದರಾಜು, ಕೆ.ವೀರಯ್ಯ, ಕೆ.ಕೆಂಚಪ್ಪ, ಟಿ.ಕೆ.ಬಸವರಾಜು, ಬೋರಯ್ಯ, ಸಿ.ಲಿಂಗಯ್ಯ, ಎಂ.ಜವನಯ್ಯ, ಕೆ.ಕಲ್ಲಯ್ಯ, ಆರ್.ರಂಗದಾಸಯ್ಯ ಇದ್ದರು.

ಡಿ.20, ಹೆಚ್.ಡಿ.ಕೋಟೆಯಲ್ಲಿ ಅದ್ದೂರಿ ಹನುಮ ಜಯಂತಿ

ಹೆಚ್.ಡಿ.ಕೋಟೆ: ಪಟ್ಟಣದಲ್ಲಿ ಡಿ.20 ರಂದು 8ನೇ ವರ್ಷದ ಹನುಮ ಜಯಂತಿ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಚರಿಸಲಾಗುವುದು ಎಂದು ಹನುಮ ಸೇವಾ ಸಮಿತಿ ಅಧ್ಯಕ್ಷ ಬಿಡುಗಲು ರಾಜು ತಿಳಿಸಿದರು.

ಪಟ್ಟಣದ ಪತ್ರಕರ್ತರ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಹನುಮ ಜಯಂತಿ ಕಾರ್ಯಕ್ರಮವನ್ನು ಪಕ್ಷಾತೀತವಾಗಿ, ಜಾತ್ಯಾತೀತವಾಗಿ, ವಿಜೃಂಭಣೆಯಿಂದ ಆಚರಿಸಲಾಗುವುದು ಎಂದರು.

ತಾಲೂಕಿನಾದ್ಯಂತ ಪ್ರಚಾರ ಮಾಡಲಾಗಿದೆ, ಕರಪತ್ರಗಳನ್ನು ಸಹ ಹಂಚಲಾಗಿದೆ, ಕಾರ್ಯಕ್ರಮದಲ್ಲಿ, ಗೌಡಗೆರೆ ಮಠದ ನಟರಾಜ ಸ್ವಾಮೀಜಿ, ಸರಗೂರು ಪಡುವಲ ವೀರಕ್ತ ಮಠದ ಮಹದೇವ ಸ್ವಾಮೀಜಿ, ಶಾಸಕ ಅನಿಲ್ ಚಿಕ್ಕಮಾದು, ಸಂಸದ ಸುನಿಲ್ ಬೋಸ್, ಮಾಜಿ ಸಚಿವ ಕೋಟೆ ಎಂ. ಶಿವಣ್ಣ, ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಹಾಗೂ ವಿವಿಧ ಪಕ್ಷಗಳ ಮುಖಂಡರುಗಳು, ಸಾವಿರಾರು ಹನುಮ ಭಕ್ತಾದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಈಗಾಗಲೇ ಪಟ್ಟಣದಲ್ಲಿ ಕೇಸರಿ ಧ್ವಜ, ಪ್ರಮುಖ ಸ್ಥಳಗಳಲ್ಲಿ ಮೂರು ಸ್ವಾಗತ ಕಮಾನುಗಳನ್ನು ಹಾಕಲಾಗಿದ್ದು, ಕೇಸರಿ ಬಂಟಿಂಗ್ಸ್‌ಗಳಿಂದ ಪಟ್ಟಣವನ್ನು ಅಲಂಕರಿಸಲಾಗಿದ್ದು, ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ.

ಡಿ. 18ರಂದು ಬೆಳಿಗ್ಗೆ 8 ಗಂಟೆಯಿಂದ ಹನುಮ ಮಾಲಾಧಾರಣೆ ಮಾಡಿ ನಂತರ ಒಂಬತ್ತು ಗಂಟೆಗೆ ಪವಮಾನ ಹೋಮ ಏರ್ಪಡಿಸಲಾಗಿದೆ. ಡಿ.20ರಂದು ಬೆಳಗ್ಗೆ 11 ಗಂಟೆಗೆ ಪಟ್ಟಣದ ಕನಕ ಭವನದ ಆವರಣದಿಂದ, ಶ್ರೀರಾಮ, ಹನುಮಮೂರ್ತಿಗಳಿಗೆ, ಗಣ್ಯರಿಂದ ಪುಷ್ಪಾರ್ಚನೆ ನೆರವೇರಲಿದೆ. ವಿವಿಧ ಜಾನಪದ ಕಲಾ ತಂಡಗಳೊಂದಿಗೆ, ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೊರಟು ವರದರಾಜ ಸ್ವಾಮಿ ದೇವಾಲಯದಲ್ಲಿ ಸಮಾವೇಶಗೊಳ್ಳಲಿದೆ. ಆಗಮಿಸಿದ ಭಕ್ತಾದಿಗಳಿಗೆ ಪ್ರಸಾದ ವಿತರಿಸಲಾಗುವುದು ಎಂದರು.



ಹೆಚ್.ಡಿ.ಕೋಟೆಯಲ್ಲಿ ಡಿ.20ರಂದು ನಡೆಯುವ ಹನುಮ ಜಯಂತಿ ಕಾರ್ಯಕ್ರಮದ ಪೋಸ್ಟರ್ ಅನ್ನು ಬಿಡುಗಡೆ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಮಾಜಿ ಉಪಾಧ್ಯಕ್ಷ ಚಂದ್ರಮೌಳಿ ಮಾತನಾಡಿದರು. ಗೋಷ್ಠಿಯಲ್ಲಿ ಹನುಮ ಸೇವಾ ಸಮಿತಿ ಉಪಾಧ್ಯಕ್ಷರುಗಳಾದ ಮಗ್ಗೆ ರೂಪೇಶ್, ಪ್ರಧಾನ ಕಾರ್ಯದರ್ಶಿ ಮುತ್ತುರಾಜ್, ಕೋಶಾಧ್ಯಕ್ಷ ಕನ್ನಡ ಪ್ರಮೋದ್, ಮಾಜಿ ಅಧ್ಯಕ್ಷರುಗಳಾದ ಡೈರಿ ಶ್ರೀಕಾಂತ್, ಚಂದ್ರಮೌಳಿ, ಜಯಂತ್, ನಂದೀಶ್, ಪ್ರಚಾರ ಸಮಿ ಸಂಚಾಲಕ ಸುಧಾಕರ್, ಕಾನೂನು ಸಲಹೆಗಾರ ನಾಗೇಶ್, ಹಣಕಾಸು ಸಮಿತಿ ಸಹ ಸಂಚಾಲಕ ಸುರೇಶ್, ಪ್ರಶಾಂತ್, ಅಕ್ಷಯ್, ಮಂಜುನಾಥ್, ಮಹೇಶ, ಸಂತೋಷ್, ಅಶೋಕ್ ಇದ್ದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಸಂಘದಿಂದ ಮಹಿಳಾ ಸಬಲೀಕರಣಕ್ಕೆ ಹೆಚ್ಚು ಒತ್ತು



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಜ್ಞಾನ ವಿಕಾಸ ಕಾರ್ಯಕ್ರಮ ನಡೆಯಿತು.

ಸಾಲಿಗ್ರಾಮ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡುವ ಜೊತೆಗೆ ಹಲವಾರು ಕ್ಷೇತ್ರಗಳಲ್ಲಿ ಉನ್ನತ ಸಾಧನೆ ಮಾಡಲು ಹತ್ತು ಹಲವು ಸೌಲಭ್ಯಗಳನ್ನು ಕಲ್ಪಿಸುತ್ತಿದೆ ಎಂದು ಸಂಸ್ಥೆಯ ಜಿಲ್ಲಾ ನಿರ್ದೇಶಕಿ ಮಮತಾರಾವ್ ಹೇಳಿದರು.

ಸಾಲಿಗ್ರಾಮ ಪಟ್ಟಣದ ಬಾಹುಬಲಿ ಸಮುದಾಯ ಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ನಡೆದ ತಾಲೂಕು ಮಟ್ಟದ ಮಹಿಳಾ ವಿಚಾರ ಗೋಷ್ಠಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು. ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿಯೂ ಉನ್ನತ ಸಾಧನೆ ಮಾಡುವ ಮೂಲಕ ಸಮಾಜದ ಮುಖ್ಯ ವಾಹಿನಿಗೆ ಬರುತ್ತಿರುವುದು ಸಂತಸದ ವಿಚಾರವಾಗಿದ್ದು, ಮಹಿಳೆಯರು ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿ ಕಾನೂನುಗಳನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಿಕೊಂಡಾಗ ಮಾತ್ರ ಯಶಸ್ಸು ಕಾಣಲು ಸಾಧ್ಯ ಎಂದು ಹೇಳಿದರು.

ನಂತರ ವೈದ್ಯೆ ಸೌಜನ್ಯ ಮೋಹನ್ ಮಾತನಾಡಿದರು. ಈ ಸಂದರ್ಭದಲ್ಲಿ ಉಷಾ ಸುರೇಶ್, ತಾಲೂಕು ಯೋಜನಾಧಿಕಾರಿ ಉಮೇಶ್ ಪೂಜಾರಿ, ಜನ ಜಾಗೃತಿ ವೇದಿಕೆ ಸದಸ್ಯರಾದ ಮಧುಚಂದ್ರ, ಬಾಲಮನೋಹರ್, ಜ್ಞಾನ ವಿಕಾಸ ಸಮಾನ್ವಯಧಿಕಾರಿ ಸುಜಾತ ಸೇರಿದಂತೆ ಸಂಘದ ಪ್ರತಿನಿಧಿಗಳು ಹಾಗೂ ಸಂಘದ ಸದಸ್ಯೆಯರು ಸೇರಿದಂತೆ ಮತ್ತಿತರರು ಇದ್ದರು.

ಕಲೆ, ನೃತ್ಯ ಹೊಂದಿರುವ ನಾಟಕಗಳು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ದಿಕ್ಸೂಚಿ

ಸರಗೂರು: ಸಂಗೀತ, ಕಲೆ, ನೃತ್ಯ ಒಳಗೊಂಡಿರುವ ನಾಟಕ, ಬದುಕನ್ನು ಕಟ್ಟಿಕೊಡುವುದರ ಜೊತೆಗೆ ಸಾಮರಸ್ಯ ಬೆಳೆಸುತ್ತದೆ ಎಂದು ಚಲನಚಿತ್ರ ನಟರಾದ ಟಿ.ಎಸ್. ಹನುಮಂತೇಗೌಡ ತಿಳಿಸಿದರು.

ಸರಗೂರು ಪಟ್ಟಣದ ಶಿವರಾತ್ರೀಶ್ವರ ಶಿನಾನುಭವ ಮಂದಿರದಲ್ಲಿ ಬುಧವಾರ ನಡೆದ ಜೆಎಸ್‌ಎಸ್ ರಂಗೋತ್ಸವ 2025 ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಾಟಕ ಒಂದು ಸಂಕೀರ್ಣ ಕಲೆಯಾಗಿದ್ದು, ಅದಕ್ಕೆ ಜಾತಿಭೇದದ ಅಡ್ಡ ಗೋಡೆಗಳಿಲ್ಲ, ಅದು ನಮ್ಮ ಬದುಕನ್ನು ಕಟ್ಟಿಕೊಡುವುದರ ಜೊತೆಗೆ ದೂರವಾಗಿರುವ ಮನಸ್ಸುಗಳನ್ನು ಒಂದು ಗೂಡಿಸಲಿದೆ. ನಾವು ಹೇಗೆ ಮಾತನಾಡಬೇಕು ಎಂದು ಕಲಿಸಿಕೊಡುತ್ತದೆ. ನೀವು ಪ್ರಸ್ತುತ ಗಳಿಸುತ್ತಿರುವ ಶಿಕ್ಷಣ ಅಂಕಗಳಿಕೆಗೆ ಮಾತ್ರ ಸೀಮಿತವಾಗಿದ್ದು, ಅದು ಪೂರ್ಣ ಸಾಧನೆಯಲ್ಲ. ನಾಟಕ, ನೃತ್ಯ ಸೇರಿದಂತೆ ಯಾವುದಾದರೂ ಒಂದು ಅಥವಾ ಎರಡರಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಾಧನೆ ಮಾಡಬೇಕು ಎಂದರು.

ಸಾಹಿತಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಡಾ.ವೈ.ಡಿ ರಾಜಣ್ಣ ಮಾತನಾಡಿ ನಿರ್ದಿಷ್ಟ ಕಥಾ ವಸ್ತುವಿನ ಜೊತೆ ಸಂಭಾಷಣೆ ಸಂಗೀತ ವೇಷ–ಭೂಷಣರ ಮೂಲಕ ಪ್ರಭಾವ ಬೀರುವ ನಾಟಕಗಳು ಮನಸ್ಸಿಗೆ ಉಲ್ಲಾಸ ನೀಡುತ್ತವೆ. ಸಮಸ್ಯೆ ಎದುರಾದಾಗ ಆದರಿಂದ ಹೊರ ಬರುವ ಸಾಧ್ಯತೆಗಳನ್ನು ಸೂಚಿಸುತ್ತವೆ.. ಹವ್ಯಾಸಿ ತಂಡದ ಹಲವು ಸಾಮಾಜಿಕ ನಾಟಕಗಳು ಸಮಾಜದ ವರ್ತಮಾನದ ಸಮಸ್ಯೆಗಳ ಬಗೆಗೆ ಬೆಳಕು ಚೆಲ್ಲುತ್ತದೆ.



ಜೆಎಸ್‌ಎಸ್ ರಂಗೋತ್ಸವ ಕಾರ್ಯಕ್ರಮವನ್ನು ಚಂಡೆ ಬಾರಿಸುವ ಮುಖಾಂತರ ಚಿಲಚಿತ್ರ ಕಲಾವಿದರಾದ ಟಿ.ಎಸ್.ಹನುಮಂತೇಗೌಡ ಉದ್ಘಾಟಿಸಿದರು.

ಜೆಎಸ್‌ಎಸ್ ರಂಗೋತ್ಸವ ಪರಿಕಲ್ಪನೆ ಕುರಿತು ಚಂದ್ರಶೇಖರಾಚಾರ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಕೆ.ಎಸ್.ವೀರಭದ್ರಪ್ಪ, ವೀರಶೈವ ಸಮಾಜದ ಟೌನ್ ಅಧ್ಯಕ್ಷ ಎಸ್.ಎನ್.ಮೋಹನ್ ಕುಮಾರ್ ಮಾತನಾಡಿದರು.

ರಂಗೋತ್ಸವದಲ್ಲಿ ಕೃಷ್ಣಮೂರ್ತಿ ಬೆಳಗೆರೆ ರಚನೆಯ ಜೀವನ್ ಕುಮಾರ್ ಬಿ. ಹೆಗ್ಗೋಡು ರಚನೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆ ಶಿಕ್ಷಕರ ಬಡಾವಣೆ ಮೈಸೂರು ಇವರು ಅಂಗಭಂಗದ ರಾಜ್ಯದಲ್ಲಿ ಎಂಬ ನಾಟಕವನ್ನು ಪ್ರದರ್ಶಿಸಿ ಜನರನ್ನು ರಂಜಿಸಿದರು.

ಮೂರು ನಾಟಕಗಳಿಗೆ ಚಂದ್ರಶೇಖರಾಚಾರ್ ಹೆಗ್ಗೋಡಾರ ಸಂಗೀತ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಬಸವಬಳಗದ ಅಧ್ಯಕ್ಷ ಹಂಚೀಪುರ ಗಣಪತಿ, ಸ್ನೇಹ ಸ್ತ್ರೀ ಸಮಾಜದ ಸದಸ್ಯರು, ಕಾಲೇಜು ಪ್ರಾಂಶುಪಾಲ ಕೆ.ಎಸ್.ಮಹದೇವಸ್ವಾಮಿ, ಪ್ರೌಢಶಾಲ ಮುಖ್ಯಶಿಕ್ಷಕರಾದ ನಾಗರತ್ನ, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷರಾದ ಜಯಣ್ಣ ಸುರೇಶ್, ಕೃಷ್ಣಮೂರ್ತಿ, ಅಶೋಕ್ ಇದ್ದರು.

ರಾಜಕಾರಣಿಗಳು ಯಜಮಾನರಲ್ಲ, ರೈತರ ಗುಲಾಮರು



ರಾಜ್ಯ ಕಬ್ಬು ಬೆಳೆಗಾರರ ರೈತ ಸಂಘದ ರಾಜ್ಯಾಧ್ಯಕ್ಷ ಹಾಡ್ಯ ರವಿ ಮಾತನಾಡುತ್ತಿರುವುದು.

ಮಲ್ಕುಂಡಿ: ರೈತರು ತಮ್ಮ ಹಕ್ಕನ್ನು ಪಡೆಯಲು ಮತ್ತು ದೇಶದ ಜ್ವಲಂತ ಸಮಸ್ಯೆಗಳ ವಿರುದ್ಧ ಸಂಘಟಿತರಾಗಿ ಹೋರಾಡಬೇಕಿದೆ ಎಂದು ಕರೆ ನೀಡಿದ ರಾಜ್ಯ ಕಬ್ಬು ಬೆಳೆಗಾರರ ರೈತ ಸಂಘದ ರಾಜ್ಯಾಧ್ಯಕ್ಷ ಹಾಡ್ಯ ರವಿ ರಾಜಕಾರಣಿಗಳು ನಮ್ಮ ಯಜಮಾನರಲ್ಲ. ಅವರು ರೈತರ ಗುಲಾಮರು ಎಂದರು.

ಸಮೀಪದ ದೇವರಾಯಶೆಟ್ಟಿಪುರ ಗ್ರಾಮದಲ್ಲಿ ಕರ್ನಾಟಕ ಕಬ್ಬು ಬೆಳೆಗಾರರ ರೈತ ಸಂಘದ ಗ್ರಾಮ ಘಟಕದ ನಾಮಫಲಕವನ್ನು ಅನಾವರಣಗೊಳಿಸಿ ಮಾತನಾಡಿದ ಅವರು ರೈತರ ಬೆಳೆಗಳಿಗೆ ಕನಿಷ್ಟ ಬೆಲೆ ನಿಗಧಿಯಾಗಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ರೈತ ವಿರೋಧಿ ಕಾಯ್ದೆಗಳನ್ನು ಜಾರಿ ಮಾಡಲು ಮುಂದಾದರೆ ಇಂತಹ ಜ್ವಲಂತ ಸಮಸ್ಯೆಗಳ ಹೋರಾಟ ಮಾಡಬೇಕಾದರೆ ರೈತರು ಸಂಘಟಿತರಾಗಿ ಒಗ್ಗಟಿನಿಂದ ಹೋರಾಡಬೇಕಿದೆ ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ರಾಜಕಾರಣಿಗಳು ಅನ್ನ ನೀಡುವ ರೈತರನ್ನು ಗುಲಾಮರಂತೆ ನಡೆಸಿಕೊಳ್ಳುತ್ತಿದ್ದಾರೆ ಎಂದರು.

ರಾಜಕಾರಣಿಗಳು ಯಜಮಾನರಲ್ಲ. ನಮ್ಮ ಸೇವಕರು ಎಂಬುದನ್ನು ಜನ ಸಾಮಾನ್ಯರಿಗೆ ಅರಿವು ಮೂಡಿಸುವ ಸಲುವಾಗಿ ಪ್ರತಿ ಗ್ರಾಮದಲ್ಲೂ ರೈತ ಸಂಘಟನೆಯ ಗ್ರಾಮ ಘಟಕವನ್ನು ತೆರೆದು ರೈತರಿಗೆ ಜಾಗೃತಿ ಮೂಡಿಸುವಂತಹ ಕೆಲಸದಲ್ಲಿ ನಿರತವಾಗಿದೆ ಎಂದರು.

ಈ ವೇಳೆ ಜಿಲ್ಲಾಧ್ಯಕ್ಷ ಚಿಕ್ಕಸ್ವಾಮಣ್ಣ, ತಾಲೂಕು ಸಂಘಟನಾ ಕಾರ್ಯದರ್ಶಿ ಸಿದ್ದ ರಾಜು, ವೃಷಭೇಂದ್ರ, ಮಹೇಶ್, ಪ್ರಭುಸ್ವಾಮಿ, ನಂಜಪ್ಪ, ಕೆಂಪಣ್ಣ ಗ್ರಾಮ ಘಟಕದ ಅಧ್ಯಕ್ಷ ಗಣೇಶ್ ಪ್ರಸಾದ್, ಗೌರವಾಧ್ಯಕ್ಷ ಲೋಕೇಶ್, ಉಪಾಧ್ಯಕ್ಷ ಮಧು, ಪ್ರಧಾನ ಕಾರ್ಯದರ್ಶಿ ಸಿದ್ದೇಶ್, ಮಂಜುನಾಥ್, ನಾಗೇಶ್, ಮಹೇಶ್ ಸೇರಿದಂತೆ ರೈತ ಮುಖಂಡರು ಮತ್ತು ಪ್ರಮುಖರು ಹಾಜರಿದ್ದರು.

ನಾಗರಹೊಳೆ ಆದಿವಾಸಿ ಕುಟುಂಬಗಳಿಗೆ ನೆರವು

100 ಬ್ಲ್ಯಾಂಕೆಟ್‌ಗಳು, 100 ತಟ್ಟೆ-ಲೋಟಗಳು, ಸೀರೆಗಳು, ಚಾಪೆಗಳು, ಟಿ.ಶರ್ಟ್‌ಗಳು, ನೈಟಿಗಳು ಸೇರಿದಂತೆ ಹಲವು ವಸ್ತುಗಳ ಕೊಡುಗೆ

ಹುಣಸೂರು, ಡಿ.17– ಸದಾ ಸಮಾಜಮುಖಿ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರ ನೇತೃತ್ವದ ಸ್ವಯಂ ಸೇವಾ ಸಂಸ್ಥೆಯಾದ ಮೈಸೂರಿನ ಸಂಸ್ಕೃತಿ ವುಮನ್ ಸ್ಫಿಯರ್ ಸಂಸ್ಥೆಯು ನಾಗರ ಹೊಳೆಯ ಅನ್ನಮಲುವಿನಲ್ಲಿ 'ವನಮಿತ್ರ' ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿ ಅರಣ್ಯ ಪ್ರದೇಶದಲ್ಲಿ ವಾಸಿಸುವ ಆದಿವಾಸಿ ಕುಟುಂಬಗಳಿಗೆ ನೆರವು ನೀಡಿದೆ.

ಆದಿವಾಸಿ ಸಮುದಾಯದ ಜೀವನ ಮಟ್ಟವನ್ನು ಸುಧಾರಿಸುವ ಉದ್ದೇಶದಿಂದ 100 ಬ್ಲ್ಯಾಂಕೆಟ್‌ಗಳು, 100 ಸ್ಟೀಲ್ ತಟ್ಟೆಗಳು ಹಾಗೂ ಲೋಟಗಳು, 100 ಸೀರೆಗಳು, 100 ಚಾಪೆಗಳು, 100 ಟೀ–ಶರ್ಟ್‌ಗಳು, 100 ನೈಟಿಗಳು, ಬಳೆಗಳು, ಹಣೆಗೆ ಹಚ್ಚುವ ಬಿಂದಿಗಳು, ಸ್ಯಾನಿಟರಿ ಪ್ಯಾಡ್‌ಗಳು, ಹಣ್ಣುಗಳು ಮತ್ತು ತಿಂಡಿಗಳನ್ನು ವಿತರಿಸಲಾಯಿತು. ಈ ನೆರವಿನಿಂದ ಆದಿವಾಸಿಗಳ ಕುಟುಂಬಗಳ ಮೊಗದಲ್ಲಿ ಸಂತೋಷ ಮತ್ತು ತೃಪ್ತಿ ಕಂಡುಬಂದಿತು. ಅವರು ಸಂಸ್ಥೆಯ ಕಾರ್ಯಕ್ಕೆ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸಿದರು.

ಸಂಸ್ಕೃತಿ ವುಮನ್ ಸ್ಫಿಯರ್ ಸದಸ್ಯರು ಆದಿವಾಸಿ ಕುಟುಂಬಗಳೊಂದಿಗೆ ನೇರವಾಗಿ ಸಂವಾದ ನಡೆಸಿ, ಅವರ ಸಮಸ್ಯೆಗಳು ಹಾಗೂ ಅಗತ್ಯಗಳನ್ನು ಅರಿತು ನಂಬಿಕೆ ಮತ್ತು ಮಾನವೀಯ ಸಂಬಂಧವನ್ನು ಮತ್ತಷ್ಟು ಬಲಪಡಿಸಿದರು. ಇದೇ ಸಂದರ್ಭದಲ್ಲಿ ಸಮೀಪದ ಆದಿವಾಸಿ ಶಾಲೆಗೆ ಭೇಟಿ ನೀಡಿ ಮಕ್ಕಳಿಗೆ ಊಟವನ್ನು ವಿತರಿಸಿ, ಅವರ ದಿನವನ್ನು ಸಂತೋಷ ಮತ್ತು ಪೋಷಣೆಯಿಂದ ತುಂಬಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ಶ್ರೀದೇವಿ ಭೂಪಾಲಂ, 'ವನಮಿತ್ರ ಯೋಜನೆಯು ಸಮಾಜ ಮತ್ತು ಅರಣ್ಯವಾಸಿ ಸಮುದಾಯಗಳ ನಡುವೆ ಅರ್ಥಪೂರ್ಣ ಸಂಪರ್ಕವನ್ನು ನಿರ್ಮಿಸುವುದರ ಜೊತೆಗೆ, ಕಾಡಂಚಿನಲ್ಲಿರುವ ಜನರಿಗೆ ಗೌರವ, ಕಾಳಜಿ ಮತ್ತು ಮೂಲಭೂತ ಅಗತ್ಯಗಳನ್ನು ಒದಗಿಸುವುದೇ ನಮ್ಮ ಉದ್ದೇಶ' ಎಂದು ತಿಳಿಸಿದರು.

ಈ ಯೋಜನೆಯು ಆದಿವಾಸಿ ಕಲ್ಯಾಣ, ಮಹಿಳಾ ಸಬಲೀಕರಣ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಸಂಸ್ಕೃತಿ ವುಮನ್ ಸ್ಫಿಯರ್ ಹೊಂದಿರುವ ನಿರಂತರ ಬದ್ಧತೆಯನ್ನು ಪ್ರತಿಬಿಂಬಿಸಿತು. ಸಂಸ್ಥೆಯ ಕಾರ್ಯದರ್ಶಿ ಕೀರ್ತಿ ರಮೇಶ್, ಖಜಾಂಚಿ ನಂದ ಲೋಕೇಶ್, ಉಪಾಧ್ಯಕ್ಷೆ ಅರ್ಚನಾ ಬಸವರಾಜ್, ಸಾಂಸ್ಕೃತಿಕ ನಿರ್ದೇಶಕಿ ಶಿಲ್ಪಾ ಸುಂದೀಪ್, ಸೇವಾ ನಿರ್ದೇಶಕಿ ರಶ್ಮಿ ನಾಗೇಂದ್ರ, ಯೋಜನಾ ಸಂಯೋಜಕಿ ಸಪ್ನಾ ಮಧುಸೂದನ್, ಇತರೆ ನಿರ್ದೇಶಕರಾದ ಆಶಾ ರಮೇಶ್ ಹಾಗೂ ರೇಖಾ, ಜೊತೆಗೆ ಯುವ ನಿರ್ದೇಶಕರಾದ ವೈಷ್ಣವಿ ವಿಷ್ಣು ಅಮೂಲ್ಯ ದರ್ಶನ್ ಮತ್ತು ಮಧು ಸೇರಿದಂತೆ ಇತರರು ಉಪಸ್ಥಿತರಿದ್ದರು.



ಸಂಸ್ಕೃತಿ ವುಮನ್ ಸಂಸ್ಥೆಯಿಂದ ಆದಿವಾಸಿಗಳಿಗೆ ದಿನಬಳಕೆಯ ವಸ್ತುಗಳನ್ನು ವಿತರಿಸಲಾಯಿತು.

ಸಂವಿಧಾನ ಪಾಲನೆಯಿಂದ ಗಲಭೆ-ಸಂಘರ್ಷಗಳು ನಡೆಯದು

ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕಿ ಪ್ರೊ.ಅಸ್ನಾ ಉರೂಜ್ ಅಭಿಪ್ರಾಯ



ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಭಾಂಗಣದಲ್ಲಿ ಬುಧವಾರ ರಾಷ್ಟ್ರೀಯ ಐಕ್ಯತಾ ಸಪ್ತಾಹ ದಿನಾಚರಣೆ ಅಂಗವಾಗಿ ಅಲ್ಪಸಂಖ್ಯಾತರ ಕಲ್ಯಾಣ ದಿನ ಏರ್ಪಡಿಸಲಾಗಿತ್ತು.

ಮೈಸೂರು, ಡಿ.17(ಜಿಎ)- ಸಂವಿಧಾನವನ್ನು ಸರಿಯಾಗಿ ಪಾಲಿಸಿದರೆ ಖಂಡಿತವಾಗಿಯೂ ದೇಶದಲ್ಲಿ ಯಾವುದೇ ಗಲಭೆ, ಸಂಘರ್ಷಗಳು ನಡೆಯುವುದಿಲ್ಲ ಎಂದು ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕಿ ಪ್ರೊ.ಅಸ್ನಾ ಉರೂಜ್ ತಿಳಿಸಿದರು.

ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಭಾಂಗಣದಲ್ಲಿ ಬುಧವಾರ ರಾಷ್ಟ್ರೀಯ ಐಕ್ಯತಾ ಸಪ್ತಾಹ ದಿನಾಚರಣೆ ಅಂಗವಾಗಿ ಆಯೋಜಿಸಲಾಗಿದ್ದ ಅಲ್ಪಸಂಖ್ಯಾತರ ಕಲ್ಯಾಣ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂವಿಧಾನವನ್ನು ಸಂಪೂರ್ಣವಾಗಿ ಓದಿ ಅರ್ಥ ಮಾಡಿಕೊಂಡರೆ ಮಾತ್ರ ಕೋಮು ಸಂಘರ್ಷ ರಹಿತ ಸಮಾಜ ನಿರ್ಮಿಸಿ ಸೌಹಾರ್ದ ಜೀವನ ನಡೆಸಬಹುದು ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ದೂರ ದೃಷ್ಟಿಯ ಮಹತ್ವ ಈಗ ನಮಗೆ ತಿಳಿಯುತ್ತಿದೆ. ಅಷ್ಟರ ಮಟ್ಟಿಗೆ ಅವರು ಆಲೋಚಿಸಿ ಹಲವಾರು ಅಂಶಗಳನ್ನು ಸಂವಿಧಾನದಲ್ಲಿ ಅಳವಡಿಸಿದ್ದಾರೆ. ಇತರ ದೇಶಗಳಂತೆ ಭಾರತದಲ್ಲಿಯೂ ಸಹ ಅಲ್ಪಸಂಖ್ಯಾತರಿದ್ದಾರೆ. ಸಂವಿಧಾನ ನೀಡಿರುವ ಹಕ್ಕುಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಹಿಂದೆ ಧರ್ಮ ಮುಖ್ಯವಾಗಿರಲಿಲ್ಲ. ರಾಷ್ಟ್ರ ಮುಖ್ಯವಾಗಿರುತ್ತಿತ್ತು. ಅದನ್ನು ನಾವು ನಮ್ಮ ಮುಂದಿನ ಪೀಳಿಗೆಗೆ ತಿಳಿಸಬೇಕು. ಇದನ್ನು ಕಾಪಾಡಿಕೊಂಡು ಹೋಗುವ ದೊಡ್ಡ ಜವಾಬ್ದಾರಿ ನಮ್ಮ ಮೇಲಿದೆ ಎಂದು ತಿಳಿಸಿದರು.

ನಮ್ಮ ದೇಶದಲ್ಲಿ ವೈವಿಧ್ಯತೆಯಲ್ಲಿ ಏಕತೆ ಇದೆ. ಬೇರೆ ಬೇರೆ ಧರ್ಮದವರು, ಬೇರೆ ಬೇರೆ ಭಾಷೆ ಮಾತನಾಡುವವರು ಇದ್ದಾರೆ. ಇಷ್ಟೆಲ್ಲಾ ವೈವಿಧ್ಯತೆ ಇದ್ದರೂ ಸಹ ನಮ್ಮಲ್ಲಿ ಏಕತೆ ಇದೆ. ಇಲ್ಲಿಯವರೆಗೂ ನಾವೆಲ್ಲರೂ ಒಟ್ಟಿಗೆ ಏಕತೆಯಿಂದ ಬಂದಿದ್ದೇವೆ. ಇದನ್ನೇ ನಾವು ಮುಂದುವರೆಸಿಕೊಂಡು ಹೋಗಬೇಕು. ಇದರ ಬಗ್ಗೆ ನಮ್ಮ ಮಕ್ಕಳಿಗೂ ನಾವು ತಿಳಿಸಬೇಕು ಎಂದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಮಾತನಾಡಿ, ಸಮ ಸಮಾಜ ನಿರ್ಮಿಸಬೇಕಾದರೆ ಪ್ರತಿಯೊಬ್ಬರಿಗೂ ಸಮಾನ ಹಕ್ಕು ನೀಡಬೇಕು. ಶಿಕ್ಷಣ ಬಹಳ ಮುಖ್ಯ. ಅಲ್ಪಸಂಖ್ಯಾತರ ಮಕ್ಕಳಿಗೆ ಶಿಕ್ಷಣ ಕೊಟ್ಟರೆ ಸಮಾನತೆ ಬೆಳೆಯುತ್ತದೆ ಹಾಗೂ ಸಮ ಸಮಾಜ ನಿರ್ಮಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಅಲ್ಪ ಸಂಖ್ಯಾತರು ಸರ್ಕಾರ ನೀಡಿರುವ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು. ವಿಶ್ವವಿದ್ಯಾನಿಲಯದಲ್ಲಿ 5 ಸಾವಿರ ಮೇಲ್ಪಟ್ಟ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡಲಾಗುತ್ತಿದ್ದು, ಈಗಾಗಲೇ 5,300 ಅಲ್ಪ ಸಂಖ್ಯಾತರ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡಲಾಗಿದೆ. ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗಾಗಿ ಸರ್ಕಾರ 500 ಕೋಟಿ ರೂ. ಹಣ ನೀಡಿದೆ ಎಂದು ತಿಳಿಸಿದರು.

ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೂ ಅವಕಾಶ ನೀಡಿದರೆ ಅವರು ಬೆಳೆಯುತ್ತಾರೆ. ಹೀಗಾಗಿ ಇವರಿಗೆ ಸೌಲಭ್ಯ ನೀಡಲು ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಇಂತಹ ಯೋಜನೆಗಳನ್ನು ಚಾಚೂ ತಪ್ಪದೆ ಬಳಸಿಕೊಂಡರೆ ಸಮ ಸಮಾಜ ನಿರ್ಮಾಣ ಸಾಧ್ಯ. ನಮ್ಮ ದೇಶದಲ್ಲಿ ಹಲವಾರು ಜಾತಿ, ಪಂಗಡ, ಧರ್ಮ ಇದ್ದರೂ ಮಾನವ ಮೌಲ್ಯಧಾರಿತ ಜೀವನ ನಡೆಸಬೇಕು. ಯಾವುದೇ ಸಮಾಜ, ಧರ್ಮ ಕೆಟ್ಟದ್ದನ್ನು ಮಾಡಿ ಎಂದು ಹೇಳುವುದಿಲ್ಲ ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಎನ್.ಕೆ.ನವೀನ್ ಕುಮಾರ್, ಪರಿಕ್ಷಾಂಗ ಕುಲಸಚಿವ ಆನಂದ್ ಕುಮಾರ್, ಶೈಕ್ಷಣಿಕ ವಿಭಾಗದ ಡೀನ್ ಪ್ರೊ.ಎಂ.ರಾಮನಾಥಂ ನಾಯುಡು, ಕಾರ್ಯಕ್ರಮದ ಸಂಯೋಜನಾಧಿಕಾರಿಗಳಾದ ಮೊಹಮ್ಮದ್ ನಸ್ರುಲ್ಲಾ ಖಾನ್, ಡಾ.ಸೈಯದ ಇಶ್ರತ್ ಫಾತಿಮಾ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಹಾಸೇನಾ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಡೆವಿಲ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕಿಸ್ ಕಿಸ್ಕೋ ಪ್ಯಾರ್ ಕರೂ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಡೆವಿಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಅಖಂಡ-2 (ತೆ)	4 ಪ್ರದರ್ಶನಗಳು
ಸಂಗಂ	
ಡೆವಿಲ್ (ಕ)	3 ಪ್ರದರ್ಶನಗಳು
ಲಿಡೋ	
ಅಖಂಡ-2 (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕಾಂತಾರ-2 (ಕ)	4 ಪ್ರದರ್ಶನಗಳು

ಸಾಲಕ್ಕಾಗಿ ಗಿರವಿ ಇಟ್ಟ ಚಿನ್ನಾಭರಣದಲ್ಲಿ ವ್ಯತ್ಯಾಸ; ಕೆನರಾ ಬ್ಯಾಂಕ್ ಹಿನಕಲ್ ಶಾಖೆಗೆ ಗ್ರಾಹಕರ ಮುತ್ತಿಗೆ

- ಪೋಲೀಸರ ಮಧ್ಯ ಪ್ರವೇಶ; ತನಿಖೆ ಭರವಸೆ
- ಬ್ಯಾಂಕ್ ಅಧಿಕಾರಿಯಿಂದಲೂ ಪರಿಶೀಲನೆ ಆಶ್ವಾಸನೆ

ಮೈಸೂರು, ಡಿ.17(ಎಂಕೆ)- ಸಾಲ ನೀಡಲು ಗಿರವಿ ಇಟ್ಟುಕೊಂಡಿದ್ದ ಚಿನ್ನಾಭರಣದಲ್ಲಿ ವ್ಯತ್ಯಾಸ ಕಂಡು ಬಂದಿದ್ದು, ಬ್ಯಾಂಕ್ ಸಿಬ್ಬಂದಿ ತಮಗೆ ವಂಚಿಸಿದ್ದಾರೆ ಎಂದು ಆರೋಪಿಸಿ ಕೆನರಾ ಬ್ಯಾಂಕ್ ಹಿನಕಲ್ ಶಾಖೆಗೆ ನೂರಾರು ಮಂದಿ ಗಿರವಿದಾರರು ಮುತ್ತಿಗೆ ಹಾಕಿದ ಘಟನೆ ಬುಧವಾರ ನಡೆಯಿತು.



ಹಿನಕಲ್‌ನ ಕೆನರಾ ಬ್ಯಾಂಕ್‌ಗೆ ಮುತ್ತಿಗೆ ಹಾಕಿರುವ ನೂರಾರು ಗಿರವಿದಾರರನ್ನು ಕಾಣಬಹುದು.

ಗ್ರಾಹಕರಿಂದ ಚಿನ್ನ ಗಿರವಿ ಇಟ್ಟುಕೊಂಡು ಸಾಲ ನೀಡುವಾಗ, ಗಿರವಿ ಇಟ್ಟಿದ್ದ ಚಿನ್ನದ ಪ್ರಮಾಣಕ್ಕೂ, ಬಿಡಿಸಿಕೊಳ್ಳುವಾಗ ಗಾತ್ರ ಮತ್ತು ತೂಕದಲ್ಲಿ ಸಾಕಷ್ಟು ವ್ಯತ್ಯಾಸವಾಗಿದೆ. ಗಿರವಿ ಇಟ್ಟುಕೊಳ್ಳುವಾಗ ಸರಿಯಾಗಿ ತೂಕ ಮಾಡದೆ, ಸಾಲದ ರಶೀದಿಯಲ್ಲಿ 1 ರಿಂದ 2 ಗ್ರಾಂನಷ್ಟು ಕಡಿಮೆ ತೂಕ ಬರೆಯುತ್ತಾರೆ. ಬಿಡಿಸಿಕೊಳ್ಳುವಾಗ ರಸೀದಿಯಲ್ಲಿ ಬರೆದಷ್ಟು ಚಿನ್ನ ವಾಪಸ್ ಕೊಟ್ಟು, ಗಿರವಿ ಇಡುವಾಗ ಇದ್ದಂತಹ ತೂಕವನ್ನು ಮರೆಮಾಚಿ ವಂಚಿಸಲಾಗುತ್ತಿದೆ ಎಂದು ದೂರಿದರು.

ಗ್ರಾಹಕರಿಂದ ಚಿನ್ನ ಗಿರವಿ ಇಟ್ಟುಕೊಳ್ಳುವ ಬ್ಯಾಂಕ್ ಸಿಬ್ಬಂದಿ ಅಶ್ವಿನ್, ಸಾಕಷ್ಟು ಜನರಿಗೆ ವಂಚಿಸಿದ್ದಾರೆ. ಚಿನ್ನದ ತೂಕ ಕಡಿಮೆ ಬರೆಯುವುದು, ಕೊನೆಗೆ ಬಿಡಿಸಿಕೊಳ್ಳುವಾಗ ಬರೆದಷ್ಟು ಮಾತ್ರ ನೀಡಿ, ಉಳಿದ ಚಿನ್ನವನ್ನು ಕಳವು ಮಾಡುತ್ತಿದ್ದಾರೆ. ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿಯೇ ಈ ರೀತಿ ವಂಚನೆ ಮಾಡುತ್ತಿರುವುದು ಖಂಡನೀಯ ಎಂದು ಆಕ್ರೋಶ ಹೊರಹಾಕಿದರು.

8 ಗುಂಡು ನಾಪತ್ತೆ...!

ಮೂರು ವರ್ಷದ ಹಿಂದೆ 81 ಗುಂಡುಗಳಿದ್ದ ನೆಕ್ಲೆಸ್ ಅನ್ನು ಗಿರವಿ ಇಟ್ಟು 7 ಲಕ್ಷ ರೂ. ಸಾಲ ಪಡೆದಿದ್ದೆ. ಪ್ರತೀ ವರ್ಷ 80 ಸಾವಿರ ಬಡ್ಡಿ ಕಟ್ಟಿದ್ದೇನೆ. ಮೊನ್ನೆಯಷ್ಟೇ ಬೇರೆ ವ್ಯವಹಾರದಿಂದ ಹಣ ಬಂತು ಎಂದೇಳಿ ಗಿರವಿ ಇಟ್ಟಿದ್ದ ಚಿನ್ನದ ನೆಕ್ಲೆಸ್ ಅನ್ನು ಬಿಡಿಸಿಕೊಂಡು ನೋಡಿದರೆ, ಅದರಲ್ಲಿ 73 ಗುಂಡುಗಳಿವೆ. 8 ಗುಂಡುಗಳು ನಾಪತ್ತೆಯಾಗಿವೆ. ಕೂಡಲೇ ಬ್ಯಾಂಕ್ ಮ್ಯಾನೇಜರ್‌ಗೆ ತಿಳಿಸಿದ್ದು, ಗಿರವಿ ಇಡುವಾಗ ಇದ್ದಂತಹ ನೆಕ್ಲೆಸ್‌ನಲ್ಲಿ 81 ಗುಂಡುಗಳಿರುವುದನ್ನು ತೋರಿಸಿದ್ದೇನೆ. ಇದೇ ರೀತಿ ಸಾಕಷ್ಟು ಜನರಿಗೆ ವಂಚನೆಯಾಗಿರುವ ಸಾಧ್ಯತೆ ಇದೆ.

- ರೇಣುಕಾ, ಗಿರವಿದಾರರು

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ವಿಜಯನಗರ ಪೊಲೀಸ್ ಠಾಣೆ ಸಿಬ್ಬಂದಿ ಗಿರವಿದಾರರನ್ನು ನಿಯಂತ್ರಿಸಿ, ಅವರು ದೂರು ದೂರು ಕೊಟ್ಟರೆ ದಾಖಲಿಸಿಕೊಂಡು ತನಿಖೆ ನಡೆಸುವುದಾಗಿ ಸಮಾಧಾನಪಡಿಸಿದರು. ಆದರೆ ಇನ್ನೂ ಯಾರೂ ಪೊಲೀಸರಿಗೆ ದೂರು ಸಲ್ಲಿಸಿಲ್ಲ.

ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಕೆನರಾ ಬ್ಯಾಂಕ್ ಎಜಿಎಂ ರಾಜಶೇಖರ್ ಅವರು, ಸಾಲ ನೀಡಲು ಅಡಮಾನ ಇಟ್ಟುಕೊಳ್ಳುವ ಚಿನ್ನದಲ್ಲಿ ಮೋಸವಾಗಿದೆ ಎಂದು ಗ್ರಾಹಕರು ದೂರುತ್ತಿದ್ದಾರೆ. ಈ ಸಂಬಂಧ ಈಗಾಗಲೇ ಸಿಬ್ಬಂದಿಗಳನ್ನು ವಿಚಾರಿಸಿದ್ದು, ಸೂಕ್ತ ತನಿಖೆ ನಡೆಸಲಾಗುವುದು. ಬ್ಯಾಂಕ್‌ನಿಂದ ಗ್ರಾಹಕರಿಗೆ ನಷ್ಟವಾಗಿದೆಯೇ ಇಲ್ಲವೇ ಎಂಬುದನ್ನು ತನಿಖೆ ನಡೆಸಿ ಸ್ಪಷ್ಟಪಡಿಸಲಾಗುವುದು. ಎಲ್ಲವೂ ಸಿಸಿ ಕ್ಯಾಮರಾದಲ್ಲಿ ದಾಖಲಾಗಿದೆ ಎಂದರು.

ಪತ್ರಿಕಾ ವಿತರಕನಿಗೆ ಪಿಎಚ್‌ಡಿ ಪದವಿ



ಮೈಸೂರು, ಡಿ.17- ಪತ್ರಿಕಾ ವಿತರಕ ಶಿವಪ್ರಸಾದ್ ಬಿ.ಎಸ್ ಅವರು ಡಾ. ಗುರುದತ್ ಎ.ಎಸ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಸಾದರ ಪಡಿಸಿದ "ಕಸ್ಟಮರ್ಸ್ ಪರ್ಸೆಪ್ಷನ್ ಆಫ್ ಗ್ರೀನ್ ಬ್ಯಾಂಕಿಂಗ್ ಪ್ರಾಡಕ್ಟ್ಸ್ - ಎ ಕಂಪೆರೇಟೀವ್ ಸ್ಟಡಿ ಆಫ್ ಪಬ್ಲಿಕ್ ಅಂಡ್ ಪ್ರೈವೇಟ್ ಬ್ಯಾಂಕ್ಸ್ ಇನ್ ಬೆಂಗಳೂರು ಡಿಸ್ಟ್ರಿಕ್ಟ್ಸ್" ಎಂಬ ಆಂಗ್ಲ ಭಾಷೆಯ ಮಹಾ ಪ್ರಬಂಧವನ್ನು ವಾಣಿಜ್ಯ ಶಾಸ್ತ್ರ ವಿಷಯದಲ್ಲಿ ಪಿಹೆಚ್.ಡಿ ಪದವಿಗಾಗಿ 2017ರ ಮೈಸೂರು ವಿಶ್ವವಿದ್ಯಾನಿಲಯದ ನಿಯಮಾವಳಿಯಡಿಯಲ್ಲಿ ಅಂಗೀಕರಿಸಲಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಪರಿಕ್ಷಾಂಗ ಕುಲಸಚಿವರಾದ ಪ್ರೊ. ಎನ್.ನಾಗರಾಜ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಶಿವಪ್ರಸಾದ್ ಅವರ ಸಾಧನೆಯನ್ನು ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ರಾಜ್ಯಾಧ್ಯಕ್ಷ ಕೆ.ಶಂಭುಲಿಂಗ ಅವರ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರಪತಿಗಳಿಗೆ ಬೀಳ್ಕೊಡುಗೆ



ಹೈದರಾಬಾದ್‌ಗೆ ತೆರಳಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಮೈಸೂರು ವಿಮಾನ ನಿಲ್ದಾಣದಲ್ಲಿ ಆತ್ಮೀಯವಾಗಿ ಬೀಳ್ಕೊಡಲಾಯಿತು. ಈ ವೇಳೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಪಶು ಸಂಗೋಪನೆ ಹಾಗೂ ರೇಷ್ಮೆ ಸಚಿವ ಕೆ.ವೆಂಕಟೇಶ್, ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಉಪಸ್ಥಿತರಿದ್ದರು.

ಚಾಮುಂಡಿ ಬೆಟ್ಟದಲ್ಲಿ ಸ್ವಚ್ಛತೆ ಕಾಪಾಡಿ, ಪರಿಸರ ಉಳಿಸಿ

ಪ್ರಾಧಿಕಾರಕ್ಕೆ ಆಮ್ ಆದ್ಮಿ ಪಾರ್ಟಿ ಆಗ್ರಹ

ಮೈಸೂರು, ಡಿ.17(ಜಿಎ)-ಚಾಮುಂಡಿ ಬೆಟ್ಟದಲ್ಲಿ ಸ್ವಚ್ಛತೆ ಹಾಗೂ ಪರಿಸರ ಸಂರಕ್ಷಣೆಗಾಗಿ ಪ್ರಾಧಿಕಾರ ಮುಂದಾಗಬೇಕು ಎಂದು ಆಮ್ ಆದ್ಮಿ ಪಾರ್ಟಿ ಜಿಲ್ಲಾಧ್ಯಕ್ಷ ಎಲ್.ರಂಗಯ್ಯ ಒತ್ತಾಯಿಸಿದ್ದಾರೆ.

ನಾಡ ಅಧಿದೇವತೆ ಚಾಮುಂಡೇಶ್ವರಿ ತಾಯಿಯು ಈ ನಾಡನ್ನು ರಕ್ಷಿಸುತ್ತಿದ್ದು, ಅಪಾರ ಭಕ್ತರನ್ನು ತನ್ನೆಡೆ ಸೆಳೆದು ಆಶೀರ್ವಾದ ದಯಪಾಲಿಸುತ್ತಿದ್ದು, ತಾಯಿ ಚಾಮುಂಡೇಶ್ವರಿ ಪ್ರಾಧಿಕಾರಕ್ಕೆ ಕೋಟ್ಯಾಂತರ ರೂ. ಆದಾಯ ತಂದುಕೊಟ್ಟಿದ್ದಾಳೆ. ಆದರೆ, ಈ ಆಧುನಿಕ ಯುಗದಲ್ಲಿ ಕ್ಷೇತ್ರವು ಧೂಮಪಾನ, ಮದ್ಯಪಾನ, ಗಾಂಜಾ ಹಾಗೂ ಅನೈತಿಕ ಚಟುವಟಿಕೆಗಳ ತಾಣವಾಗುತ್ತಿದ್ದು, ಸ್ವಚ್ಛತೆಯ ಕೊರತೆ ಎದ್ದು ಕಾಣುತ್ತಿದೆ. ಕಂಡ ಕಂಡಲ್ಲಿ ಪ್ಲಾಸ್ಟಿಕ್ ಬಾಟಲ್, ಪೇಪರ್ ಬಿಸಾಡಲಾಗುತ್ತಿದೆ. ಇದನ್ನೆಲ್ಲ ನಿಯಂತ್ರಣ ಮಾಡಲು ಕ್ರಮಗಳನ್ನು ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

ಚಾಮುಂಡಿ ಬೆಟ್ಟಕ್ಕೆ ಖಾಸಗಿ ವಾಹನಗಳನ್ನು ನಿಷೇಧಿಸಿ ಸರ್ಕಾರಿ ವಾಹನ ಸೌಲಭ್ಯ ಮಾಡಬೇಕು. ಚೆಕ್ ಪೋಸ್ಟ್ ತೆರೆದು ತಪಾಸಣೆಗೆ ಒಳಪಡಿಸಬೇಕು.




ಪ್ಲಾಸ್ಟಿಕ್ ಬಾಟಲ್, ಪೇಪರ್ ಸಂಪೂರ್ಣ ನಿಷೇಧವಾಗಬೇಕು. ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸಬೇಕು. ಉಚಿತವಾಗಿ ಶೌಚಾಲಯಗಳನ್ನು ನಿರ್ಮಾಣ ಮಾಡಬೇಕು ಹಾಗೂ ಇದರ ಸ್ವಚ್ಛತೆ ಮಾಡಲು ನೌಕರರನ್ನು ನೇಮಿಸಬೇಕು. ಬೆಟ್ಟದಲ್ಲಿ ವ್ಯಾಪಾರಕ್ಕಾಗಿ ನಿರ್ಮಾಣ ಮಾಡಿರುವ ಮಳಿಗೆಗಳಲ್ಲಿ ಮಾತ್ರ ವ್ಯಾಪಾರ ವಹಿವಾಟು ಇರಬೇಕು. ಪಾದಚಾರಿ ರಸ್ತೆಯಲ್ಲಿ ಇರುವ ಅಂಗಡಿಗಳನ್ನು ತೆರವುಗೊಳಿಸಬೇಕು. ಚಾಮುಂಡಿ ಬೆಟ್ಟವನ್ನು ಕೇವಲ ಭಕ್ತರ ತಾಣವಾಗಿ ಮಾರ್ಪಾಡು ಮಾಡಬೇಕೆಂದು ಪ್ರಾಧಿಕಾರಕ್ಕೆ ಭಕ್ತರ ಪರವಾಗಿ ಮನವಿ ಮಾಡಿಕೊಳ್ಳುತ್ತೇವೆ ಎಂದು ಪತ್ರಿಕಾ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

ಮೈಸೂರಿನ ಭಾರತೀಯ ವಿದ್ಯಾಭವನದಲ್ಲಿ ಡಿ. 20ಕ್ಕೆ ಜನಪದ ಗೀತೆಗಳ ಸಂಜೆ



ಅಪ್ಪಗೆರೆ ತಿಮ್ಮರಾಜು



ದಿವ್ಯಾ



ವನಿತಾ



ಶ್ವೇತಾ



ಪುಣ್ಯೇಶ್



ರಘು



ಗುರುದತ್



ಪುನೀತ್



ಕಿರಣ್

ಮೈಸೂರು, ಡಿ. 17- ಬೆಂಗಳೂರಿನ ಇನ್ಫೋಸಿಸ್ ಪ್ರತಿಷ್ಠಾನ ಮತ್ತು ಭಾರತೀಯ ವಿದ್ಯಾಭವನ, ಬೆಂಗಳೂರು-ಮೈಸೂರು ಸಂಯುಕ್ತ ಆಶ್ರಯದಲ್ಲಿ 162ನೇ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಡಿ.20 ರಂದು ಸಂಜೆ 6 ಗಂಟೆಗೆ ವಿಜಯನಗರ ಮೊದಲ ಹಂತದಲ್ಲಿರುವ ಭಾರತೀಯ ವಿದ್ಯಾಭವನದಲ್ಲಿ ಜಾನಪದ ಜಾಕ್ಸನ್ ಜನಪದಶ್ರೀ ಡಾ. ಅಪ್ಪಗೆರೆ ತಿಮ್ಮರಾಜು ಅವರಿಂದ ಜನಪದ ಗೀತೆಗಳ ಸಂಜೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಸಹ ಗಾಯಕರಾದ ಶ್ರೀಮತಿ ದಿವ್ಯ, ಶ್ರೀಮತಿ ವನಿತಾ ಮತ್ತು ಶ್ರೀಮತಿ ಶ್ವೇತಾ ಹಾಡಲಿದ್ದಾರೆ. ಪಕ್ಕವಾದ್ಯದಲ್ಲಿ ಪುಣ್ಯೇಶ್-ಹಾರ್ಮೋನಿಯಂ, ರಘು-ತಬಲಾ, ಪುನೀತ್-ಕೊಳಲು, ಕಿರಣ್-ಡೋಲಕ್ ಮತ್ತು ಗುರುದತ್-ತಾಳಗೆಜ್ಜೆ ಸಹಕಾರ ನೀಡಲಿದ್ದಾರೆ.

ಡಾ. ಅಪ್ಪಗೆರೆ ತಿಮ್ಮರಾಜು ಪರಿಚಯ: ರಾಮನಗರ ಜಿಲ್ಲೆಯ ಬಣ್ಣದ ಆಟಿಕೆಗಳಿಗೆ ಪ್ರಸಿದ್ಧವಾಗಿರುವ ಚನ್ನಪಟ್ಟಣ ತಾಲೂಕಿನ ಸಣ್ಣ ಗ್ರಾಮ ಅಪ್ಪಗೆರೆ. 8.4.1955 ರಲ್ಲಿ ಇವರ ಜನನ. ಅಪ್ಪಗೆರೆ ತಿಮ್ಮರಾಜು ಚಿಕ್ಕವಯಸ್ಸಿನಿಂದಲೇ ಜನಪದ ಗೀತೆ ಹಾಡಿಕೊಂಡು ಬಂದವರು. 1972 ರಲ್ಲಿ ಆಕಾಶವಾಣಿಯಲ್ಲಿ, 1983 ರಲ್ಲಿ ದೂರದರ್ಶನದಲ್ಲಿ ಹಾಡಲು ಆರಂಭಿಸಿದರು. 1981 ರಲ್ಲಿ ರಾಜ್ಯ ಮಟ್ಟದ ಯುವಜನ ಮೇಳದಲ್ಲಿ ಜನಪದ ಗೀತೆಗೆ ಪ್ರಥಮ ಬಹುಮಾನ ಪಡೆದರು. 1983 ರಲ್ಲಿ ದೆಹಲಿ ಗಣರಾಜ್ಯೋತ್ಸವದಲ್ಲಿ ಭಾಗವಹಿಸಿ, ಹಾಡಿ ಪ್ರಶಂಸೆ ಪಡೆದರು. 1984 ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯ ಕಲ್ಚರಲ್ ಚಾಂಪಿಯನ್, 1991 ರಲ್ಲಿ 4ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಿರ್ವಹಣೆ. 1998ರಲ್ಲಿ ಅಮೇರಿಕಾದ ಹಾಡುಗಾರ ನ್ಯಾಟ್‌ಕಿಂಗ್ ಕೌಲ್ ಪ್ರಶಸ್ತಿ, 2003 ರಲ್ಲಿ 71ನೇ ಅಖಿಲ ಭಾರತ ಕನ್ನಡ ಸಮ್ಮೇಳನ, ಕರ್ನಾಟಕಶ್ರೀ ಪ್ರಶಸ್ತಿ, 1904 ರಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ, 1906 ರಲ್ಲಿ ಕೆಂಪೇಗೌಡ ಪ್ರಶಸ್ತಿ, 2006 ರಲ್ಲಿ ಲಹರಿ ರೆಕಾರ್ಡಿಂಗ್ ಕಂಪನಿ ಜಾನಪದ ಜೋಗಿ ಪ್ರಶಸ್ತಿ, 2008 ರಲ್ಲಿ ಆರ್ಯಭಟ ಪ್ರಶಸ್ತಿ 2015 ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 2024 ರಲ್ಲಿ ಜನಪದ ಶ್ರೀ ಪ್ರಶಸ್ತಿ, 1998 ರಲ್ಲಿ ಅಮೇರಿಕಾ ಅರಿಜೋನಾದ ಅಕ್ಕ ಸಮ್ಮೇಳನದಲ್ಲಿ ಕಾರ್ಯಕ್ರಮ ಸೇರಿದಂತೆ ಹಲವಾರು ಪ್ರಶಸ್ತಿಗಳು ಸಂದಿವೆ.

ದೊಡ್ಡ ಕೆರೆ ಮೈದಾನದಲ್ಲಿ ಕೆರೆ ನಿರ್ಮಿಸಿ, ಯೂನಿಟಿ ಮಾಲ್ ಬೇರೆಡೆ ಸ್ಥಳಾಂತರಿಸಿ

ಮೈಸೂರು ರಕ್ಷಣಾ ವೇದಿಕೆ ಅಧ್ಯಕ್ಷ ಮೈ.ಕಾ.ಪ್ರೇಮ್‌ಕುಮಾರ್ ಆಗ್ರಹ

ಮೈಸೂರು, ಡಿ.17(ಜಿಎ)-ಮೈಸೂರಿನ ದೊಡ್ಡಕೆರೆ ಮೈದಾನವನ್ನು ಸರ್ಕಾರ ವಶಪಡಿಸಿಕೊಂಡು ಕೆರೆ ನಿರ್ಮಾಣ ಮಾಡಿ, ಯೂನಿಟಿ ಮಾಲ್ ಅನ್ನು ನಗರದ ಬೇರೆ ಕಡೆ ಸ್ಥಳಾಂತರ ಮಾಡುವಂತೆ ಮೈಸೂರು ರಕ್ಷಣಾ ವೇದಿಕೆ ಅಧ್ಯಕ್ಷ ಮೈ.ಕಾ. ಪ್ರೇಮ್‌ಕುಮಾರ್ ಆಗ್ರಹಿಸಿದ್ದಾರೆ.

ದೊಡ್ಡ ಕೆರೆ ಮೈದಾನದ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕೆರೆಯೂ ಮಾನವ ನಿರ್ಮಿತ ಕೆರೆಯಲ್ಲ. ಇದು ನೈಸರ್ಗಿಕವಾಗಿ ಸುಮಾರು 131 ಎಕರೆ ವಿಸ್ತೀರ್ಣದಲ್ಲಿ ಪ್ರಕೃತಿದತ್ತವಾಗಿ ನಿರ್ಮಾಣವಾಗಿದೆ. ಇದಕ್ಕೆ 8 ಫೀಡರ್ ಕಾಲುವೆಗಳು ಇದ್ದವು. ಎಲ್ಲವೂ ಮಳೆ ಆಧಾರಿತವಾಗಿದ್ದವು. ಇಂದಿಗೂ ಕಾಲುವೆಗಳು ಇವೆ. ಚಾಮುಂಡಿಬೆಟ್ಟದಿಂದ ಹರಿದು ಬರುವ ಮಳೆ ನೀರು ಕಾರಂಜಿ ಕೆರೆ ಮಾರ್ಗವಾಗಿ ಬರುತ್ತಿತ್ತು ಎಂದರು.

ದೊಡ್ಡ ಕೆರೆ ಮೈದಾನಕ್ಕೆ ನೀರು ತುಂಬಿಸಿ, ಕಾಯಕಲ್ಪ ಮಾಡಬೇಕು. ಯೂನಿಟಿ ಮಾಲ್ ಕೆರೆ ಸಮೀಪ ಯಾಕೆ ನಿರ್ಮಾಣ ಮಾಡಬೇಕು. ಇದರಿಂದಾಗಿ ಮೈಸೂರು ಪರಂಪರೆ, ಅರಮನೆ ಸೌಂದರ್ಯ ಹಾಳಾಗುತ್ತದೆ. ಈ ಜಾಗದಲ್ಲಿ ಯೂನಿಟಿ ಮಾಲ್ ಅನ್ನು ಸಂಸದರು ನಿರ್ಮಾಣ ಮಾಡಲು ಮುಂದಾಗಬಾರದು. ಕೆರೆಯ ಜಾಗದಲ್ಲಿ ಕಟ್ಟಡವನ್ನು ನಿರ್ಮಿಸಲು ಅವಕಾಶ ನೀಡಬೇಡಿ ಎಂದು ಒತ್ತಾಯಿಸಿದರು.



ದೊಡ್ಡ ಕೆರೆ ಮೈದಾನದ ಆವರಣದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮೈಸೂರು ರಕ್ಷಣಾ ವೇದಿಕೆ ಅಧ್ಯಕ್ಷ ಮೈ.ಕಾ.ಪ್ರೇಮ್‌ಕುಮಾರ್ ಮಾತನಾಡಿದರು.

ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಈ ಕೆರೆಗೆ ಸಂಬಂಧಿಸಿದ ದಾಖಲೆ ಪತ್ರವನ್ನು ಸಂಬಂಧಿಸಿದವರಿಗೆ ಒದಗಿಸಿ ಸರ್ಕಾರದ ವಶಕ್ಕೆ ನೀಡಿದರೆ ಅರಮನೆಯ ಶ್ರೇಯಸ್ಸು ಹೆಚ್ಚಾಗುತ್ತದೆ ಹಾಗೂ ಅರಮನೆಯ ಸೌಂದರ್ಯ ಹಾಗೂ ಪರಂಪರೆಯ ಗೌರವವನ್ನು ಕಾಪಾಡಬಹುದು ಎಂದರು.

131 ಎಕರೆ ಪ್ರದೇಶದ ದೊಡ್ಡ ಕೆರೆ ಮೈದಾನವನ್ನು ಪುನರ್ ನಿರ್ಮಾಣ ಮಾಡಿ ದೊಡ್ಡಕೆರೆಗೆ ನೀರು ತುಂಬಿಸಿ ಮೈಸೂರು ಪರಂಪರೆ, ಸೌಂದರ್ಯ ಹೆಚ್ಚು ಮಾಡಬೇಕು. ಕೆಆರ್‌ಎಸ್‌ನಿಂದ ಕೇವಲ 15 ಕಿಮೀ ದೂರದಲ್ಲಿರುವ ದೊಡ್ಡ ಕೆರೆ ಮೈದಾನಕ್ಕೆ ನೀರು ತುಂಬಿಸುವುದು ಸರ್ಕಾರಕ್ಕೆ ದೊಡ್ಡ ಕೆಲಸವಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರು ಅಜರಾಮರವಾಗಿರಬೇಕಾದರೆ, ದೊಡ್ಡಕೆರೆಗೆ ನೀರು ತುಂಬಿಸಿ ಜೀವಕಳೆ ತರಬೇಕು. ಸದನ ನಡೆಯುತ್ತಿದೆ. ಚರ್ಚೆ ನಡೆಸಿ ಕೂಡಲೇ ಹಣ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

ದೊಡ್ಡಕೆರೆ ಮೈದಾನದ ಸಂಬಂಧ ನ್ಯಾಯಾಲಯದಲ್ಲಿ ಕೇಸ್ ನಡೆಯುತ್ತಿದೆ. ಆದರೆ, ಜಿಲ್ಲಾಧಿಕಾರಿಗಳು ಸರ್ಕಾರದ ಹಾದಿ ತಪ್ಪಿಸುತ್ತಿದ್ದಾರೆ. ದೊಡ್ಡಕೆರೆ ಮೈದಾನವನ್ನು ಕೇಂದ್ರ ಸರ್ಕಾರಕ್ಕೆ ಯೂನಿಟಿ ಮಾಲ್ ಕಟ್ಟಲು ಅವಕಾಶ ನೀಡಿದ್ದಾರೆ. ಈ ಹಿಂದಿನ ಜಿಲ್ಲಾಧಿಕಾರಿಗಳು ದೊಡ್ಡಕೆರೆ ಮೈದಾನವನ್ನು ಕಾಪಾಡಿಕೊಂಡು ಬಂದಿದ್ದಾರೆ. ಸಂಸದರಿಗೆ ಅವಮಾನ ಮಾಡಲು ಈ ರೀತಿ ಕೆಲಸ ಮಾಡುತ್ತಿದ್ದಾರೆ ಎಂಬ ಅನುಮಾನ ಮೂಡುತ್ತಿದೆ ಎಂದರು.

ಅಧಿಕಾರಿಗಳು ಎಸಿ ರೂಮ್‌ನಲ್ಲಿ ಕುಳಿತು ಯೋಜನೆ ಸಿದ್ದಪಡಿಸಿ ಹಣವನ್ನು ಮಾಡುತ್ತಿದ್ದಾರೆ. ಅದೇ ಒಳ್ಳೆಯ ಕೆಲಸವನ್ನು ಮಾಡಿ ಹಣ ಮಾಡಿ. ಯೂನಿಟಿ ಮಾಲ್ ನಿರ್ಮಾಣಕ್ಕೆ ವಿರೋಧ ಇದೆ. ಈಗಾಗಲೇ ಕಾನೂನು ತಜ್ಞರ ಅಭಿಪ್ರಾಯ ಸಂಗ್ರಹಿಸಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಹಾಕುತ್ತೇವೆ.ಮೈಸೂರು ಹಿತಾಸಕ್ತಿ ಬಯಸುವ ಪ್ರತಿಯೊಬ್ಬ ನಾಗರೀಕರು ನಮ್ಮ ಹೋರಾಟಕ್ಕೆ ಸ್ಪಂದಿಸುವ ಮೂಲಕ ದೊಡ್ಡಕೆರೆ ಪುನರ್ ನಿರ್ಮಾಣ ಆಗಬೇಕು ಎಂದರು.

ಸ್ಥಳೀಯ ಉತ್ಪನ್ನಗಳನ್ನು ಪ್ರೋತ್ಸಾಹಿಸಲು ಯೂನಿಟಿ ಮಾಲ್ ನಿರ್ಮಾಣ ಮಾಡಲು ಮುಂದಾಗುತ್ತಿದ್ದಾರೆ. ಆದರೆ, ನಿಜವಾಗಿಯೂ ಮೈಸೂರು ಮಲ್ಲಿಗೆ, ವಿಳ್ಯೆದೆಲೆ, ನಂಜನಗೂಡು ರಸಬಾಳೆ ಸೇರಿದಂತೆ ಇತರ ಸ್ಥಳೀಯ ಉತ್ಪನ್ನಗಳಿಗೆ ಉತ್ತೇಜನ ನೀಡಬೇಕಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಕುಮಾರ್ ಗೌಡ, ಜಗದೀಶ್, ದಿಲೀಪ್ ಉಪಸ್ಥಿತರಿದ್ದರು.

ರಾಷ್ಟ್ರಕವಿ ಕುವೆಂಪು ಅವರಿಗೆ ಭಾರತ ರತ್ನ ಸಿಗಬೇಕು

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪ್ರತಿಪಾದನೆ


ನವದೆಹಲಿ, ಡಿ.17- ಕುವೆಂಪು ಅವರು ರಾಷ್ಟ್ರಕವಿಯಷ್ಟೇ ಅಲ್ಲ, ಅವರು ವಿಶ್ವಕವಿ. ಮನುಕುಲದ ಒಳಿತಿಗಾಗಿ ಸಾಹಿತ್ಯ ರಚಿಸಿದ ಅವರು, ಯುಗದ ಕವಿಯೂ ಆಗಿದ್ದಾರೆ. ಅಂತಹ ಶ್ರೇಷ್ಠರಿಗೆ ಭಾರತ ರತ್ನ ಸಿಗಬೇಕು ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಹೇಳಿದರು.

ನವದೆಹಲಿಯಲ್ಲಿ ಮೈಸೂರಿನ ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ಹಾಗೂ ದೆಹಲಿ ಕರ್ನಾಟಕ ಸಂಘ ಹಮ್ಮಿಕೊಂಡಿದ್ದ ರಾಷ್ಟ್ರಕವಿ ಕುವೆಂಪು ಅವರ ಕೊಡುಗೆ ಮತ್ತು ಸಾಧನೆ ಕುರಿತ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಸಚಿವರು ಮಾತನಾಡಿದರು.

ಕುವೆಂಪು ಅವರ ಸಾಹಿತ್ಯವನ್ನು ನಾನು ಓದಿದ್ದೇನೆ. ಮುಖ್ಯವಾಗಿ ಅವರ ಎರಡು ಕಾದಂಬರಿಗಳ ಜತೆಗೆ, ಅವರ ಆತ್ಮಕಥನ 'ನೆನಪಿನ ದೋಣಿಯಲ್ಲಿ' ಶ್ರದ್ಧೆಯಿಂದ ಓದಿದ್ದೇನೆ. ಆ ಕೃತಿಯನ್ನು ಕುವೆಂಪು ಅವರು ಹೃದಯದಿಂದ ಬರೆದಿದ್ದಾರೇನೋ ಅನ್ನುವಷ್ಟು ಅನನ್ಯವಾಗಿದೆ ಎಂದ್ರುವರು ಅಭಿಪ್ರಾಯಪಟ್ಟರು.

ಶಾಲಾ ಹಂತದಿಂದಲೇ ಭಗವದ್ಗೀತೆಯನ್ನು ಮಕ್ಕಳಿಗೆ ಬೋಧಿಸಬೇಕು. ಇದು ಅತ್ಯಂತ ಉತ್ತಮ ಶೈಕ್ಷಣಿಕ ಸುಧಾರಣಾ ಕ್ರಮವಾಗುತ್ತದೆ ಎಂದು ಕುಮಾರಸ್ವಾಮಿ ಅವರು ಪುನರುಚ್ಚರಿಸಿದರು. ಭಗವದ್ಗೀತೆಯನ್ನು ಬೋಧಿಸಬೇಕು ಎಂದು ಎಂದು ನಾನು ಹೇಳಿದ್ದು ರಾಜಕೀಯ ಉದ್ದೇಶ ಅಥವಾ ಯಾವುದೇ ಧರ್ಮ ಸಂಘರ್ಷ ಉಂಟು ಮಾಡುವುದಕ್ಕಲ್ಲ. ಉತ್ತಮ ಸಮಾಜ ನಿರ್ಮಾಣ ಮಾಡುವ ಅಗತ್ಯದ ದೃಷ್ಟಿಯಿಂದ ಹೇಳಿದ್ದೇನೆ ಎಂದು ಅವರು ಒತ್ತಿ ಹೇಳಿದರು.

ಪಠ್ಯದಲ್ಲಿ ಭಗವದ್ಗೀತೆಯನ್ನು ಅಳವಡಿಸುವಂತೆ ಕೋರಿ ಕೇಂದ್ರ ಶಿಕ್ಷಣ ಸಚಿವರಿಗೆ ಪತ್ರವನ್ನು ಕೂಡ ಬರೆದಿದ್ದೇನೆ.



ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿದರು.

ಅದನ್ನೇ ಕೆಲವರು ರಾಜಕೀಯಕ್ಕೆ ಬಳಕೆ ಮಾಡಿಕೊಳ್ಳುತ್ತಿರುವುದು ಸರಿಯಲ್ಲ ಎಂದು ಅವರು ನುಡಿದರು. ನಮಗೆ ಎಲ್ಲವೂ ಇದೆ, ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ಬೆಳೆಯುತ್ತಿದ್ದೇವೆ. ಆದರೆ ಮೌಲ್ಯಗಳ ವಿಷಯಕ್ಕೆ ಬಂದಾಗ ಪಾತಾಳಕ್ಕೆ ಹೋಗುತ್ತಿದ್ದೇವೆ. ಯಾಕೆ ಹೀಗೆ ಆಗುತ್ತಿದೆ ಎಂಬುದನ್ನು ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ಇವತ್ತು ಯಾರೇ ಆದರೂ ನೆಮ್ಮದಿಯಾಗಿ ನಿದ್ರೆ ಮಾಡುವ ಪರಿಸ್ಥಿತಿ ಇಲ್ಲ. ಅಂತಹ ಪ್ರಾಮಾಣಿಕತೆಯನ್ನು ಯಾರೂ ಹೊಂದಿಲ್ಲ. ಹಾಗಾದರೆ ಮುಂದಿನ ತಲೆಮಾರಿಗೆ ಏನು ಕೊಡಬೇಕು ಎಂಬುದನ್ನು ಪೋಷಕರು ತೀರ್ಮಾನ ಮಾಡಬೇಕು ಎಂದು ಸಚಿವರು ಸೂಚ್ಯವಾಗಿ ಹೇಳಿದರು.

ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ಡಾ. ನಿರ್ಮಲಾನಂದ ನಾಥ ಮಹಾಸ್ವಾಮೀಜಿಗಳು, ಮೈಸೂರಿನ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಮುಕ್ತಿದಾನಂದ ಜೀ ಮಹಜಾಜ್ ಅವರು, ಸ್ಫಟಿಕಪುರಿ ಮಹಾಸಂಸ್ಥಾನದ ಶ್ರೀ ನಂಜಾವಧೂತ ಮಹಾಸ್ವಾಮೀಜಿಗಳು, ಮಾದಾರ ಚೆನ್ನಯ್ಯ ಗುರುಪೀಠದ ಶ್ರೀ ಬಸವ ಮೂರ್ತಿ ಮಾದಾರ ಚೆನ್ನಯ್ಯ ಮಹಾಸ್ವಾಮೀಜಿಗಳು, ಬೇಲಿಮಠದ ಶ್ರೀ ಶಿವಾನುಭವ ಚರಮೂರ್ತಿ ಶಿವರುದ್ರ ಮಹಾಸ್ವಾಮಿಗಳು, ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನದ ಶ್ರೀ ನಿಶ್ಚಲಾನಂದನಾಥ ಮಹಾಸ್ವಾಮೀಜಿ ಅವರುಗಳು ದಿವ್ಯ ಸಾನ್ನಿಧ್ಯ ವಹಿಸಿದ್ದರು.

ರಾಜ್ಯದ ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ಸಂಸದ ಡಾ. ಸಿ.ಎನ್. ಮಂಜುನಾಥ್, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ನಾಗರಾಜ್, ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಹೆಚ್.ಕೆ. ರಾಮು ಮುಂತಾದವರು ಉಪಸ್ಥಿತರಿದ್ದರು.